

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 25 ಸೋಮವಾರ 2022

ಸಂಪುಟ: 43 | ಸಂಚಿಕೆ: 10 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ರಾಜ್ಯದಲ್ಲಿ ಕೋವಿಡ್ ಪ್ರಕರಣ ಹೆಚ್ಚಳ

ಬೆಂಗಳೂರು,ಏ.24-ರಾಜ್ಯದಲ್ಲಿ ಶನಿವಾರ 139 ಹೊಸ ಸೋಂಕು ಪ್ರಕರಣಗಳು ಪತ್ತೆಯಾಗಿದ್ದು, ಸಕ್ರಿಯ ಪ್ರಕರಣಗಳು ಸ್ಥಿರವಾಗಿ ಏರಿಕೆಯಾಗಿರುವುದು ಕೋವಿಡ್ 4ನೇ ಅಲೆ ಕುರಿತು ಆತಂಕ ಶುರುವಾಗುವಂತೆ ಮಾಡಿದೆ.

ಕಳೆದ ಬಾರಿ ರಾಜ್ಯದಲ್ಲಿ ಮಾ.24ರಂದು 100ಕ್ಕೂ ಹೆಚ್ಚು ಹೊಸ ಪ್ರಕರಣಗಳು ದಾಖಲಾಗಿತ್ತು. ಇದಾದ ಬಳಿಕ ಏ.21ರಂದು 100 ಪ್ರಕರಣಗಳು ದಾಖಲಾಗಿವೆ. ನಿನ್ನೆ ಪತ್ತೆಯಾಗಿರುವ 139 ಪ್ರಕರಣಗಳೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 39,46, 874ಕ್ಕೆ ಏರಿಕೆಯಾಗಿದೆ. ಏ.17ರಂದು 1,464ರಷ್ಟಿದ್ದ ಸಕ್ರಿಯ ಪ್ರಕರಣಗಳು ಶನಿವಾರ 1,679ಕ್ಕೆ ಏರಿಕೆಯಾಗಿದೆ. ಕೆಲವರು ಕೋವಿಡ್ 4ನೇ ಅಲೆ ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಡಿ.ರಂದೀಪ್ ಮಾತನಾಡಿ, ರಾಜ್ಯದಲ್ಲಿ ಬಿಎ 2.10 ಮತ್ತು ಬಿಎ 2.12 ಪತ್ತೆಯಾಗಿರವುದನ್ನು ಭಾರತೀಯ SARS-CoV-2 ಜೀನೋಮಿಕ್ಸ್ ಕನ್ಸೋರ್ಟಿಯಂ (INSACOG) ದೃಢೀಕರಿಸಿಲ್ಲ, ಈ ಕುರಿತು ಅಧಿಕೃತವಾಗಿ ವರದಿ ಮಾಡಿಲ್ಲ. ಹೊಸ ಸೋಂಕು ಪ್ರಕರಣಗಳು ಹೆಚ್ಚಾಗುತ್ತಿದ್ದು, ಚೇತರಿಸಿಕೊಳ್ಳುತ್ತಿರುವವರ ಸಂಖ್ಯೆ ಕುಸಿದಿದೆ. ಇದರಿಂದ ಸಕ್ರಿಯ ಪ್ರಕರಣಗಳು ಹೆಚ್ಚಾಗುತ್ತಿದೆ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಹೆಚ್ಚು ಸೋಂಕು ಪತ್ತೆಯಾಗುತ್ತಿರುವ ಪ್ರದೇಶಗಳ ಪೈಕಿ ಬೆಂಗಳೂರು ಮೊದಲ ಸ್ಥಾನದಲ್ಲಿಯೇ ಇದ್ದು, ರಾಜ್ಯದಲ್ಲಿ ನಿನ್ನೆ ಪತ್ತೆಯಾದ 139 ಹೊಸ ಪ್ರಕರಣಗಳ ಪೈಕಿ ಬೆಂಗಳೂರು ನಗರವೊಂದರಿಂದಲೇ 132 ಪ್ರಕರಣಗಳು ಪತ್ತೆಯಾಗಿದೆ.

ನೈಜೀರಿಯಾ ತೈಲ ಸಂಸ್ಕರಣಾ ಘಟಕದಲ್ಲಿ ಭಾರಿ ಸ್ಫೋಟ

100ಕ್ಕೂ ಹೆಚ್ಚು ಮಂದಿ ಸಾವು

ಪೋರ್ಟ್ ಹಾರ್ಕೋರ್ಟ್, ಏ.24-ದಕ್ಷಿಣ ನೈಜೀರಿಯಾದಲ್ಲಿ ಅಕ್ರಮ ತೈಲ ಸಂಸ್ಕರಣಾಗಾರದಲ್ಲಿ ಸ್ಫೋಟ ಸಂಭವಿಸಿದ್ದು, ಈ ವೇಳೆ ಘಟಕದಲ್ಲಿದ್ದವರ ಪೈಕಿ ಕನಿಷ್ಠ ನೂರು ಮಂದಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಸ್ಥಳೀಯ ಮಾಧ್ಯಮ ವರದಿಗಳ ಪ್ರಕಾರ ಸ್ಫೋಟದಲ್ಲಿ 100ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ. ಇದು ಆಫ್ರಿಕಾದ ಅತಿ ದೊಡ್ಡ ಕಚ್ಚಾತೈಲ ಉತ್ಪಾದಕ ನೈಜೀರಿಯಾದಲ್ಲಿ ಇತ್ತೀಚಿಗೆ ಸಂಭವಿಸಿರುವ ಅತಿ ದೊಡ್ಡ ದುರಂತವಾಗಿದೆ ಎನ್ನಲಾಗಿದೆ. ಅಕ್ರಮ ಸಂಸ್ಕರಣಾ ಘಟಕದಲ್ಲಿ ವ್ಯಾಪಾರಕ್ಕಾಗಿ ತೈಲ ಘಟಕದ ನಿರ್ವಾಹಕರು ಮತ್ತು ಗ್ರಾಹಕರು ಒಟ್ಟುಗೂಡಿದ್ದ ಸ್ಥಳದಲ್ಲಿ ಸ್ಫೋಟ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೇಶದ ಜಲ ಸಂರಕ್ಷಣೆಗೆ ಸಂಕಲ್ಪ ಮಾಡೋಣ

'ಮನ್ ಕೀ ಬಾತ್'ನಲ್ಲಿ ಪ್ರಧಾನಿ ನರೇಂದ್ರ ಮೋದಿ ಕರೆ



ನವದೆಹಲಿ, ಏ.24-ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಮಯದಲ್ಲಿ ದೇಶದ ಜಲ ಸಂರಕ್ಷಣೆಗೆ ಸಂಕಲ್ಪ ಮಾಡೋಣ ಎಂದು ರಾಷ್ಟ್ರದ ಜನತೆಗೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಮಾಸಿಕ ರೇಡಿಯೋ ಕಾರ್ಯಕ್ರಮ 'ಮನ್ ಕೀ ಬಾತ್'ನಲ್ಲಿ ದೇಶವನ್ನುದ್ದೇಶಿಸಿ ಮಾತನಾಡಿದ ಅವರು, ದೇಶದ ಸಂಕಲ್ಪಗಳಲ್ಲಿ ಜಲ ಸಂರಕ್ಷಣೆಯೂ ಒಂದಾಗಿದೆ. ನೀರು ಪ್ರತಿಯೊಂದು ಜೀವಿಗಳ ಮೂಲಭೂತ ಅಗತ್ಯ ಎಂದು ನಮ್ಮ ಧರ್ಮ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಇದು ನೈಸರ್ಗಿಕ ಸಂಪನ್ಮೂಲ. ವಾಲ್ಮೀಕಿ ರಾಮಾಯಣದಲ್ಲಿ ಜಲ ಸಂರಕ್ಷಣೆಗೆ ಒತ್ತು ನೀಡಲಾಗಿದೆ. ಹರಪ್ಪ ನಾಗರಿಕತೆಯ ಸಮಯದಲ್ಲಿ ನೀರನ್ನು ಉಳಿಸಲು ಸುಧಾರಿತ ಎಂಜಿನಿಯರಿಂಗ್ ವ್ಯವಸ್ಥೆಯೂ ಇತ್ತು ಎಂದರು.

ಜನರು ಕ್ಯಾಷ್‌ಲೆಸ್ ವ್ಯವಹಾರಕ್ಕೆ ಆದ್ಯತೆ ನೀಡಬೇಕು ಎಂದ ಅವರು, ಈಗ ಸಣ್ಣ ಹಳ್ಳಿಗಳು ಹಾಗೂ ಪಟ್ಟಣಗಳಲ್ಲಿ ಜನರು ಯುಪಿಐ ಬಳಸುತ್ತಿದ್ದಾರೆ. ಇದು ವ್ಯಾಪಾರಿಗಳು ಮತ್ತು ಗ್ರಾಹಕರಿಗೆ ಅನುಕೂಲಕರವಾಗಿದೆ. ಆನ್‌ಲೈನ್ ಪಾವತಿಯು ಡಿಜಿಟಲ್ ಆರ್ಥಿಕತೆಯನ್ನು ಅಭಿವೃದ್ಧಿಪಡಿಸುತ್ತಿದೆ. ದೇಶದಲ್ಲಿ ಪ್ರತಿದಿನ 20 ಸಾವಿರ ಕೋಟಿ ಮೊತ್ತದ ಆನ್‌ಲೈನ್ ವಹಿವಾಟು ನಡೆಯುತ್ತಿದೆ ಎಂದರು.

ಪಂಚಾಯತ್‌ಗಳ ಬಲದಲ್ಲಿ ಭಾರತದ ಸಮೃದ್ಧಿ ಅಡಗಿದೆ

ನವದೆಹಲಿ: ಪಂಚಾಯತ್‌ಗಳು ಭಾರತೀಯ ಪ್ರಜಾಪ್ರಭುತ್ವದ ಮೂಲ ಸ್ತಂಭವಾಗಿದ್ದು, ಅದರ ಶಕ್ತಿಯಲ್ಲಿ ನವ ಭಾರತದ ಸಮೃದ್ಧಿ ಅಡಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ರಾಷ್ಟ್ರೀಯ ಪಂಚಾಯತ್‌ರಾಜ್ ದಿನ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ಅವರು, ರಾಷ್ಟ್ರೀಯ ಪಂಚಾಯತ್ ರಾಜ್ ದಿನದಂದು ನಿಮಗೆಲ್ಲರಿಗೂ ಶುಭಾಶಯಗಳು. ಪಂಚಾಯತ್‌ಗಳು ಭಾರತೀಯ ಪ್ರಜಾಪ್ರಭುತ್ವದ ಮೂಲ ಸ್ತಂಭವಾಗಿದೆ, ಅವರ ಶಕ್ತಿಯಲ್ಲಿ ನವ ಭಾರತದ ಸಮೃದ್ಧಿ ಅಡಗಿದೆ ಎಂದು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಸ್ವಾವಲಂಬಿ ಭಾರತವನ್ನು ನಿರ್ಮಿಸಲು ನಮ್ಮ ಪಂಚಾಯತ್‌ಗಳನ್ನು ಮತ್ತಷ್ಟು ಸಬಲೀಕರಣಗೊಳಿಸಲು ನಾವು ಪ್ರತಿಜ್ಞೆ ಮಾಡೋಣ ಎಂದು ಹೇಳಿದ್ದಾರೆ.

ದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗೆ ನೀಡಿರುವ ಸಾಂವಿಧಾನಿಕ ಸ್ಥಾನಮಾನವನ್ನು ಆಚರಿಸಲು ಏಪ್ರಿಲ್ 24 ಅನ್ನು ಪಂಚಾಯತ್ ರಾಜ್ ಸಚಿವಾಲಯವು ಪ್ರತಿ ವರ್ಷ ರಾಷ್ಟ್ರೀಯ ಪಂಚಾಯತ್ ರಾಜ್ ದಿನವಾಗಿ ಆಚರಿಸುತ್ತದೆ ಎಂದಿದ್ದಾರೆ.

ಗಣಿತಕ್ಕೆ ಭಾರತ ನೀಡಿದ ಕೊಡುಗೆಯನ್ನು ಸ್ಮರಿಸಿದ ಮೋದಿ, ಗಣಿತಶಾಸ್ತ್ರವು ಭಾರತೀಯರಿಗೆ ಆಪ್ಯಾಯಮಾನವಾದ ವಿಷಯ. ಭಾರತೀಯರಾದ ನಮಗೆ ಗಣಿತವು ಎಂದಿಗೂ ಕಷ್ಟಕರವಾದ ವಿಷಯವಾಗಿರಲಿಲ್ಲ. ಇದಕ್ಕೆ ನಮ್ಮ ವೇದ ಗಣಿತವೂ ಕಾರಣ. ನಾಗರಿಕರು ತಮ್ಮ ಮಕ್ಕಳಿಗೆ ವೇದ ಗಣಿತ ಕಲಿಸಬೇಕು. ವೇದ ಗಣಿತದಿಂದ ಮಕ್ಕಳ ಆತ್ಮವಿಶ್ವಾಸ ವೃದ್ಧಿಯಾಗುವುದು ಮಾತ್ರವಲ್ಲದೇ, ಅವರ ವಿಶ್ಲೇಷಣಾ ಸಾಮರ್ಥ್ಯವು ವೃದ್ಧಿಯಾಗುತ್ತದೆ. ಮಕ್ಕಳಲ್ಲಿ ಗಣಿತದ ಬಗ್ಗೆ ಇರುವ ಅಲ್ಪ ಪ್ರಮಾಣದ ಭಯವನ್ನು ವೇದ ಗಣಿತ ಹೋಗಲಾಡಿಸುತ್ತದೆ. ಈಗ ವಿಜ್ಞಾನಿಗಳು 'ಎವೆರಿಥಿಂಗ್ ಥಿಯರಿ' ಬಗ್ಗೆ ಚರ್ಚಿಸುತ್ತಿದ್ದಾರೆ. ಅದರಲ್ಲಿ ಬ್ರಹ್ಮಾಂಡದಲ್ಲಿರುವ ಎಲ್ಲವನ್ನೂ ಒಗ್ಗೂಡಿಸಬಹುದಾಗಿದೆ. ಆದರೆ ಭಾರತವು ಗಣಿತಶಾಸ್ತ್ರಕ್ಕೆ 'ಸೊನ್ನೆ'ಯನ್ನು ಕೊಡುಗೆಯಾಗಿ ನೀಡಿದೆ. ಈ ಮೂಲಕ ನಾವು ಅನಂತತೆಯ ಕಲ್ಪನೆಯನ್ನು ಅನ್ವೇಷಿಸಿದ್ದೇವೆ. ವೇದಗಳಲ್ಲಿನ ಗಣಿತಶಾಸ್ತ್ರದ ಎಣಿಕೆಯು ಬಿಲಿಯನ್ ಮತ್ತು ಟ್ರಿಲಿಯನ್‌ಗಳನ್ನು ನೀಡುವಂತಹದ್ದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಇತ್ತೀಚೆಗಷ್ಟೇ ಉದ್ಘಾಟನೆಗೊಂಡ ಪ್ರಧಾನಮಂತ್ರಿ ಸಂಗ್ರಹಾಲಯವನ್ನು ಉಲ್ಲೇಖಿಸಿದ ಮೋದಿ, ದೇಶಕ್ಕೆ ಪ್ರಧಾನ ಮಂತ್ರಿ ವಸ್ತುಸಂಗ್ರಹಾಲಯ ಸಿಕ್ಕಿದೆ. ಅದನ್ನು ದೇಶದ ಜನರಿಗಾಗಿ ಸ್ಥಾಪಿಸಲಾಗಿದೆ. ನಾವು ನಮ್ಮ ಪ್ರಧಾನಿಗಳ ಕೊಡುಗೆಯನ್ನು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದಂತಹ ಸಂದರ್ಭದಲ್ಲಿ ಸ್ಮರಿಸುತ್ತಿದ್ದೇವೆ ಎಂಬುದು ಹೆಮ್ಮೆಯ ವಿಷಯ ಎಂದರಲ್ಲದೆ, ಮುಂಬರುವ ರಜಾ ದಿನಗಳಲ್ಲಿ ಯುವ ಜನರು ತಮ್ಮ ಸ್ನೇಹಿತರೊಂದಿಗೆ ವಸ್ತುಸಂಗ್ರಹಾಲಯಗಳಿಗೆ ಭೇಟಿ ನೀಡಬೇಕು ಎಂದರು.

ಹುಣಸೂರು ತಾಲೂಕು ಪಂಚಾಯಿತಿಗೆ ರಾಷ್ಟ್ರ ಪ್ರಶಸ್ತಿ

2ನೇ ಬಾರಿ ಪ್ರಶಸ್ತಿ ಪಡೆದ ರಾಜ್ಯದ ಏಕೈಕ ತಾಲೂಕು ಹೆಗ್ಗಳಿಕೆ



ಹುಣಸೂರು, ಏ.24(ಕೆಕೆ)- ಹುಣಸೂರು ತಾಲೂಕು ಪಂಚಾಯಿತಿ ತನ್ನ ಅಪ್ರತಿಮ ಸಾಧನೆಗಾಗಿ 2020-21ನೇ ಸಾಲಿನ ಕೇಂದ್ರ ಸರ್ಕಾರದ 'ಪಂಡಿತ್ ದೀನ ದಯಾಳ್ ಉಪಾಧ್ಯಾಯ ಸಶಕ್ತಿಕರಣ' ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿದ್ದು, 2ನೇ ಬಾರಿಗೆ ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆದ ರಾಜ್ಯದ ಏಕೈಕ ತಾಪಂ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ತಾಲೂಕಿನ ಬಿಳಿಕೆರೆ ಹೋಬಳಿ ಹಳೆಬೀಡು ಗ್ರಾಪಂ ಸಹ ತನ್ನ ಅಮೋಘ ಸಾಧನೆಗಾಗಿ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾಗಿದೆ. ಈ ಸಾಲಿನಲ್ಲಿ ರಾಜ್ಯದ ಹುಣಸೂರು ಹಾಗೂ ಸೂಳ್ಯ ತಾಪಂ ಮತ್ತು ಹುಣಸೂರು ತಾಲೂಕಿನ ಹಳೆಬೀಡು ಗ್ರಾಪಂ, ಮದ್ದೂರು ತಾಲೂಕಿನ ಗೊರವನಹಳ್ಳಿ ಗ್ರಾಪಂ ಹಾಗೂ ದಕ್ಷಿಣ ಕನ್ನಡದ 300 ಗ್ರಾಪಂಗಳು ರಾಷ್ಟ್ರ ಮಟ್ಟದ ಪ್ರಶಸ್ತಿಗೆ ಆಯ್ಕೆಯಾಗಿವೆ.

ಸಾಧನೆಯ ಶಿಖರ: ತಾಪಂ ಕಾರ್ಯನಿರ್ವಾಹಕರಾಗಿ ಹೆಚ್.ಡಿ.ಗಿರೀಶ್ ಬಂದ ನಂತರ ಶಾಸಕರು, ಸಂಸದರು ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳು, ಜಿಪಂನ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಶಿಸ್ತು, ಕ್ರಮಬದ್ಧ ● 8ನೇ ಪುಟಕ್ಕೆ

> “ತಾಪಂ ಇಓ ಗಿರೀಶ್ ಎಲ್ಲಾ ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳ ಸಹಕಾರದೊಂದಿಗೆ ಸರ್ಕಾರದ ಅನುದಾನದ ಕೊರತೆ ನಡುವೆ ಪಿಡಿಓಗಳು ಸೇರಿದಂತೆ ಎಲ್ಲರ ಒಗ್ಗೂಡುವಿಕೆಯಿಂದ ಕೆಲಸ ನಿರ್ವಹಿಸಿ ಅಭಿವೃದ್ಧಿಯ ಪರ್ವ ನಡೆಸಿದ್ದಾರೆ.
> -ಹೆಚ್.ಪಿ.ಮಂಜುನಾಥ್, ಶಾಸಕ

> “ತಾಲೂಕಿಗರ ಡಬ್ಬಲ್ ಪ್ರಶಸ್ತಿಗರಿ ನಮ್ಮನ್ನು ಮತ್ತಷ್ಟು ಕಾಯಕಕ್ಕೆ ಪ್ರೇರೇಪಿಸಿದೆ. ಶಾಸಕ, ಸಂಸದರು ಸೇರಿದಂತೆ ಎಲ್ಲ ಜನಪ್ರತಿನಿಧಿಗಳು, ಅಧಿಕಾರಿಗಳು, ಗ್ರಾಪಂಗಳ ಸಂಪೂರ್ಣ ಆಡಳಿತ ವರ್ಗ, ಪಿಡಿಓ, ಸಿಬ್ಬಂದಿ ಶಿಸ್ತುಬದ್ಧ ಕಾರ್ಯ ನಿರ್ವಹಣೆಯೇ ಈ ಪ್ರಶಸ್ತಿ ದಕ್ಕಿರುವುದಕ್ಕೆ ಸಾಕ್ಷಿ.
> -ಹೆಚ್.ಡಿ.ಗಿರೀಶ್, ತಾಪಂ ಇಓ

PSI ನೇಮಕಾತಿ ಪರೀಕ್ಷೆಗೆ ಬ್ಲೂಟೂತ್ ಮೂಲಕ ಉತ್ತರ

ಬೆಂಗಳೂರು, ಏ.24- PSI ನೇಮಕಾತಿ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಿದ್ದಾರೆ. ಪ್ರಕರಣದಲ್ಲಿ ಭಾಗಿಯಾಗಿರುವ ಕಿಂಗ್‌ಪಿನ್ ಸೇರಿ ಪ್ರಮುಖ ಆರೋಪಿಗಳನ್ನು ಬಂಧಿಸಿದ್ದಾರೆ. ಬ್ಲೂಟೂತ್‌ನಲ್ಲಿ ಆರೋಪಿತ ಅಭ್ಯರ್ಥಿಗಳಿಗೆ ಉತ್ತರ ರವಾನಿಸಿ ಅಕ್ರಮ ಎಸಗಿರುವ ಮತ್ತೊಂದು ಸ್ಫೋಟಕ ಅಂಶ ಬಯಲಾಗಿದೆ. ● 8ನೇ ಪುಟಕ್ಕೆ

ಆಪರೇಷನ್ ಕಮಲ ಸುಳಿವು ಕೊಟ್ಟ ಕಟೀಲ್

ಬೆಂಗಳೂರು, ಏ.24- ಚುನಾವಣೆವರೆಗೆ ಕಾದು ನೋಡಿ, ಹಲವರು ನಮ್ಮ ಪಕ್ಷಕ್ಕೆ ಬರುತ್ತಾರೆ. ಬಿಜೆಪಿಯಲ್ಲಿ ಬಹಳ ಜನ ಗೆಲ್ಲುವ ಅಭ್ಯರ್ಥಿಗಳಿದ್ದಾರೆ. ಹೀಗಾಗಿ ಹೆಚ್ಚು ಅವಶ್ಯಕತೆ ಬರಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದರು.



ಮುಂಬರುವ ಚುನಾವಣೆಗೆ ಬಿಜೆಪಿ ನಾಯಕರ ಪ್ರವಾಸ ಹಿನ್ನೆಲೆ ಬೆಂಗಳೂರು ನಗರ ಜಿಲ್ಲೆಯಲ್ಲಿ ನಿನ್ನೆಯಿಂದ ಕಟೀಲ್ ನೇತೃತ್ವದ ತಂಡ ಪ್ರವಾಸ ಶುರುಮಾಡಿದೆ. ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಕಟೀಲ್, ಹಳೇ ಮೈಸೂರು ಭಾಗದಲ್ಲಿ ತುಂಬಾ ಜನ ನಮ್ಮ ಪಕ್ಷ ಹಾಗೂ ಸಿಎಂ ಸಂಪರ್ಕದಲ್ಲಿ ಇದ್ದಾರೆ. ಎಲ್ಲವನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ನಾವು ತೆಗೆದುಕೊಂಡ ನಿರ್ಣಯದ ಮೇಲೆ ವರಿಷ್ಠರು ಸಹಕಾರ ಕೊಡುತ್ತಾರೆ ಎಂದರು.

> ಹಳೇ ಮೈಸೂರು ಭಾಗದಲ್ಲಿ ತುಂಬಾ ಜನ ಸಂಪರ್ಕದಲ್ಲಿದ್ದಾರೆ

ನಾನು ಮತ್ತು ಮುಖ್ಯಮಂತ್ರಿಗಳು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಪಕ್ಷ ಸೇರ್ಪಡೆಗೆ ಅಮಿತ್ ಶಾ ಬರ್ತಾರೆ ಅಂತ ಏನೂ ಇಲ್ಲ. ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಪಕ್ಷ ಸೇರ್ಪಡೆ ಮಾಡಿಕೊಳ್ಳುತ್ತೇವೆ. ಇದಕ್ಕೆ ರಾಷ್ಟ್ರೀಯ ನಾಯಕರ ಒಪ್ಪಿಗೆ ಪಡೆದುಕೊಳ್ಳುತ್ತೇವೆ. ಬೇರೆ ಬೇರೆ ಪಕ್ಷಗಳ ಹತ್ತಾರು ಜನ ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ. ಬೇರೆ ಬೇರೆ ಪಕ್ಷಗಳ ನಾಯಕರೂ ನಮ್ಮ ಸಂಪರ್ಕದಲ್ಲಿದ್ದಾರೆ. ಯಾರನ್ನು ತಗೋಬೇಕು, ಅಲ್ಲಿರುವ ಸಮಸ್ಯೆಗಳ ● 8ನೇ ಪುಟಕ್ಕೆ

ನಿಮ್ಮ ಅವಧಿಯಲ್ಲಿ ಮಂತ್ರಿಗಳು ಪರ್ಸೆಂಟೇಜ್ ತೆಗೆದುಕೊಂಡಿಲ್ಲ ಎಂದು ಪ್ರಮಾಣ ಮಾಡಿ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಿ.ಎಂ.ಇಬ್ರಾಹಿಂ ಸವಾಲು

● ಕಾಂಗ್ರೆಸ್‌ನವರು ಯಾವ ರೀತಿ ಪತಿವ್ರತೆಯರು ● ಕಾಂಗ್ರೆಸ್‌ಗೆ ಇದ್ದ ಮುಸ್ಲಿಂರ ಓಟು ನಾನು ತೆಗೆದುಕೊಳ್ಳುತ್ತೇನೆ ● ಮಹಾರಾಜರಿಗೆ ಕೊಡುವ ಗೌರವ ಸಿದ್ದರಾಮಯ್ಯಗೆ ಕೊಡಬೇಕಿಲ್ಲ ● ನನಗೆ ಆರ್‌ಎಸ್‌ಎಸ್, ಭಜರಂಗದಳದ ಬಗ್ಗೆ ಸಾಫ್ಟ್ ಕಾರ್ನರ್ ಇದೆ

ಮೈಸೂರು, ಏ.24(ಜಿಎ)- ಸಿದ್ದರಾಮಯ್ಯ ಅವರು ತಮ್ಮ ಅಧಿಕಾರದ ಅವಧಿಯಲ್ಲಿ ತಮ್ಮ ಮಂತ್ರಿಗಳು ಪರ್ಸೆಂಟೇಜ್ ತೆಗೆದುಕೊಂಡಿಲ್ಲ ಎಂದು ಪ್ರಮಾಣ ಮಾಡಲಿ ನೋಡೋಣ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಇಂದಿಲ್ಲಿ ಸವಾಲು ಹಾಕಿದ್ದಾರೆ.

ಜೆಡಿಎಸ್ ವತಿಯಿಂದ ಆಯೋಜಿಸಿದ್ದ ಇಫ್ತಾರ್ ಕೂಟದಲ್ಲಿ ಭಾಗವಹಿಸಲು ಮೈಸೂರಿಗೆ ಆಗಮಿಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಶೇ.40ರಷ್ಟು ಪರ್ಸೆಂಟೇಜ್ ವಿಚಾರದ ಬಗ್ಗೆ ನಾನು ಈ ಹಿಂದೆಯೇ ಕಲಾಪದಲ್ಲಿ ಧ್ವನಿ ಎತ್ತಿದ್ದೆ. ಅಗ ಯಾರೂ ನನ್ನ ಜೊತೆ ಧ್ವನಿ ಗೂಡಿಸಲಿಲ್ಲ. ಈಗ ಕಾಂಗ್ರೆಸ್‌ಗೆ ವಿಚಾರವಿಲ್ಲದೆ ರಾಜಕೀಯ ಮಾಡಲು ಇದನ್ನು ಬಳಸಿಕೊಳ್ಳುತ್ತಿದೆ. ಮೊದಲು ನಿಮ್ಮ ಪಕ್ಷವನ್ನು ಸರಿಪಡಿಸಿಕೊಳ್ಳಿ ಎಂದರು.

ಕಾಂಗ್ರೆಸ್‌ನವರು ಯಾವ ರೀತಿ ಪತಿವ್ರತೆಯರು, ನೀವು ಪರ್ಸೆಂಟೇಜ್ ತೆಗೆದುಕೊಂಡಿಲ್ಲವೆ, ನಾನು ನೋಡಿದ್ದೇನೆ. ಸಿದ್ದಾರಾಮಯ್ಯನವರಿಗೆ ಪರ್ಸೆಂಟೇಜ್ ವಿಚಾರ ಗೊತ್ತಿಲ್ಲವೇ. ನನ್ನ ಮಂತ್ರಿಗಳು ಯಾರೂ ಪರ್ಸೆಂಟೇಜ್ ತೆಗೆದುಕೊಳ್ಳುತ್ತಿರಲಿಲ್ಲ ಎಂದು ಪ್ರಮಾಣ ಮಾಡಲಿ ಎಂದ ಅವರು, ಜನಕ್ಕೆ ಎಲ್ಲಾ ಗೊತ್ತು. ಈಗ ಕಾಂಗ್ರೆಸ್ ಪಕ್ಷಕ್ಕೆ ಬರಗಾಲ, ಬಿಜೆಪಿಗೆ ಸುಗ್ಗಿಕಾಲ. ಇವರಿಬ್ಬರ ಮದ್ಯೆ ನಾವು ಕಾಲು ಹಾಕಿರುವುದಕ್ಕೆ ಅವರಿಗೆ ಕಳವಳ ಆರಂಭವಾಗಿ ಜೆಡಿಎಸ್ ಬಿಜೆಪಿ ಬಿ-ಟೀಂ ಎನ್ನುತ್ತಿದ್ದಾರೆ ಎಂದು ಹೇಳಿದರು.



ಅಂದು ಹೆಚ್.ಡಿ.ದೇವೇಗೌಡರ ಸರ್ಕಾರ ಉತ್ತಮವಾದ ಸರ್ಕಾರವಾಗಿತ್ತು. ಒಂದು ಕಿಕ್ ಬ್ಯಾಕ್ ಪ್ರಕರಣವಿರಲಿಲ್ಲ. ಅದನ್ನು ಮೆಚ್ಚಿ ಪಂಜಾಬ್ ರೈತರು ಭತ್ತಕ್ಕೆ ಅವರ ಹೆಸರಿಟ್ಟಿದ್ದಾರೆ. ಅಂತಹ ಸರ್ಕಾರ ತೆಗೆದು ನಮಗೆ ಬಿಜೆಪಿ ಬಿ ಟೀಂ ಎಂದು ಹೇಳುತ್ತಿದ್ದಾರೆ. ಕಾಂಗ್ರೆಸ್‌ನವರನ್ನು ಯಾರು ಟಾರ್ಗೆಟ್ ಮಾಡುತ್ತಿಲ್ಲ. ಅವರೇ ಕಾಲಿಗೆ ಸಿಕ್ಕಿ ಬೀಳುತ್ತಿದ್ದಾರೆ. ಬಿಜೆಪಿ ಅವರಿಗೆ ದುಡ್ಡು ಹೊಡೆದುಕೊಂಡು ಹೋಗುವ ಹೆಣ್ಣು ಮಕ್ಕಳ ಚಿಂತೆಯಾಗಿದೆ. ನಮಗೆ ಜಲಧಾರೆ ಚಿಂತೆ. ಇದನ್ನು ಹಾಳು ಮಾಡಬೇಕು ● 8ನೇ ಪುಟಕ್ಕೆ

ರಾಜ್ಯದ ಸಂಸದರು ಬದ್ಧತೆ ಪ್ರದರ್ಶಿಸದೆ ತಮಿಳುನಾಡಿಗೆ ಕಾವೇರಿ ನೀರು ಸಿಂಹಪಾಲು

ಜೆಡಿಎಸ್ ವರಿಷ್ಠರೂ ಆದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಗಂಭೀರ ಆರೋಪ

ತಿ.ನರಸೀಪುರ,ಏ.24(ಎಸ್‌ಕೆ)-ರಾಜ್ಯದ ಸಂಸದರು ರಾಜ್ಯದ ನದಿ ನೀರಿನ ಹಂಚಿಕೆಯಲ್ಲಿ ಬದ್ಧತೆ ಪ್ರದರ್ಶಿಸದ ಹಿನ್ನೆಲೆಯಲ್ಲಿ ತಮಿಳುನಾಡಿಗೆ ಕಾವೇರಿ ನೀರಿನ ಸಿಂಹಪಾಲು ದೊರಕುವಂತಾಯಿತು ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಆರೋಪಿಸಿದರು.

ಪಟ್ಟಣದ ಶ್ರೀಗುಂಜಾನರಸಿಂಹಸ್ವಾಮಿ ದೇವಾಲಯದ ಮುಂಭಾಗದ ಆವರಣದಲ್ಲಿ ನಡೆದ 'ಜನತಾ ಜಲಧಾರೆ' ಕಾರ್ಯಕ್ರಮದ ಸಮಾರೋಪದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯದ ನದಿ ನೀರು ಮುಂದಿನ ಪೀಳಿಗೆಗೆ ದೊರಕಬೇಕೆನ್ನುವ ಸದುದ್ದೇಶದೊಂದಿಗೆ ಜಲಧಾರೆ ಕಾರ್ಯಕ್ರಮ ನಡೆಸಲಾಗುತ್ತಿದೆ. ನನಗೆ ಈ 90ರ ಇಳಿ ವಯಸ್ಸಿನಲ್ಲೂ ಹೋರಾಟ ಮಾಡಿ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡಬೇಕೆನ್ನುವ ಮಹದಾಸೆ ಇದೆ. ಆದರೆ ಕೇಂದ್ರದಲ್ಲಿ ಸಂಸದರು ರಾಜ್ಯದ ನದಿ ನೀರಿನ ಹಂಚಿಕೆ ವಿಷಯದಲ್ಲಿ ಬದ್ಧತೆ ಪ್ರದರ್ಶಿಸದೆ ರಾಜ್ಯಕ್ಕೆ ಅನ್ಯಾಯವೆಸಗಿದರೆಂದು ಬೇಸರ ವ್ಯಕ್ತಪಡಿಸಿದರು.

ಬಿಜೆಪಿ, ಕಾಂಗ್ರೆಸ್ ಪಕ್ಷದಿಂದ ರಾಜ್ಯದ ಜನತೆಗೆ ಆಗುವ ಅನ್ಯಾಯ ತಡೆಗಟ್ಟುವ ಸಲುವಾಗಿ ಜನತೆ ಜಾಗೃತರಾಗಬೇಕು. ವಾಜಪೇಯಿ, ಮೋದಿ, ಮನಮೋಹನಸಿಂಗ್ ಅವರು ತಮ್ಮ ಪಕ್ಷ ಉಳಿಸಿಕೊಳ್ಳಲು ಏನು ಬೇಕೋ ಅದನ್ನು ಮಾಡಿ ರಾಜ್ಯದ ಜನತೆ ಹಿತಾಸಕ್ತಿ ಬಲಿಕೊಟ್ಟಿದ್ದಾರೆ ಎಂದರು.

ಪ್ರಾದೇಶಿಕ ಪಕ್ಷ ಜ್ಯಾತ್ಯಾತೀತ ಜನತಾದಳಕ್ಕೆ 2023ರಲ್ಲಿ ನಡೆಯುವ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಮತದಾರನು ಆಶೀರ್ವದಿಸುವ ಸಂಪೂರ್ಣ ವಿಶ್ವಾಸ ವ್ಯಕ್ತಪಡಿಸಿದ ದೇವೇಗೌಡರು, ರೈತಾಪಿ ವರ್ಗದ ಏಳಿಗೆಯೇ ನಮ್ಮ ಪಕ್ಷದ ಪ್ರಮುಖ ಧ್ಯೇಯವಾಗಿದೆ ಎಂದರು.

ನಾನು ಪ್ರಧಾನಿಯಾಗಿದ್ದ ವೇಳೆ ನಿರ್ಧರಿಸಿದ್ದ ಹಲವು ಮಹತ್ವದ ವಿಚಾರಧಾರೆಗಳನ್ನು ಜಾರಿ ಮಾಡುವ ಉದ್ದೇಶದೊಂದಿಗೆ ಕರ್ನಾಟಕದಲ್ಲಿ ಜನತಾ ಜಲಧಾರೆ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಕರ್ನಾಟಕದ ಮತದಾರರು ನಮ್ಮ ಜನಪರ ನಿರ್ಧಾರಗಳನ್ನು ಬೆಂಬಲಿಸುವ ನಂಬಿಕೆ ನಮಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


ಈ ಯೋಜನೆಯು ಗ್ರಾಮೀಣ ರೈತರ ನೀರಿನ ಬರ ನೀಗಲು ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ಕಾಲ ಮಿತಿಯೊಳಗೆ ಮುಗಿಸುವುದು. ರೈತರ ಉಪಯೋಗಕೋಸ್ಕರ ಹೊಸ ನೀರಾವರಿಗಳನ್ನು ಜಾರಿಗೆ ತರುವುದು. ಅಲ್ಲದೆ ರಾಜ್ಯದಲ್ಲಿ ಲಭ್ಯವಿರುವ ನೀರಾವರಿ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸುವುದು. ಕೇಂದ್ರ ಜಲ ಸಂಪನ್ಮೂಲ ಇಲಾಖೆಗೆ ರಾಜ್ಯದ ಪಾಲಿನ ನೀರನ್ನು ಹರಿಸುವಂತೆ ಸಮರ್ಥ ವಾದ ಮಂಡಿಸುವುದು ಆಗಿದೆ. ಹಾಗಾಗಿ ರಾಜ್ಯದ ರೈತರ ಬಾಳನ್ನು ಹಸನು ಮಾಡಲು ರಾಜ್ಯದ 224 ಕ್ಷೇತ್ರಗಳಲ್ಲೂ ಜೆಡಿಎಸ್ ಪಕ್ಷ ಬೆಂಬಲಿಸಬೇಕು ಎಂದು ಮನವಿ ಮಾಡಿದರು. ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ರಾಜಕೀಯವನ್ನು ಲಾಭದಾಯಕವಾಗಿ ● 8ನೇ ಪುಟಕ್ಕೆ

● 2023ಕ್ಕೆ ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ● ರಾಷ್ಟ್ರೀಯ ಜಲನೀತಿಯಿಂದ ರಾಜ್ಯಕ್ಕೆ ಅನ್ಯಾಯ ● ನೀರು ಹಂಚಿಕೆಯಲ್ಲಿ ಕೇಂದ್ರ ತಮಿಳುನಾಡು ಪರ



ತಿ.ನರಸೀಪುರದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನ ಮುಂಭಾಗ ಆಯೋಜಿಸಿದ್ದ ಜನತಾ ಜಲಧಾರೆ ಕಾರ್ಯಕ್ರಮವನ್ನು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಉದ್ಘಾಟಿಸಿದರು. ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಶಾಸಕ ಅಶ್ವಿನ್‌ಕುಮಾರ್ ಇತರರಿದ್ದಾರೆ.

> **ಮೇಕೆದಾಟು ಅಧಿಕಾರದ ಹಪಾಹಪಿ ಯಾತ್ರೆ**
> ಕಾಂಗ್ರೆಸ್ ಅಧಿಕಾರದಲ್ಲಿದ್ದ ವೇಳೆ ಮೇಕೆದಾಟು ಯೋಜನೆಯನ್ನು ಜಾರಿಗೆ ತರಲು ಪ್ರಯತ್ನಿಸಲಿಲ್ಲ. ಈಗ ಮೇಕೆದಾಟು ಆಣೆಕಟ್ಟು ನಿರ್ಮಾಣಕ್ಕೆ ಕಾಂಗ್ರೆಸ್ ಪಾದಯಾತ್ರೆ ಮಾಡುತ್ತಿದೆ. ಇದು ರಾಜ್ಯದ ರೈತರ ಕಾಳಜಿ ಅಲ್ಲ, ಬದಲಾಗಿ ಕಾಂಗ್ರೆಸ್ ಅಧಿಕಾರ ಪಡೆಯಲು ನಡೆಸುತ್ತಿರುವ ಷಡ್ಯಂತ್ರ ಆಗಿದೆ. ಅಲ್ಲದೆ ಬಿಜೆಪಿ ಮತ್ತು ಕಾಂಗ್ರೆಸ್ ರಾಜ್ಯಕ್ಕೆ ತಾರತಮ್ಯ ಎಸಗುತ್ತಿವೆ. ಆದ್ದರಿಂದ ಜನರು ಈ ಎರಡು ಪಕ್ಷಗಳ ರಾಜಕೀಯ ನಡೆಯ ಬಗ್ಗೆ ಜಾಗೃತರಾಗಬೇಕು.
> -ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ



ಶಿಸ್ತಿನೊಂದಿಗೆ ಸೇವಾ ಜ್ಯೋತಿ ಸೇರಿದರೆ ಜೀವನದಲ್ಲಿ ಏಳಿಗೆ ಸಾಧ್ಯ

ಸ್ಕೌಟ್ಸ್ ಅಂಡ್ ಗೈಡ್ಸ್‌ನ ಬೆಳ್ಳಿ ಹಬ್ಬದಲ್ಲಿ ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್ ಅಭಿಪ್ರಾಯ



ಮೈಸೂರಿನ ಜಯ ಚಾಮರಾಜೇಂದ್ರ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆ ಸಭಾಂಗಣದಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆಯ 25ನೇ ವಾರ್ಷಿಕೋತ್ಸವ (ಬೆಳ್ಳಿ ಹಬ್ಬ) ಭಾನುವಾರ ನಡೆಯಿತು.

ಮೈಸೂರು,ಏ.24(ಎಂಟಿವೈ)–ಶಿಸ್ತಿನ ಜೀವನದಲ್ಲಿ ಸೇವೆ ಎಂಬ ಜ್ಯೋತಿ ಸೇರಿದಾಗ ಮಾತ್ರ ಜೀವನದಲ್ಲಿ ಏಳಿಗೆ ಸಾಧಿಸಬಹುದು ಎಂದು ಮಾಜಿ ಸಂಸದ ಸಿಹೆಚ್.ವಿಜಯಶಂಕರ್ ಅಭಿಪ್ರಾಯಪಟ್ಟರು.

ಮೈಸೂರಿನ ಜಯಚಾಮರಾಜೇಂದ್ರ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆ ಸಭಾಂಗಣದಲ್ಲಿ ಭಾನವಾರ ನಡೆದ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆಯ 25ನೇ ವಾರ್ಷಿಕೋತ್ಸವ(ಬೆಳ್ಳಿ ಹಬ್ಬ) ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪ್ರತಿಯೊಬ್ಬರ ಜೀವನದಲ್ಲೂ ಶಿಸ್ತು ಬಹುಮುಖ್ಯವಾಗಿ ಇರಲೇಬೇಕಾಗಿದೆ. ಯಾರ ಜೀವನದಲ್ಲಿ ಶಿಸ್ತು ಇಲ್ಲವೋ ಅಂತಹವರು ವಿಶೇಷತೆಯನ್ನು ಸಾಧಿಸಲು ಸಾಧ್ಯವಾಗುವುದೇ ಇಲ್ಲ. ಶಿಸ್ತಿನ ಜೀವನ ನಡೆಸುವ ವೇಳೆ ಸೇವೆ ಎಂಬ ಜ್ಯೋತಿ ಸೇರಿದರೆ ಅಂತಹವರು ಇನ್ನಷ್ಟು ಪ್ರಗತಿಯನ್ನು ಹೊಂದುತ್ತಾರೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಮಹನೀಯರನ್ನು ಗಮನಿಸಿದಾಗ ಶಿಸ್ತು ಮತ್ತು ಸೇವಾ ಮನೋಭಾವ ಕಾಣಬಹುದು. ಈ ಎರಡು ಇದ್ದರೆ ಮಾತ್ರ ಸಾಧನೆ ಶಿಖರವೇರಲು ಸಾಧ್ಯವಾಗಲಿದೆ. ಶಿಸ್ತು ಬದುಕಿನ ಒಂದು ಭಾಗವಾಗದ್ದ ಸಂದರ್ಭದಲ್ಲಿ ಇನ್ನೊಂದು ಕಡೆ ಸೇವೆ ದೃಷ್ಟಿಕೋನ ಹೊಂದಿರಬೇಕು. ಇವೆರಡು ರಥದ ಎರಡು ಚಕ್ರವಿದ್ದಂತೆ. ರಥ ಮುಂದೆ ಸಾಗಬೇಕಾದರೆ ಎರಡೂ ಚಕ್ರಗಳು ಸಮಾನವಾಗಿ ಚಲಿಸಬೇಕಾಗುತ್ತದೆ. ಆ ನಿಟ್ಟಿನಲ್ಲಿ ಶಿಸ್ತು, ಸೇವೆ ಎರಡನ್ನು ಅಳವಡಿಸಿಕೊಳ್ಳದಿದ್ದರೆ ಜೀವನ ನಿಬಾಯಿಸುವುದು ಕಷ್ಟವಾಗಲಿದೆ. ಈ ನಿಟ್ಟಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ವಿದ್ಯಾರ್ಥಿಗಳಲ್ಲಿ ಶಿಸ್ತು ಬೆಳೆಸಿ, ಸೇವೆ ಮಾಡುವುದನ್ನು ಹೇಳಿಕೊಡುತ್ತಿದೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಮಾತನಾಡಿ, ಸಾಮಾನ್ಯವಾಗಿ ಶಾಲಾ ಅವಧಿಯಲ್ಲಿ ಮಕ್ಕಳ ವ್ಯಕ್ತಿತ್ವ ಬದಲಿಸುವ ಮಹತ್ತರ ಜವಾಬ್ದಾರಿಯನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ನಿರ್ವಹಿಸುತ್ತಿವೆ. ಮಕ್ಕಳನ್ನು ಉತ್ತಮ ದಾರಿಯತ್ತ ಸಾಗಲು ಹಾಗೂ ಅವರ ವ್ಯಕ್ತಿತ್ವ ಬೆಳೆಸಲು ಈ ಸಂಸ್ಥೆ ಶ್ರಮಿಸುತ್ತಿದೆ. 1947ರಲ್ಲೇ ಆರಂಭವಾದ ಈ ಸಂಸ್ಥೆ ವಿದ್ಯಾರ್ಥಿಗಳಲ್ಲಿ ಶಿಸ್ತು, ಆತ್ಮವಿಶ್ವಾಸ ಮೂಡಿಸುತ್ತಿದೆ. ಈ ಹಿಂದೆ ಮೈಸೂರು ವಿವಿಯಲ್ಲೂ ಸ್ಕೌಟ್ಸ್ ಮತ್ತು ಗೈಡ್ಸ್ ಆರಂಭಿಸಲು ಸಂಸ್ಥೆ ರಾಜ್ಯ ಘಟಕದ ಮುಖ್ಯ ಆಯುಕ್ತರಾಗಿರುವ ಪಿಜಿಆರ್ ಸಿಂಧ್ಯಾ ಅವರು ಸಲಹೆ ನೀಡಿದ್ದರು. ವಿವಿ ಮಟ್ಟದಲ್ಲಿ ಈ ಸಂಸ್ಥೆ ಆರಂಭವಾದರೆ ನಾನೇ ಮೊದಲಿಗನಾಗಿ ಸದಸ್ಯತ್ವ ಪಡೆಯುತ್ತೇನೆ ಎಂದು ಭರವಸೆ ನೀಡಿದರು.

'ಇಂಡಿಯಾ' ಬೇಡ, 'ಭಾರತ' ಬೇಕು

ಮೈಸೂರು: ಭಾರತಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ದೇಶಕ್ಕೆ ಬ್ರಿಟಿಷರು ಇಟ್ಟಿರುವ 'ಇಂಡಿಯಾ' ಹೆಸರನ್ನು ಪೂರ್ಣ ಪ್ರಮಾಣದಲ್ಲಿ ತೆಗೆದು ಹಾಕಿ, 'ಭಾರತ' ಎಂದು ಹೆಸರಿಡಬೇಕು ಎಂದು ಮಾಜಿ ಸಂಸದ ಸಿ.ಹೆಚ್. ವಿಜಯಶಂಕರ್ ಮನವಿ ಮಾಡಿದ್ದಾರೆ.

ದೇಶದ ಮೂಲ ಹೆಸರು ಭಾರತ ಎಂಬುದಾಗಿದೆ. ಈ ಹೆಸರಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಭರತನಾಳಿದ ಭೂಮಿ ಇದು. ಭರತ ಭೂಮಿಯಲ್ಲಿ ಇಬ್ಬರು 'ಭರತ'ರ ಚರಿತ್ರೆ ನಮ್ಮ ಸನಾತನ ಧರ್ಮದಲ್ಲಿದೆ. ಬಾಹುಬಲಿಯ ಸೋದರ ಭರತ ಒಬ್ಬರಾಗಿದ್ದರೆ, ಶ್ರೀರಾಮನ ಸಹೋದರ ಭರತ ಮತ್ತೊಬ್ಬ. ಇವರುಗಳು ಆದರ್ಶ ವ್ಯಕ್ತಿತ್ವದೊಂದಿಗೆ ಮಹತ್ತರ ಸಂದೇಶ ನೀಡಿದವರಾಗಿದ್ದಾರೆ. ಇಂತಹ ಚರಿತ್ರೆ ಇರುವ ನಮ್ಮ ದೇಶಕ್ಕೆ 'ಭಾರತ' ಎಂಬುದೇ ಶಾಶ್ವತ ಹೆಸರಾಗಬೇಕು. ನಮ್ಮ ಮೂಲ ಹೆಸರಲ್ಲದ 'ಇಂಡಿಯಾ' ಎಂಬ ಪದವನ್ನು ಎಲ್ಲೆಡೆ ತೆಗೆದು ಹಾಕಬೇಕು. ಆ ಮೂಲಕ ನಮ್ಮ ಸಂಸ್ಕೃತಿ, ಪರಂಪರೆಯನ್ನು ಎತ್ತಿ ಹಿಡಿಯಬೇಕು ಎಂದು ಮನವಿ ಮಾಡಿದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಕಳೆದ 25 ವರ್ಷಗಳಿಂದ ಉತ್ತಮವಾದ ಸೇವೆ ಸಲ್ಲಿಸುತ್ತಾ ಬಂದಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಶಿಸ್ತಿನ ಪಾಠ ಮಾಡುವ ಮೂಲಕ ಜೀವನ ರೂಪಿಸಿಕೊಳ್ಳುವುದನ್ನು ಕಲಿಸುತ್ತಿದೆ. ಈ ಸಂಸ್ಥೆ ಇನ್ನಷ್ಟು ಏಳಿಗೆ ಸಾಧಿಸುವಂತೆ ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಇದೇ ವೇಳೆ ಪ್ರಗತಿ ಗೈಡ್ ಗ್ರೂಪ್‌ನ ಕಾವ್ಯಶ್ರೀ ಎಂಬುವರು ಒಂದು ವ್ಹೀಲ್ ಚೇರ್ ಹಾಗೂ ಪಕ್ಷಿಗಳ ಪಾಲನಾ ಸಂಸ್ಥೆಗೆ ಆರ್ಥಿಕ ನೆರವು ನೀಡಿ ಗಮನ ಸೆಳೆದರು. ದಕ್ಷಿಣ ವಲಯದ ಸಹಾಯಕ ನಿರ್ದೇಶಕಿ ಕುಮುದಾ ಮೆಹ್ತಾ, ಗೈಡ್ ವಿಭಾಗದ ರಾಜ್ಯ ಆಯುಕ್ತೆ ರಾಧಾ ವೆಂಕಟೇಶ್, ಮೈಸೂರು ಜಿಲ್ಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಮುಖ್ಯ ಆಯುಕ್ತ ಪಿ.ಪಿಶ್ವನಾಥ್, ಕಾರ್ಯದರ್ಶಿ ಜಮೀಲ್, ಪ್ಯಾರಡೈಸ್ ಸ್ಕೌಟ್ಸ್ ಗ್ರೂಪ್ ಅಧ್ಯಕ್ಷ ಡಾ.ಬಿ.ಕೆ.ಅಜೇಯ್, ಗೈಡ್ ವಿಭಾಗದ ಜಿಲ್ಲಾ ಆಯುಕ್ತರು ಪುಷ್ಪವಲ್ಲಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಛೇಂಬರ್ಸ್ ಆಫ್ ಕಾಮರ್ಸ್‌ಗೆ ನಡೆದ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾದ ಮೈಸೂರು ಜಿಲ್ಲಾ ಹಾಪ್‌ಕಾಮ್ಸ್ ಸಂಸ್ಥೆ ಆಡಳಿತ ಮಂಡಳಿ ನಿರ್ದೇಶಕರಾದ ಡಿ. ಪದ್ಮನಾಭ ಮತ್ತು ಕೆ.ಆರ್.ನಗರ ತಾಲೂಕು ಹರದನಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರಾದ ಟಿ.ರಾಮೇಗೌಡ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ, ಕೆಹೆಚ್‌ಎಫ್ ಉಪಾಧ್ಯಕ್ಷ ಸೂರ್ಯಕುಮಾರ್, ನಿರ್ದೇಶಕರಾದ ರಘು, ವೈ.ಜಿ.ಮಹೇಂದ್ರ, ಎಸ್.ಆರ್.ಶ್ರೀನಿವಾಸ್, ಬಿ.ಎನ್.ಪ್ರಭುಸ್ವಾಮಿ, ಜೆ.ಮಹದೇವ, ಹೆಚ್.ಎಸ್.ಚಂದ್ರೇಗೌಡ, ಸೋಮಶೇಖರ್, ಕೆ.ಸುಜಾತ, ಎಸ್.ಜಿ.ನಳಿನಿ, ವ್ಯವಸ್ಥಾಪಕ ನಿರ್ದೇಶಕರಾದ ಎಂ.ಆರ್.ಚೇತನ್ ಉಪಸ್ಥಿತರಿದ್ದರು.

ಬೆಂಬಲ ಬೆಲೆಯಲ್ಲಿ ಭತ್ತ, ರಾಗಿ, ಜೋಳ ಖರೀದಿಸಲು ಆಗ್ರಹಿಸಿ ನಾಳೆ ಪ್ರತಿಭಟನೆ

ಮೈಸೂರು, ಏ.24(ಎಂಟಿವೈ)– ಭತ್ತ, ರಾಗಿ, ಜೋಳವನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ಪೂರ್ಣವಾಗಿ ಖರೀದಿಸಬೇಕು ಎಂದು ಆಗ್ರಹಿಸಿ ಏ. 26ರಂದು ಬೆಳಗ್ಗೆ 11ಕ್ಕೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ತಿಳಿಸಿದ್ದಾರೆ.

ಜಲದರ್ಶಿನಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿ ಪಂಪ್‌ಸೆಟ್‌ಗಳಿಗೆ ಹಗಲಿನ ವೇಳೆ ನಿರಂತರವಾಗಿ ವಿದ್ಯುತ್ ಕೊಡಬೇಕು, ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ವಿದ್ಯುತ್ ಸಂಪರ್ಕ ಕಡಿತ ಮಾಡಬಾರದು. ಸೂರ್ಯಕಾಂತಿ ಸೇರಿದಂತೆ ಇತರೆ ಬಿತ್ತನೆಬೀಜಗಳನ್ನು ಸಮರ್ಪಕವಾಗಿ ವಿತರಿಸಬೇಕು. ರಸಗೊಬ್ಬರದ ಬೆಲೆಯನ್ನು ಇಳಿಕೆ ಮಾಡಬೇಕು. ವ್ಯವಸಾಯದ ಭೂಮಿಗೆ ಹಕ್ಕುಪತ್ರ ನೀಡಿಲ್ಲ. ಇದಕ್ಕಾಗಿ 30 ಸಾವಿರ ಅರ್ಜಿಗಳು ಜಿಲ್ಲೆಯಲ್ಲಿ ಬಾಕಿ ಇವೆ. ಕೂಡಲೇ ಇವುಗಳನ್ನು ವಿಲೇವಾರಿ ಮಾಡಿ, ಹಕ್ಕುಪತ್ರ ನೀಡಬೇಕು ಎಂದು ಒತ್ತಾಯಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು ಮಾತನಾಡಿ, ಕಾಮಗಾರಿಗಳಿಗೆ ಶೇ.40 ಕಮಿಷನ್ ಕೊಡಬೇಕಿದೆ. ಯಾವುದೇ ಕಚೇರಿಯಲ್ಲೂ ಹಣ ಇಲ್ಲದೇ ಕೆಲಸ ನಡೆಯುತ್ತಿಲ್ಲ. ಈಗ ಆಡಳಿತ ವರ್ಗ ರಾಜಕಾರಣಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು. ಸಚಿವರು, ಮಾದರಿ ರೈತನ ಜಮೀನಿಗೆ ಹೋದರೆ ಏನೂ ಪ್ರಯೋಜನ ಇಲ್ಲ. ಎಲ್ಲ ಬೆಳೆಗಳಿಗೂ ನ್ಯಾಯಯುತ ಬೆಲೆ ಸಿಗುವಂತಾಗಬೇಕು. ಆಗ ಮಾತ್ರ ಸಮಸ್ಯೆಗೆ ಪರಿಹಾರ ದೊರಕುತ್ತದೆ. ಕೋಚನಹಳ್ಳಿಯಲ್ಲಿ ಬಂಡವಾಳಶಾಹಿಗಳು ಭೂ ಖರೀದಿಯಲ್ಲಿ ಮೋಸ ಮಾಡಿದ್ದು, ಈ ವಿವಾದವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಪರಿಹರಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಶಿರಮಳ್ಳಿ ಸಿದ್ಧಪ್ಪ, ಹೆಜ್ಜಿಗೆ ಪ್ರಕಾಶ್, ಪಿ.ಮರಂಕಯ್ಯ ಇದ್ದರು.

ಗಿಡ ನೆಡುವ ಕಾರ್ಯಕ್ರಮ

ಮೈಸೂರು,ಏ.24–ಹೆಚ್.ವಿ.ರಾಜೀವ್ ಸ್ನೇಹ ಬಳಗದಿಂದ ಏ.25ರಂದು ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಮತ್ತು ಶ್ರೀಮತಿ ಲಕ್ಷ್ಮಿ ರಾಜೀವ್ ಅವರ 25ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಪ್ರಯುಕ್ತ ಜಯನಗರ ಇಸ್ಕಾನ್ ಟೆಂಪಲ್ ಸಮೀಪದ ಉದ್ಯಾನವನದಲ್ಲಿ ಬೆಳಗ್ಗೆ 8 ಗಂಟೆಗೆ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಮುಖಂಡರಾದ ಯು.ಎಸ್.ಶೇಖರ್, ಪಾಲಿಕೆ ಸದಸ್ಯ ರಮೇಶ್, ಮಾಜಿ ಮೇಯರ್ ಭೈರಪ್ಪ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಓವರ್‌ಟೇಕ್ ಮಾಡಿದ ತಮಿಳುನಾಡಿನ ಬಸ್ ಜಖಂ, ಚಾಲಕನ ಮೇಲೆ ಹಲ್ಲೆ

ಮೈಸೂರು, ಏ.24(ಎಂಟಿವೈ)– ದ್ವಿಚಕ್ರ ವಾಹನವನ್ನು ಓವರ್‌ಟೇಕ್ ಮಾಡಿದ್ದರಿಂದ ಕುಪಿತಗೊಂಡ ನಾಲ್ವರು ದುಷ್ಕರ್ಮಿಗಳು ತಮಿಳುನಾಡಿನ ಸಾರಿಗೆ ಬಸ್ ಜಖಂಗೊಳಿಸಿ ಚಾಲಕನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಶನಿವಾರ ರಾತ್ರಿ ಕಾರಂಜಿಕೆರೆ ಬಳಿ ನಡೆದಿದೆ.

ನಾಲ್ವರು ದುಷ್ಕರ್ಮಿಗಳಿಂದ ಕೃತ್ಯ

ಶನಿವಾರ ರಾತ್ರಿ 10.30ರ ವೇಳೆಯಲ್ಲಿ ಮೈಸೂರಿನಿಂದ ತಮಿಳುನಾಡಿನ ಸೇಲಂಗೆ ತೆರಳುತ್ತಿದ್ದ ತಮಿಳುನಾಡು ಸಾರಿಗೆ ಸಂಸ್ಥೆ ಬಸ್ ದ್ವಿಚಕ್ರ ವಾಹನವನ್ನು ಓವರ್‌ಟೇಕ್ ಮಾಡಿ ಮುಂದೆ ಸಾಗಿದೆ. ಇದರಿಂದ ಆಕ್ರೋಶಗೊಂಡ ಬೈಕ್ ಸವಾರರು ಕಾರಂಜಿಕೆರೆ ಬಳಿ ಬಸ್ ಅಡ್ಡಗಟ್ಟಿ ಜಗಳಕ್ಕಿಳಿದಿದ್ದಾರೆ. ಅಲ್ಲದೇ ಚಾಲಕನ ಮೇಲೆ ಏಕಾಏಕಿ ಹಲ್ಲೆ ನಡೆಸಿದ್ದಾರೆ. ಬಸ್ಸಿನ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಕುಡಿದು ಮತ್ತಿನಲ್ಲಿದ್ದ ಅವರು, ಬಸ್ ಮುಂಭಾಗದ ಗ್ಲಾಸ್ ಅನ್ನು ಕಲ್ಲಿನಿಂದ ಹೊಡೆದು ಪುಡಿ ಪುಡಿ ಮಾಡಿದ್ದಾರೆ. ಚಾಲಕನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಈ ಎಲ್ಲ ದೃಶ್ಯವನ್ನು ಪ್ರಯಾಣಿಕರೊಬ್ಬರು ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸುತ್ತಿದ್ದಂತೆ ಆ ದುಷ್ಕರ್ಮಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ನಜರ್‌ಬಾದ್ ಠಾಣೆಯ ಪೊಲೀಸರು ಚಾಲಕನಿಗೆ ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದಾರೆ. ಪೊಲೀಸರು ತಮಿಳುನಾಡಿನ ಸಾರಿಗೆ ಅಧಿಕಾರಿಗಳನ್ನು ಸಂಪರ್ಕಿಸಿದ ಬಳಿಕ ಪ್ರಯಾಣಿಕರಿಗೆ ಪ್ರತ್ಯೇಕ ಬಸ್ ವ್ಯವಸ್ಥೆ ಕಲ್ಪಿಸಲಾಯಿತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ನಜರ್‌ಬಾದ್ ಪೊಲೀಸರು ನಾಲ್ವರು ದುಷ್ಕರ್ಮಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಮೈಸೂರಲ್ಲಿ 'ಪವಾಡ ಬಸವ'ನ ಆಕರ್ಷಕ ಮೆರವಣಿಗೆ; ಭಕ್ತರಿಂದ ಭಕ್ತಿ ಸಮರ್ಪಣೆ





ಮೈಸೂರು,ಏ.24(ಆರ್‌ಕೆಬಿ)–ಇಷ್ಟಾರ್ಥ ನೆರವೇರಿಸುವ ಕಲಿಯುಗದ ಬಸವಣ್ಣ ಎಂದೇ ಖ್ಯಾತವಾಗಿರುವ ಪವಾಡ ಬಸವನ ಮೆರವಣಿಗೆ ಮೈಸೂರಿನಲ್ಲಿ ಭಾನುವಾರ ನೆರವೇರಿತು. ಕುವೆಂಪುನಗರ ಬಸ್ ಡಿಪೋ ಬಳಿಯಿರುವ ತರಕಾರಿ ಅಂಗಡಿಯೊಂದರ ಬಳಿಯಿಂದ ಪ್ರಾರಂಭವಾದ ಮೆರವಣಿಗೆ ವಿವೇಕಾನಂದ ನಗರ ವೃತ್ತ, ನಿಮಿಷಾಂಬ ನಗರ ರಸ್ತೆ, ರಾಮಕೃಷ್ಣನಗರದ ಮುಖ್ಯ ರಸ್ತೆಯಿಂದ ಸುಯೋಗ್ ಆಸ್ಪತ್ರೆ ರಸ್ತೆ ಮೂಲಕ ರಾಮಕೃಷ್ಣಗರ ಜಿ ಬ್ಲಾಕ್‌ನಲ್ಲಿರುವ ಲಿಂಗಾಂಬುದಿ ಪಾರ್ಕ್ ಬಳಿಯಿರುವ ವೃಷಭ ದೇವಸ್ಥಾನದವರೆಗೆ ರಾಜಗಾಂಭೀರ್ಯದಿಂದ ಸಾಗಿದ ಪವಾಡ ಬಸವ, ಭಕ್ತರಿಗೆ ಆಶೀರ್ವದಿಸಿತು.

ರಾಮನಗರ ತಾಲೂಕಿನ ಕೈಲಾಂಚ ಹೋಬಳಿ ಕವಣಾಪುರ ಧರ್ಮಕ್ಷೇತ್ರ ಬಸವೇಶ್ವರ ದೇವಾಲಯದ ಪವಾಡ ಬಸವನಿಗಾಗಿಯೇ ವಿಶೇಷವಾಗಿ ಸುಸಜ್ಜಿತ ಬಸವ ರಥ ನಿರ್ಮಿಸಲಾಗಿದ್ದು, ಅದರಲ್ಲಿ ಆಗಮಿಸಿದ ಪವಾಡ ಬಸವನಿಗೆ ಕುವೆಂಪುನಗರದ ಬಸ್ ಡಿಪೋ ಬಳಿ ವಿಶೇಷ ಪೂಜೆ ಸಲ್ಲಿಸಲಾಯಿತು. ಅಲ್ಲಿಂದ ಹೊರಟ ಬಸವನಿಗೆ ಮೆರವಣಿಗೆ ಉದ್ದಕ್ಕೂ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು. ಅನೇಕ ಭಕ್ತರು ಕಷ್ಟ ಕಳೆಯಲು ವರ ಬೇಡಿ ಬಸವನ ಮುಂದೆ ಮಲಗಿದರು. ಅವರ ಪ್ರಾರ್ಥನೆಯನ್ನು ಮನ್ನಿಸಿ ಅವರನ್ನು ದಾಟಿದ ಬಸವ ಆಶೀರ್ವದಿಸುತ್ತಿದ್ದುದು ವಿಶೇಷವಾಗಿತ್ತು.

ಬಸವನ ಮೆರವಣಿಗೆ ಆರಂಭದಲ್ಲಿ ತರಕಾರಿ ರಘು ಮತ್ತು ಕುಟುಂಬದವರು, ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್ ಇನ್ನಿತರರು ಮೆರವಣಿಗೆ ಆರಂಭದಲ್ಲಿ ಭಾಗವಹಿಸಿ, ಪೂಜೆ ಸಲ್ಲಿಸಿ ಬಸವನ ಆಶೀರ್ವಾದ ಪಡೆದುಕೊಂಡರು.

ಮೆರವಣಿಗೆ ಲಿಂಗಾಂಬುದಿ ಪಾರ್ಕ್ ಬಳಿಯ ವೃಷಭ ದೇವಸ್ಥಾನದ ಬಳಿ ಅಂತ್ಯಗೊಂಡಿತು. ದೇವಸ್ಥಾನದಲ್ಲಿ ಪವಾಡ ಬಸವನಿಗೆ ಪೂಜಿಸಲಾಯಿತು. ಬಳಿಕ ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಿತು. ಇದರ ಅಂಗವಾಗಿ ಸುಯೋಗ್ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬರದಲ್ಲಿ ನೂರಕ್ಕೂ ಹೆಚ್ಚು ಮಂದಿಯ ಆರೋಗ್ಯ ತಪಾಸಣೆ ನಡೆಸಲಾಯಿತು.

ನಂತರ ನಡೆದ ವೇದಿಕೆ ಕಾರ್ಯಕ್ರಮಕ್ಕೆ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಚಾಲನೆ ನೀಡಿ, ಮಾತನಾಡಿ, ಲಿಂಗಾಂಬುದಿ ಪಾರ್ಕ್ ಸುತ್ತಮುತ್ತಲಿನ ಪ್ರದೇಶದಲ್ಲಿ ಓಡಾಡುತ್ತಿದ್ದ ಜನರ ಪ್ರೀತಿಯ ಬಸವ ಮರಣ ಹೊಂದಿತು. ಅದಕ್ಕೆ ಭಕ್ತರೆಲ್ಲರೂ ಕೂಡಿ ಅಂತ್ಯ ಸಂಸ್ಕಾರ ನೆರವೇರಿಸಿದ ಸ್ಥಳದಲ್ಲಿಯೇ 15 ವರ್ಷದ ಹಿಂದೆ ವೃಷಭ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಇಂದು ಈ ದೇವಸ್ಥಾನ ಬೇಡಿ ಬಂದ ನೂರಾರು ಭಕ್ತರಿಗೆ ಆಶೀರ್ವದಿಸುತ್ತಿದೆ. ಭಕ್ತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ ಎಂದು ಹೇಳಿದರು.

ಸುಯೋಗ್ ಆಸ್ಪತ್ರೆಯ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಆಧುನಿಕ ಜೀವನ ಶೈಲಿಯಿಂದ ಇಂದು ಸಕ್ಕರೆ ಕಾಯಿಲೆ ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಆಸ್ಪತ್ರೆಯಲ್ಲಿ ಸಕ್ಕರೆ ಕಾಯಿಲೆ ರೋಗಿಗಳ ಸಂಘ ಇದೆ. 500ಕ್ಕೂ ಹೆಚ್ಚು ಸದಸ್ಯರಿದ್ದಾರೆ. ಸಕ್ಕರೆ ಕಾಯಿಲೆ ಇರುವವರೆಲ್ಲರೂ ಈ ಸಂಘದ ಸದಸ್ಯರಾಗಿ ಪರಸ್ಪರ ವಿಚಾರ ವಿನಿಮಯದ ಮೂಲಕ ಸಕ್ಕರೆ ರೋಗವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಹಾಯಕವಾಗುತ್ತದೆ ಎಂದರು.

ಮಾಜಿ ಕಾರ್ಪೊರೇಟರ್, ಕಾಂಗ್ರೆಸ್ ಮುಖಂಡ ಪ್ರದೀಪ್ ಕುಮಾರ್ ಮಾತನಾಡಿ, ಜನರ ಮನಸ್ಸಿನಲ್ಲಿ ಸದಾ ಗೊಂದಲ, ಧರ್ಮದ ಗಲಾಟೆಗಳು ಟಿವಿ, ವಾಟ್ಸಾಪ್‌ಗಳಲ್ಲಿ ದಿನವೂ ಒಂದಿಲ್ಲೊಂದು ವಿಚಾರದಲ್ಲಿ ಧರ್ಮದ ಚರ್ಚೆಗಳೇ ಹೆಚ್ಚಾಗಿ ನಡೆಯುತ್ತಿದೆ. ಇದರಿಂದ ಸರ್ವ ಜನಾಂಗದ ಶಾಂತಿಯ ತೋಟದ ಶಾಂತಿ ಕದಡುವಂತಾಗಿದೆ. ಬಸವೇಶ್ವರರು ಹೇಳಿದಂತೆ ಮಾನವೀಯ ಮೌಲ್ಯ ಬಿಡದೇ ಅಳವಡಿಸಿಕೊಂಡರೆ ಧರ್ಮ, ಜಾತಿ, ಭೇದ ಮರೆಯಾಗಿ ಎಲ್ಲರೂ ಶಾಂತಿಯಿಂದಿರಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ತರಕಾರಿ ರಘು, ಕರ್ನಾಟಕ ಸೇನಾ ಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಮುಖಂಡರಾದ ಮಂಜುನಾಥ್, ಪ್ರಭಾಕರ್, ರವಿಕುಮಾರ್ ನಾಯಕ್, ಕೃಷ್ಣಯ್ಯ, ಮಣಿವನ್, ಮಹೇಶ್, ಯೋಗೇಶ್‌ಗೌಡ, ರಾಮನಾಯಕ, ಜವರಪ್ಪ, ಬಸವಪ್ಪ, ಮಲ್ಲಿಕಾರ್ಜುನಸ್ವಾಮಿ, ಜೆ.ರಘು, ಸೋಮಶೇಖರ್ ಇತರರಿದ್ದರು.

ಪವಾಡ ಬಸವನ ಸಿಟ್ಟು; ಕ್ಷಮೆ ಕೋರಿದ ಭಕ್ತರು

ನಿಗದಿತ ಸಮಯಕ್ಕೆ ಆಗಮಿಸಿದ್ದ ಬಸವನನ್ನು ಬರಮಾಡಿಕೊಳ್ಳಲು ವಿಳಂಬ ಮಾಡಿದ ಹಿನ್ನೆಲೆಯಲ್ಲಿ ಕೋಪಗೊಂಡಿದ್ದ ಬಸವ ನಿಗದಿತ ಸ್ಥಳದಲ್ಲಿ ಬಸವ ರಥದಿಂದ ಕೆಳಗಿಳಿಯಲು ವಿಳಂಬ ಮಾಡಿತು. ಆಗಿರುವ ತಪ್ಪಿಗೆ ಭಕ್ತರು ಬಸವನಿಗೆ ವಿಶೇಷ ಪೂಜೆ ಸಲ್ಲಿಸಿ ಕ್ಷಮೆ ಕೋರಿದರು. ಆದರೆ ಬಸವ ಅತ್ತಿತ ತಲೆ ಆಡಿಸುತ್ತಿದ್ದನೇ ಹೊರತು, ತನ್ನ ವಾಹನ ಬಸವ ರಥದಿಂದ ಕೆಳಗಿಯಲು ಮೀನಾ ಮೇಷ ಎಣಿಸಿತು.

ಒಂದು ಗಂಟೆಗೂ ಹೆಚ್ಚು ಕಾಲ ಬಸವನನ್ನು ಕೆಳಗಿಳಿದು ಮೆರಣಿಗೆಗೆ ಬರುವಂತೆ ಪ್ರಾರ್ಥಿಸಿದರು. ವಿಶೇಷ ಪೂಜೆ ಸಲ್ಲಿಸಿದರು. ಹಲವಾರು ಬಾರಿ ಈಡುಗಾಯಿ ಒಡೆದರು. ಕರ್ಪೂರ ಹಚ್ಚಿ ಭಕ್ತಿಯಿಂದ ಬೇಡಿದರು. ವೀರಗಾಸೆ ಕುಣಿತದವರೂ ಬಸವನನ್ನು ವಾಹನದಿಂದ ಕೆಳಗಿಳಿದು ಬರುವಂತೆ ಪ್ರಾರ್ಥಿಸಿದರು. ಇಷ್ಟೆಲ್ಲ ಒಂದು ಗಂಟೆಗೂ ಹೆಚ್ಚು ಕಾಲ ನಡೆದ ಬಳಿಕ ಸಮಾಧಾನಗೊಂಡ ಬಸವ, ತನ್ನ ವಾಹನದಿಂದ ಕೆಳಗಿಳಿದಾಗ ಭಕ್ತರು ಬಸವನಿಗೆ ಜೈಕಾರ ಹಾಕಿದರು. ಅಲ್ಲಿಂದ ಮೆರವಣಿಗೆ ಸಾಗಿತು.

ಮೈಸೂರಲ್ಲಿ ವರನಟ ಡಾ.ರಾಜ್ ಹುಟ್ಟುಹಬ್ಬ ಆಚರಣೆ





ಮೈಸೂರು, ಏ.24(ಎಂಟಿವೈ)– ವರನಟ ಡಾ.ರಾಜ್‌ಕುಮಾರ್ ಜನ್ಮ ದಿನದ ಹಿನ್ನೆಲೆಯಲ್ಲಿ ಮೈಸೂರಿನ ಹಲವೆಡೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರಿನ ಡಾ.ರಾಜ್‌ಕುಮಾರ್ ಉದ್ಯಾನವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮೈಸೂರು ಮಹಾನಗರ ಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಅವರು ಡಾ.ರಾಜ್‌ಕುಮಾರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪಾರ್ಚನೆ ಮಾಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಸತೀಶ್, ಡಾ.ರಾಜ್‌ಕುಮಾರ್ ಸಂಘದ ಜಿಲ್ಲಾಧ್ಯಕ್ಷರಾದ ಮಹಾದೇವ ಸ್ವಾಮಿ, ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಹರೀಶ್ ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು.

ಕನ್ನಡ ಸೇನೆ: ಮೈಸೂರಿನ ಕೆ.ಆರ್. ವೃತ್ತದಲ್ಲಿ ಡಾ.ರಾಜಕುಮಾರ್ ಕನ್ನಡ ಸೇನೆ ವತಿಯಿಂದ ಡಾ. ರಾಜ್‌ಕುಮಾರ್ ಜನ್ಮ ದಿನವನ್ನು ಆಚರಿಸಲಾಯಿತು. ಡಾ. ರಾಜ್ ಮಂಟಪದಲ್ಲಿ ಅಭಿಮಾನಿಗಳಿಗೆ ಸಿಹಿಯನ್ನು ವಿತರಿಸಿ ಡಾ.ರಾಜ್‌ಕುಮಾರ್ ಅಭಿನಯದ ಚಿತ್ರದ ಕ್ಯಾಲೆಂಡರ್‌ಗಳನ್ನು ಹಂಚಲಾಯಿತು. ಈ ಸಂದರ್ಭದಲ್ಲಿ ಡಾ. ರಾಜ್ ಸಂಬಂಧಿ ಎಸ್.ಎ.ಶ್ರೀನಿವಾಸ್, ನಟ ಜೈಪ್ರಕಾಶ್, ಡಾ.ರಾಜಕುಮಾರ್ ಕನ್ನಡ ಸೇನೆ ಅಧ್ಯಕ್ಷ ಮಹದೇವಸ್ವಾಮಿ, ನಟ ನಾಗರಾಜ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಡಾ. ರಾಜ್ ಎಲ್‌ಐಸಿ ಕುಟುಂಬದ ಸಿದ್ದಪ್ಪ, ಗೋವಿಂದರಾಜ್, ಪ್ಯಾಲೆಸ್ ಬಾಬು, ಪಾಲ್ಗೊಂಡಿದ್ದರು.


ಲೋಕ ಕಲ್ಯಾಣಾರ್ಥ ಮೇ 2ರಿಂದ ಮೈಸೂರಲ್ಲಿ ಅತಿರುದ್ರ ಮಹಾಯಾಗ

ಮೈಸೂರು, ಏ.24–ಮೈಸೂರಿನ ವಿಷ್ಣು ಪಾರಾಯಣ ಪ್ರತಿಷ್ಠಾನ, ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ಆಶ್ರಯದಲ್ಲಿ ಮೇ 2ರಿಂದ 6ರವರೆಗೆ ಖಿಲ್ಲೆ ಮೊಹಲ್ಲಾದಲ್ಲಿರುವ (ಗನ್ ಹೌಸ್ ಎದುರು) ವಿದ್ಯಾಶಂಕರ ಕಲ್ಯಾಣ ಮಂಟಪದಲ್ಲಿ ಲೋಕ ಕಲ್ಯಾಣಕ್ಕಾಗಿ ಪ್ರಾರ್ಥಿಸಿ ಅತಿರುದ್ರ ಮಹಾಯಾಗವನ್ನು ಏರ್ಪಡಿಸಲಾಗಿದೆ.

ಮಂತ್ರಾಲಯದ ಶ್ರೀ ರಾಘವೇಂದ್ರಸ್ವಾಮಿ ಮಠದ ಪೀಠಾಧಿಪತಿಗಳಾದ ಶ್ರೀ ಸುಬುದೇಂದ್ರ ತೀರ್ಥ ಶ್ರೀಪಾದಂಗಳವರು, ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಮತ್ತು ಶ್ರೀ ಅರ್ಜುನ ಅವಧೂತರು ದಿವ್ಯ ಸಾನಿಧ್ಯ ವಹಿಸಲಿದ್ದು, ನೂರಾರು ಋತ್ವಿಕರು ಭಾಗವಹಿಸುವರು. ವೇದಬ್ರಹ್ಮ ಶ್ರೀ ಶ್ರೀನಿವಾಸ ಗುರುಗಳ ನೇತೃತ್ವದಲ್ಲಿ ಅತಿರುದ್ರ ಮಹಾಯಾಗ ನಡೆಯಲಿದೆ.

ಅಂದು ಬೆಳಗ್ಗೆ 6 ಗಂಟೆಗೆ ಶೋಭಾಯಾತ್ರೆಯೊಂದಿಗೆ ಮಹಾಯಾಗವು ಆರಂಭವಾಗಲಿದ್ದು, ಶ್ರೀಗಳ ಸಾನಿಧ್ಯದಲ್ಲಿ ದೀಪಾರಾಧನೆ ನೆರವೇರಿಸಿ, ವೈದಿಕ ಧ್ವಜಾರೋಹಣ, ಗೋಪೂಜೆ, ಮಹಾ ಸಂಕಲ್ಪ, ಅಂಕುರಾರ್ಪಣೆಯೊಂದಿಗೆ ವಿವಿಧ ಕಾರ್ಯಕ್ರಮಗಳು ಜರುಗಲಿವೆ ನಂತರ ವೇದಿಕೆ ಕಾರ್ಯಕ್ರಮಗಳು ನಡೆಯಲಿದೆ. ಪ್ರತಿ ನಿತ್ಯ ಬೆಳಗ್ಗೆ ಗಣಪತಿ ಪೂಜೆಯೊಂದಿಗೆ ಕಾರ್ಯಕ್ರಮಗಳು ಆರಂಭಗೊಂಡು ಉಪನ್ಯಾಸ, ನವಗ್ರಹ ಹೋಮ, ನಕ್ಷತ್ರ ಹೋಮ, ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಹೋಮ–ಹವನ ನಡೆಯಲಿದೆ. ಕಾರ್ಯಕ್ರಮದಲ್ಲಿ ಸಮಾಜದ ಗಣ್ಯರು, ಚಲನಚಿತ್ರ ನಟರು, ಕಿರುತೆರೆ ನಟ–ನಟಿಯರು ಸೇರಿದಂತೆ ಅಪಾರ ಗುರು ಬಂಧುಗಳು ಭಾಗವಹಿಸಲಿದ್ದು, ಪ್ರತಿ ನಿತ್ಯ ಪ್ರಸಾದದ ವ್ಯವಸ್ಥೆ ಮಾಡಲಾಗಿರುತ್ತದೆ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.04.2022 ಸೋಮವಾರ, ಮಳೆ ನಕ್ಷತ್ರ: ಅಶ್ವಿನಿ 14.04.2022 ರಿಂದ 26.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ
ತಿಥಿ: ದಶಮೀ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ:** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 17ನೇ ವಾರ್ಷಿಕ ಘಟಿಕೋತ್ಸವ, ಅಧ್ಯಕ್ಷತೆ: ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಉಪಸ್ಥಿತಿ: ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ಘಟಿಕೋತ್ಸವ ಭಾಷಣ: ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ನಿರ್ದೇಶಕರಾದ ಎ.ಜಿ.ಬಸವರಾಜು, ಗೌರವ ಡಾಕ್ಟರೇಟ್ ಪದವಿ ಪ್ರದಾನ: ರಾಷ್ಟ್ರೀಯ ಶಿಕ್ಷಣ ಸಮಿತಿ ಗೌರವ ಕಾರ್ಯದರ್ಶಿ ಎ.ವಿ.ಎಸ್. ಮೂರ್ತಿ, ಬೆಂಗಳೂರಿನ ಟಾಟಾ ಗ್ಲೋಬಲ್ ಸಂಪನ್ಮೂಲ ನಿರ್ವಹಣಾ ಸಂಸ್ಥೆ ಉಪಾಧ್ಯಕ್ಷರಾದ ಈ.ಎಸ್.ಚಕ್ರವರ್ತಿ, ವಿಆರ್‌ಎಲ್ ಸಮೂಹ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಆನಂದ್ ಸಂಕೇಶ್ವರ, ಉಪಸ್ಥಿತಿ: ರಾಜ್ಯ ಮುಕ್ತ ವಿವಿ ಕುಲಪತಿ ಡಾ.ಎಸ್.ವಿದ್ಯಾಶಂಕರ್ ಸ್ಥಳ: ಘಟಿಕೋತ್ಸವ ಭವನ ಕರಾಮುವಿವಿ, ಸಮಯ: ಬೆಳಗ್ಗೆ 11.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ:** ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾಯೋಜನೆ ಹಾಗೂ ಗೊಟಗೋಡಿ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ಸಂಯುಕ್ತಾಶ್ರಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರಚಾರ ಅಭಿಯಾನದ ಅಂಗವಾಗಿ ಸಂವಿಧಾನ ಓದು ವಿಶ್ವವಿದ್ಯಾನಿಲಯ ಮಟ್ಟದ ಒಂದು ದಿನದ ಕಾರ್ಯಾಗಾರ, ವಿಶೇಷ ಉಪನ್ಯಾಸ: ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಹೆಚ್.ಎಂ. ರಾಜಶೇಖರ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ಸ್ಥಳ: ಸಾಹುಕಾರ್ ಚನ್ನಯ್ಯ ರಸ್ತೆಯ ಎನ್‌ಎಸ್‌ಎಸ್‌ಭವನ, ಮೈಸೂರು ವಿಶ್ವವಿದ್ಯಾನಿಲಯ, ಸಮಯ: ಬೆಳಗ್ಗೆ 11ಕ್ಕೆ

■ **ಮಧುರ ಗಾನ ಕಲಾವೃಂದ:** ಮಧುರ ಗಾನ ಕಲಾ ವೃಂದದದಿಂದ 15ನೇ ಎರಡು ನಕ್ಷತ್ರಗಳ ರಸ ಸಂಜೆ ಕಾರ್ಯಕ್ರಮ 'ಎರಡು ನಕ್ಷತ್ರಗಳು' ವಿಶೇಷ ಸಂಚಿಕೆ ಪುಸ್ತಕ ಬಿಡುಗಡೆ ಸಮಾರಂಭ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಮಯ: ಸಂಜೆ 5.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ "ಸಂಗ್ರಾಮದ ಸ್ಮೃತಿಗಳು" ಮೈಸೂರು ಸಂಸ್ಥಾನದ ಹೋರಾಟಗಾರರ ನೆನಪುಗಳ ಮಾಲೆ ಪ್ರಸ್ತುತಿ: ದಿವಾಕರ ಹೆಗಡೆ, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿ ಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಅಮೃತ ನಿತಿನ್ ಶಾಸ್ತ್ರಿ, ಸಿ.ವಿಶ್ವನಾಥ್, ವ್ಯಾಖ್ಯಾನ: ಕೆ.ಎಲ್.ಪದ್ಮಿನಿ ಹೆಗಡೆ, 7.15 ತ್ಯಾಜ್ಯ ನಿಭಾಯಿಸುವ ರೀತಿ "ಮನೆ ಬಾಗಿಲಿಗೆ ಸಮಗ್ರ ಮಾಹಿತಿ" ಪ್ರಾಯೋಜಿತ ಕಾರ್ಯಕ್ರಮ, 7.45 ನಿತ್ಯ ವಿಜ್ಞಾನ: ಪ್ರಾಯೋಜಿತ ಕಾರ್ಯಕ್ರಮ, 9.05 "ಯಕ್ಷ ಸಂಪದ" ಯಕ್ಷಗಾನದ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ: ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಕಾರ್ಯಕ್ರಮ, ನಿರ್ಮಾಣ ಮತ್ತು ಪ್ರಸ್ತುತಿ: ದಿವಾಕರ ಹೆಗಡೆ, 9.35 ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ ಆಕಾಶವಾಣಿಯೊಂದಿಗೆ", 10.05 ಖೇಲೋ ಇಂಡಿಯಾ ಯೂನಿವರ್ಸಿಟಿ ಕ್ರೀಡಾಕೂಟದ ಭಾನುವಾರದ ಆಟಗಳ ಅವತರಣಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ಭಕ್ತಿಗೀತೆಗಳು: ಡಾ. ಕೆ. ಶ್ರೀನಿವಾಸ್, ಕವಿತಾ ಕೃಷ್ಣಮೂರ್ತಿ, 12.45 ನಮ್ಮ ಆರೋಗ್ಯ: ಸ್ಟಿರಾಯ್ಡ್ ಉಪಯೋಗ ಕುರಿತು ಡಾ. ರೇಖಾ ವಿ. ಭಟ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು: ವಿಕಾಸ್ ಕೆ. ವಸಿಷ್ಠ, 3.00 ಮೈಸೂರು ಎ. ಚಂದನ್‌ಕುಮಾರ್: ವೇಣುವಾದನ, 4.00 ಮಹಿಳಾರಂಗ: ಮಹಿಳೆಯರಲ್ಲಿ ಉದ್ಯಮಶೀಲತೆ: ರುಡ್‌ಸೆಟ್‌ನ ನಿರ್ದೇಶಕರಾದ ವಿಜಯಕುಮಾರ್ ನಗನಾಳ ಅವರೊಡನೆ ಮಾತುಕತೆ, 4.30 ಝೇಂಕಾರ: ಮಕ್ಕಳ ಗೀತಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: "ಕಿಸಾನ್‌ವಾಣಿ" ತೋಟಗಾರಿಕೆ ಬೆಳೆಗಳಲ್ಲಿ ಬೋರ್ಡೋ ದ್ರಾವಣದ ಪ್ರಾಮುಖ್ಯತೆ ಕುರಿತು ಡಾ. ಜಿ. ನಾಗೇಶ್ ಅವರೊಡನೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 10.00 ನಾಟಕ: "ರಾಮಧಾನ್ಯ ಪ್ರಕರಣ", ಕನಕದಾಸರ ಪ್ರಸ್ತುತಿ: ಬಹುಮುಖಿ ಸಾಂಸ್ಕೃತಿಕ ವೇದಿಕೆ ಮೈಸೂರು, 10.30 ಸವಿನೆನಪು.

ಮೈಸೂರು ಮೃಗಾಲಯದಲ್ಲಿ ಮೊದಲ ಹಂತದ ಬೇಸಿಗೆ ಶಿಬಿರ ಮುಕ್ತಾಯ



ಮೈಸೂರು,ಏ.24(ಎಸ್‌ಬಿಡಿ)– ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಆಯೋಜಿಸಿದ್ದ ಮೊದಲ ತಂಡದ ಮಕ್ಕಳ 10 ದಿನಗಳ ಬೇಸಿಗೆ ಶಿಬಿರ ಇಂದು ಮುಕ್ತಾಯವಾಯಿತು.

ಈ ವೇಳೆ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ಪಠ್ಯೇತರ ಚಟುವಟಿಕೆಗಳ ಮೂಲಕ ಮಕ್ಕಳ ವಿಕಸನ ಸಾಧ್ಯ. ಈ ನಿಟ್ಟಿನಲ್ಲಿ ಬೇಸಿಗೆ ಶಿಬಿರ ಉತ್ತಮ ವೇದಿಕೆಯಾಗಿದೆ. ಮೃಗಾಲಯದಲ್ಲಿರುವ ಪ್ರಾಣಿ–ಪಕ್ಷಿಗಳ ಬಗ್ಗೆ ತಿಳಿದುಕೊಳ್ಳುವುದರ ಜೊತೆಗೆ ಪರಿಸರ ಹಾಗೂ ಜೀವ ವೈವಿಧ್ಯತೆ ಸಂರಕ್ಷಣೆಯ ಮಹತ್ವವನ್ನು ಅರಿತಿದ್ದಾರೆ. ಇಲ್ಲಿಯಂತೆ ರಾಜ್ಯದ ಎಲ್ಲಾ ಮೃಗಾಲಯಗಳಲ್ಲೂ ಬೇಸಿಗೆ ಶಿಬಿರ ಆಯೋಜಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ ಮಾತನಾಡಿ, 10 ದಿನಗಳ ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಪ್ರಾಣಿ–ಪಕ್ಷಿ ಹಾಗೂ ಪರಿಸರದ ಬಗ್ಗೆ ಜಾಗೃತಿ ಮೂಡಿಸಲಾಗಿದೆ. ರಂಗನತಿಟ್ಟು ಪಕ್ಷಿಧಾಮಕ್ಕೂ ಮಕ್ಕಳನ್ನು ಕರೆದೊಯ್ದು ಅಲ್ಲಿನ ಪಕ್ಷಿ ಸಂಕುಲ ಹಾಗೂ ಪ್ರಕೃತಿ ಸೊಬಗಿನ ಬಗ್ಗೆ ಮಾಹಿತಿ ನೀಡಲಾಗಿದೆ. ಮೇ 1ರಿಂದ ಎರಡನೇ ತಂಡದ ಮಕ್ಕಳಿಗೆ ಶಿಬಿರ ಪ್ರಾರಂಭವಾಗಲಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಮಕ್ಕಳಿಗೆ ಅವಕಾಶ ಮಾಡಿಕೊಡುವುದಾಗಿ ಹೇಳಿದರು.

ರಿಂಗ್ ರಸ್ತೆಯಲ್ಲಿ ಕಸ : ವಿಶೇಷ ತಂಡ ರಚನೆ

- ಶ್ರೀರಾಂಪುರ ಪಟ್ಟಣ ಪಂಚಾಯಿತಿಯಿಂದ ಕ್ರಮ
- ಕಸ ಹಾಕುವವರಿಗೆ ಸ್ಥಳದಲ್ಲೇ 500 ರೂ. ದಂಡ

ಮೈಸೂರು,ಏ.24(ಜಿಎ)– ರಿಂಗ್ ರಸ್ತೆಯಲ್ಲಿ ಕಸ ಸುರಿಯುವವರಿಗೆ ಕಡಿವಾಣ ಹಾಕಲು ಮೈಸೂರಿನ ಶ್ರೀರಾಂಪುರ ಪಟ್ಟಣ ಪಂಚಾಯಿತಿ ವಿಶೇಷ ತಂಡ ರಚನೆ ಮಾಡಿದೆ.

ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿದ್ದು, ಸಾರ್ವಜನಿಕರು ಮಾತ್ರ ಸ್ವಚ್ಛತೆಗೆ ಕೈ ಜೋಡಿಸುತ್ತಿಲ್ಲ ಸಮೀಪದ ರಿಂಗ್ ರಸ್ತೆಯ ಬದಿಗೆ ವಾಹನಗಳ ಮೂಲಕ ಕಸ ತಂದು ಸುರಿಯುತ್ತಿದ್ದಾರೆ. ಇದಕ್ಕಾಗಿ ಶ್ರೀರಾಂಪುರ ಪಟ್ಟಣ ಪಂಚಾಯಿತಿ ವತಿಯಿಂದ ವಿಶೇಷ ತಂಡ ರಚನೆ ಮಾಡಿದ್ದು, ಕಸ ಹಾಕುವವರಿಗೆ ಸ್ಥಳದಲ್ಲೇ 500 ರೂ. ಗಳ ದಂಡ ವಿಧಿಸಲಾಗುತ್ತದೆ ಎಂದು ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಶ್ರೀಧರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಬಡಾವಣೆ ವ್ಯಾಪ್ತಿಯಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಜನ ವಾಸವಾಗಿದ್ದಾರೆ. ಪ್ರತಿದಿನ ಮನೆ ಬಳಿ ಕಸದ ವಾಹನ ಬಂದು, ಪೌರಕಾರ್ಮಿಕರು ಕಸ ಸಂಗ್ರಹಿಸುತ್ತಾರೆ. ಆದರೂ ಕೆಲವರು ರಸ್ತೆ ಬದಿಯಲ್ಲಿ ಕಸ ಬಿಸಾಡಿ ಹೋಗುತ್ತಿದ್ದಾರೆ. ಶ್ರೀರಾಂಪುರ ಪಟ್ಟಣ ಪಂಚಾಯಿತಿ ವತಿಯಿಂದ ಸ್ವಚ್ಛತೆಗಾಗಿ ಹತ್ತಾರು ಜಾಗೃತಿ ಕಾರ್ಯಕ್ರಮ ಮಾಡಿ ಅರಿವು ಮೂಡಿಸಿ. ಕಸ ಎಸೆಯದಂತೆ ಮನವಿ ಮಾಡಿದರೂ ಏನೂ ಪ್ರಯೋಜನವಿಲ್ಲ. ಸಾರ್ವಜನಿಕರು ಕಸ ಎಸೆದು ಹೋಗುತ್ತಿದ್ದಾರೆ. ಆದ್ದರಿಂದ ಎಚ್ಚರಿಕೆ ನೀಡಿ ಸ್ಥಳದಲ್ಲಿ ದಂಡ ವಸೂಲು ಮಾಡುತ್ತಿದ್ದೇವೆ. ಈಗಾಗಲೇ ತಂಡಗಳು ಕಾರ್ಯನಿರ್ವಹಿಸುತ್ತಿದ್ದು ಅದರಂತೆ ಏ.22 ರಂದು ಮಧ್ಯಾಹ್ನ ರಂಗಪ್ಪ ಎಂಬುವರು ಸ್ಕೂಟರ್‌ನಲ್ಲಿ ಬಂದು ಕಸ ಸುರಿಯುತ್ತಿರುವುದು ಕಂಡು 500 ರೂ. ದಂಡ ವಿಧಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸದಭಿರುಚಿಯ ಚಿತ್ರಗಳ ನೀಡಿ ಕನ್ನಡಿಗರ ಹೃದಯ ಗೆದ್ದ ಡಾ.ರಾಜ್‌ಕುಮಾರ್



ಮೈಸೂರು, ಏ.24(ಆರ್‌ಕೆಬಿ)– ಕನ್ನಡದ ವರನಟ ಡಾ.ರಾಜ್‌ಕುಮಾರ್ ಜನ್ಮದಿನದ ಅಂಗವಾಗಿ ಕೆಆರ್‌ಎಸ್ ರಸ್ತೆಯ ಗೋಕುಲಂನಲ್ಲಿರುವ ಕೆಂಪೀರೇಗೌಡರ ಉದ್ಯಾನವನದಲ್ಲಿ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್‌ರವರು ಡಾ.ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ನಂತರ ಮಾತನಾಡಿದ ಅವರು, ಡಾ.ರಾಜ್‌ಕುಮಾರ್ ಅವರು ಪೌರಾಣಿಕ, ಸಾಮಾಜಿಕ ಚಿತ್ರಗಳಲ್ಲಿ ನಟಿಸಿ ಇಡೀ ಕುಟುಂಬದ ಎಲ್ಲರೂ ಒಟ್ಟಾಗಿ ಕುಳಿತು ಚಿತ್ರ ನೋಡುವಂತಿತ್ತು. ಅವರ ಚಿತ್ರಗಳಲ್ಲಿ ಒಂದಲ್ಲ ಒಂದು ಸಾಮಾಜಿಕ ಕಳಕಳಿ, ಸಂದೇಶ ಇರುತ್ತಿತ್ತು. ಮೌಲ್ಯಯುತ ಸದಭಿರುಚಿಯ ಚಿತ್ರಗಳನ್ನು ನೀಡಿ ಕನ್ನಡಿಗರ ಹೃದಯಗೆದ್ದ ರಾಜ್‌ಕುಮಾರ್ ಜೀವನ ನಮಗೆಲ್ಲರಿಗೂ ಆದರ್ಶವಾಗಿದೆ ಎಂದರು.

ಈ ಸಂದರ್ಭದಲ್ಲಿ ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎಚ್.ಹರೀಶ್‌ಕುಮಾರ್, ಆಟೋ ಸಿದ್ಧರಾಮು, ಎಚ್.ಸಿ.ಮೃತ್ಯುಂಜಯ (ಜಯಣ್ಣ), ಕೆ.ಎಂ.ದಿನೇಶ್, ಶಾಮಿಯಾನ ಶ್ರೀನಿವಾಸ್, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಕುಮಾರ್, ಬಿ.ಕುಮಾರ್, ರವಿ, ಚಾಮ, ರಮೇಶ್, ಸತೀಶ್ ಇನ್ನಿತರರು ಉಪಸ್ಥಿತರಿದ್ದರು.

ಇಂದು ಮುದ್ರಾಪ್ರಾಣಾಯಾಮ ಶಿಬಿರ

ಮೈಸೂರು, ಏ. 23– ಧನ್ಯ ಸ್ಕೂಲ್ ಆಫ್ ಯೋಗ ಹಾಗೂ ಮುದ್ರಾಪ್ರಾಣಾಯಾಮ ರಿಸರ್ಚ್ ಸೆಂಟರ್ ವತಿಯಿಂದ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಮಹಿಳಾ ಸಮಾಜದಲ್ಲಿ ಏ. 25 ರಂದು ಬೆಳಗ್ಗೆ 6.30 ರಿಂದ 7.30 ಹಾಗೂ ಸಂಜೆ 6.30 ರಿಂದ 7.30 ರವರೆಗೆ ಮುದ್ರಾಪ್ರಾಣಾಯಾಮ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9945614565, 9141096102 ಸಂಪರ್ಕಿಸಬಹುದು.

ಟಿ.ವಿ.ನೋಡುತ್ತಿದ್ದ ಮಹಿಳೆ ಹೃದಯಾಘಾತದಿಂದ ಸಾವು

ಮೈಸೂರು, ಏ.24–ಟಿವಿ ನೋಡುತ್ತಾ ಕುಳಿತ್ತಿದ್ದ ಮಹಿಳೆಯೊಬ್ಬರು ತೀವ್ರ ಹೃದಯಾಘಾತದಿಂದ ಕುಸಿದು ಮನೆಯಲ್ಲಿಯೇ ಸಾವನ್ನಪ್ಪಿರುವ ಘಟನೆ ಭಾನುವಾರ ಬೆಳಗ್ಗೆ ನಗರದ ರಾಮಾನುಜ ರಸ್ತೆಯ 15ನೇ ಕ್ರಾಸ್‌ನಲ್ಲಿ ಸಂಭವಿಸಿದೆ.

ಆರೋಗ್ಯ ಇಲಾಖೆಯ ನಿವೃತ್ತ ಆರೋಗ್ಯ ನಿರೀಕ್ಷಕ ನಂಜಪ್ಪಗೌಡರ ಪತ್ನಿ ರಂಗಲಕ್ಷ್ಮಿ (57) ಎಂಬುವರೇ ಸಾವನ್ನಪ್ಪಿದವರು. ಮೂಲತಃ ಹೆಚ್.ಡಿ.ಕೋಟೆ ತಾಲೂಕಿನ ಸರಗೂರಿನವರಾದ ರಂಗಲಕ್ಷ್ಮಿ ಅವರು ನಂಜಪ್ಪಗೌಡರನ್ನು ವಿವಾಹವಾಗಿ ರಾಮಾನುಜ ರಸ್ತೆಯಲ್ಲಿ ವಾಸವಾಗಿದ್ದರು. ಇಂದು ಬೆಳಗ್ಗೆ ಮನೆಯಲ್ಲಿ ಟಿವಿ ನೋಡುತ್ತಿದ್ದಾಗ, ತೀವ್ರ ಹೃದಯಾಘಾತವಾಗಿ ಸ್ಥಳದಲ್ಲೇ ಸಾವನ್ನಪ್ಪಿದವರು ಎಂದು ಹೇಳಲಾಗಿದೆ.

ಮನೆಯಲ್ಲಿದ್ದ ಮಕ್ಕಳು ಮತ್ತು ಸೊಸೆಯಂದಿರಿಗೆ ವಿಷಯ ತಿಳಿದು, ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ದರಾದರೂ, ರಂಗಲಕ್ಷ್ಮಿ ಸಾವನ್ನಪ್ಪಿರುವ ವಿಷಯವನ್ನು ವೈದ್ಯರು ಖಚಿತಪಡಿಸಿದರು ಎನ್ನಲಾಗಿದೆ. ರಂಗಲಕ್ಷ್ಮಿ ಅವರು ಪತಿ, ಮೂವರು ಪುತ್ರರು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ (ಏ.25) ಬೆಳಗ್ಗೆ 10.30 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶತಾಯುಷಿ ನಂಜಮ್ಮ ನಿಧನ



ಮೈಸೂರು, ಏ.24– ಮೈಸೂರು ತಾಲೂಕು ಪರಸಯ್ಯನಹುಂಡಿ ನಿವಾಸಿ, ಶತಾಯುಷಿ ನಂಜಮ್ಮ(107) ಅವರು ಭಾನುವಾರ ನಿಧನರಾದರು. ಇವರು ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಭಾನುವಾರ ಸಂಜೆ ಸ್ವಗ್ರಾಮದಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ರಾಜ್ ಗಾನ ಸಮರ್ಪಣೆ ಕಾರ್ಯಕ್ರಮ

ಕುವೆಂಪು ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಿಸಿದ ನಂತರ ನಾನು ಸ್ವೀಕರಿಸುವೆ ಎಂದಿದ್ದರು ಡಾ.ರಾಜ್

ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಸ್ಮರಣೆ

ಮೈಸೂರು, ಏ.24(ಎಸ್‌ಬಿಡಿ)– ಮೊದಲು ರಾಷ್ಟ್ರಕವಿ ಕುವೆಂಪು ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಿಸಿದ ನಂತರ ನಾನೂ ಸ್ವೀಕರಿಸುತ್ತೇನೆ ಎಂದು ವರನಟ ಡಾ.ರಾಜ್‌ಕುಮಾರ್ ಸರ್ಕಾರಕ್ಕೆ ಮನವಿ ಮಾಡಿದ್ದರು ಎಂದು ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಸ್ಮರಿಸಿದರು.

ಡಾ.ರಾಜ್‌ಕುಮಾರ್ 93ನೇ ಜಯಂತಿ ಅಂಗವಾಗಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಗಾನ ವೈದ್ಯಲೋಕ ಸಂಸ್ಥೆ ಸಹಯೋಗದಲ್ಲಿ ವಿಜಯನಗರದ ಜಿಲ್ಲಾ ಸಾಹಿತ್ಯ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ 'ಡಾ.ರಾಜ್ ಗಾನ ಸಮರ್ಪಣೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ 'ಕರ್ನಾಟಕ ರತ್ನ' ಪ್ರಶಸ್ತಿ ನೀಡುವ ಸಂಬಂಧ ಡಾ.ರಾಜ್‌ಕುಮಾರ್ ಅವರನ್ನು ಭೇಟಿಯಾದಾಗ 'ಕುವೆಂಪು ಅವರಿಗೆ ಈ ಪ್ರಶಸ್ತಿ ನೀಡಿದ್ದೀರಾ?' ಎಂದು ಪ್ರಶ್ನಿಸಿದ್ದರು. ಇಲ್ಲ ಎಂದು ತಿಳಿದು 'ಮೊದಲು ಕುವೆಂಪು ಅವರಿಗೆ ಈ ಪ್ರಶಸ್ತಿ ಸಲ್ಲಬೇಕು, ನಂತರ ನಾನು ಸ್ವೀಕರಿಸುತ್ತೇನೆ' ಎಂದಿದ್ದರು ಎಂದು ತಿಳಿಸಿದರು.

ಕುವೆಂಪು ಅವರ ಬಗ್ಗೆ ಡಾ.ರಾಜ್‌ಕುಮಾರ್ ಅಪಾರ ಗೌರವ–ಪ್ರೀತಿ ಹೊಂದಿದ್ದರು. 1993ರ ಜನವರಿಯಲ್ಲಿ ಮೈಸೂರಿನ ಕಲಾಮಂದಿರದಲ್ಲಿ ನಾವು ಏರ್ಪಡಿಸಿದ್ದ 'ಕುವೆಂಪು ನಾಟಕೋತ್ಸವ'ವನ್ನು ರಾಜ್‌ಕುಮಾರ್ ಉದ್ಘಾಟಿಸಿದ್ದರು. ಅದಕ್ಕೂ ಮುನ್ನ ಕುವೆಂಪು ಅವರನ್ನು ಅವರ ನಿವಾಸದಲ್ಲಿ ಭೇಟಿಯಾದಾಗ ಡಾ.ರಾಜ್‌ಕುಮಾರ್ ಉದ್ದಂಡ ನಮಸ್ಕಾರ ಮಾಡಿದ್ದರು. ಪಾರ್ವತಮ್ಮ ಅವರೊಂದಿಗೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ರಾಜ್‌ಕುಮಾರ್ ಅವರು ಸುಜಾತ ಹೋಟೆಲ್‌ನಲ್ಲಿ ತಂಗಿದ್ದರು. ಸ್ವಂತ ಖರ್ಚಿನಲ್ಲೇ ಪ್ರಯಾಣ ಹಾಗೂ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದರು.



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಗಾನ ವೈದ್ಯಲೋಕ ಸಂಸ್ಥೆ ಸಹಯೋಗದಲ್ಲಿ ವಿಜಯನಗರದ ಜಿಲ್ಲಾ ಸಾಹಿತ್ಯ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ 'ಡಾ.ರಾಜ್ ಗಾನ ಸಮರ್ಪಣೆ' ಕಾರ್ಯಕ್ರಮದಲ್ಲಿ ಡಾ.ರಾಜ್‌ಕುಮಾರ್ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ಆದರೆ ಈಗಿನ ಕೆಲ ನಟರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿದರೆ ಎಷ್ಟು ಲಕ್ಷ ಕೊಡುತ್ತೀರಿ? ಎಂದು ಕೇಳುತ್ತಾರೆ. ಡಾ.ರಾಜ್‌ಕುಮಾರ್ ಅವರ ಸರಳತೆ, ಆದರ್ಶ ಎಲ್ಲರಿಗೂ ಮಾದರಿ ಎಂದು ಬಣ್ಣಿಸಿದರು.

ಮೈಸೂರಿನ ಪುರಭವನದಲ್ಲಿ 'ಎಚ್ಚಮ್ಮ ನಾಯಕ' ನಾಟಕ ಪ್ರದರ್ಶನವಿತ್ತು. ನಾನೂ ಅದರಲ್ಲಿ ಪಾತ್ರ ನಿರ್ವಹಿಸಿದ್ದೆ. ಡಾ.ರಾಜ್‌ಕುಮಾರ್ ಅವರು ಸಂಪೂರ್ಣವಾಗಿ ನಾಟಕ ವೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದ್ದರು. ಆಗಲೇ ನಾನು ಅವರನ್ನು ಮೊದಲ ಬಾರಿ ಭೇಟಿಯಾಗಿದ್ದು. ಜನಪ್ರಿಯತೆಯ ಉತ್ತುಂಗಕ್ಕೇರಿದರೂ ರಾಜ್‌ಕುಮಾರ್ ಅವರಲ್ಲಿ ಸರಳತೆ ಮರೆಯಾಗಿರಲಿಲ್ಲ. ವಿಶ್ವ ಚಿತ್ರರಂಗದಲ್ಲಿ ಜಾನಪದ, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹೀಗೆ ಎಲ್ಲಾ ಬಗೆಯ ಪಾತ್ರಗಳನ್ನು ನೈಜತೆಯಿಂದ ಸಮರ್ಥವಾಗಿ ಅಭಿನಯಿಸಿದ ನಟ, ಸಾವಿರಾರು ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದ ಗಾಯಕ ಡಾ.ರಾಜ್‌ಕುಮಾರ್ ಮಾತ್ರ. ಅವರು ಅಭಿನಯಿಸಿದ 208 ಚಿತ್ರಗಳನ್ನು ಹೊಸ ಕಲಾವಿದರು ವೀಕ್ಷಿಸಿದರೆ ಉತ್ತಮ ಮಾರ್ಗದರ್ಶನ, ಅನುಭವ ದೊರಕುತ್ತದೆ ಎಂದು ಅಭಿಪ್ರಾಯಿಸಿದರು.

ರಾಜ್‌ಕುಮಾರ್ 'ಯುಗಪುರುಷ': ಹಿರಿಯ ರಂಗ ನಿರ್ದೇಶಕ ಪ್ರೊ.ಹೆಚ್.ಎಸ್.ಉಮೇಶ್ ಮಾತನಾಡಿ, ಡಾ.ರಾಜ್‌ಕುಮಾರ್ ಅವರು ಚಿತ್ರರಂಗದ 'ಯುಗಪುರುಷ'. ಆ ಕಾಲಘಟ್ಟದ ಘಟನೆ, ಸಂಗತಿಗಳಿಗೆ ತಮ್ಮ ಸೃಜನಶೀಲ ನಟನೆ ಮೂಲಕ ಸ್ಪಂದಿಸಿದರು. ಅವರು ಸಿನಿಮಾ ನಟ ಹಾಗೂ ಗಾಯಕನಾಗಿ ಮಾತ್ರ ಉಳಿಯದೆ ಹಲವು ಭಕ್ತಿ ಗೀತೆಗಳ ಮೂಲಕ ಸಂತನಾದರು. ಅವರಲ್ಲಿ ಸಮಗ್ರತೆ ಇತ್ತು. ಡಾ.ರಾಜ್‌ಕುಮಾರ್ ನೇತೃತ್ವ ವಹಿಸಿದ್ದರಿಂದ ಗೋಕಾಕ್ ಚಳವಳಿಗೆ ಶಕ್ತಿ ಬಂದಿತು. ಕನ್ನಡದ ಶಕ್ತಿಯೂ ಹೆಚ್ಚಿತು. ಕನ್ನಡದ ಧ್ವನಿಯಾಗಿರುವ ಡಾ.ರಾಜ್‌ಕುಮಾರ್ ವ್ಯಕ್ತಿ ವಿವರ ಕಾಲಕ್ರಮೇಣ ಮರೆಯಾಗಬಹುದು. ಆದರೆ ಅವರ ಶಕ್ತಿ ಉಳಿಯುತ್ತದೆ. ಅವರು ಅಮರತ್ವದ ಸ್ವರೂಪ ಎಂದು ತಿಳಿಸಿದರು.

ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್(ಸಿಪಿಕೆ), ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ನಿಕಟ ಪೂರ್ವ ಅಧ್ಯಕ್ಷ ಹಾಗೂ ಗಾನ ವೈದ್ಯ ಲೋಕ ಸಂಸ್ಥೆ ಗೌರವಾಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಸಂಸ್ಥೆ ಅಧ್ಯಕ್ಷ ಡಾ.ಟಿ.ರವಿಕುಮಾರ್ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಡಾ.ವೈ.ಡಿ.ರಾಜಣ್ಣ, ಡಾ.ಟಿ.ರವಿಕುಮಾರ್, ಡಾ.ಎ.ಎಸ್.ಪೂರ್ಣಿಮಾ, ಡಾ.ಪಿ.ಚಂದ್ರಶೇಖರ್, ಶ್ರೀಲತಾ ಮನೋಹರ್, ಡಾ.ಶ್ಯಾಮಪ್ರಸಾದ್, ಸಿ.ಎಸ್.ವಾಣಿ, ಡಾ.ಶಿವಕುಮಾರ್ ಮತ್ತಿತರರು ಡಾ.ರಾಜ್‌ಕುಮಾರ್ ಅವರ ಹಲವು ಗೀತೆಗಳನ್ನು ಪ್ರಸ್ತುತಪಡಿಸಿದರು.

ಏ.27ಕ್ಕೆ ಕಿಂಗ್ಸ್ ಕೋರ್ಟ್ ಮಾಯಾಸ್ ಉದ್ಘಾಟನೆ



ಮೈಸೂರು, ಏ.24(ಜಿಎ)– ಮೈಸೂರಿನ ಪ್ರಸಿದ್ಧ ಹೋಟೇಲ್‌ಗಳಲ್ಲಿ ಒಂದಾದ ಕಿಂಗ್ಸ್ ಕೋರ್ಟ್ ಏ.27 ರಿಂದ 'ಕಿಂಗ್ಸ್ ಕೋರ್ಟ್ ಮಾಯಾಸ್' ಎಂಬ ಹೊಸ ಹೆಸರಿನೊಂದಿಗೆ ಉದ್ಘಾಟನೆಗೊಳ್ಳಲಿದೆ. ಕಿಂಗ್ಸ್ ಕೋರ್ಟ್ ಹೋಟೇಲ್ ಅನ್ನು ಮಾಯಾಸ್ ಗ್ರೂಪ್‌ನ ಸಹಭಾಗಿತ್ವದಲ್ಲಿ ಮುಂದಿನ ದಿನಗಳಲ್ಲಿ ನಡೆಸಲಾಗುವುದು ಎಂದು ಮಾಯಸ್ ಗ್ರೂಪ್‌ನ ಅಧ್ಯಕ್ಷ ವಾಸುದೇವ್ ಕಾಮತ್ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಿಂಗ್ಸ್ ಕೋರ್ಟ್ ಹೋಟೇಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎ.27ರಂದು ಮಾಯಾಸ್ ಸಹಭಾಗಿತ್ವದೊಂದಿಗೆ ಕಿಂಗ್ಸ್ ಕೋರ್ಟ್ ಮಾಯಾಸ್ ಎಂದು ಮರು ಚಾಲನೆಗೊಳ್ಳಲಿದೆ. ಅಂದು ಬೆಳಗ್ಗೆ 11.30ಕ್ಕೆ ಆರಂಭವಾಗಲಿದ್ದು, ಕಾರ್ಯಕ್ರಮದಲ್ಲಿ ಸ್ಥಳೀಯ ಎಲ್ಲಾ ಶಾಸಕರು ಮತ್ತು ಹಲವಾರು ಅತಿಥಿ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಮೈಸೂರು ಎಂದರೆ ಸಾಂಸ್ಕೃತಿಗಳ ತವರೂರು. ಆ ಸಂಸ್ಕೃತಿಯನ್ನು ಉಳಿಸಿಕೊಂಡು ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ನೀಡುವ ಸಲುವಾಗಿ ಮಾಯಾಸ್ ಗ್ರೂಪ್ ಕಿಂಗ್ಸ್ ಕೋರ್ಟ್‌ನೊಂದಿಗೆ ಕೈಜೋಡಿಸಿದೆ. ರಾಜ್ಯ ಮತ್ತು ಅಂತರಾಜ್ಯದ ಗಣ್ಯರಿಗೆ ಕಿಂಗ್ಸ್ ಕೋರ್ಟ್ ಎಂದರೆ ಅಚ್ಚು ಮೆಚ್ಚು. ಕಿಂಗ್ಸ್ ಕೋರ್ಟ್ ಕಳೆದ 40 ವರ್ಷಗಳಿಂದ ಮೈಸೂರಿನ ಪರಂಪರೆಗೆ ತಕ್ಕಂತೆ ತನ್ನ ವೈಭವವನ್ನು ಉಳಿಸಿಕೊಂಡು ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುತ್ತಾ ಬಂದಿದೆ. ಇದಕ್ಕೆ ಯಾವುದೇ ಚ್ಯುತಿ ಬಾರದಂತೆ ನಾವು ಸಹ ಮುಂದುವರೆಸಿಕೊಂಡು ಹೋಗುತ್ತೇವೆ. ಕೇವಲ ಮಾಯಾಸ್ ಎಂಬ ಹೆಸರು ಸೇರಿಸಿದ್ದೇವೆ. ಹೊರತು ಕಿಂಗ್ಸ್ ಕೋರ್ಟ್‌ನ ಹಳೆಯ ವೈಭವ ಹಾಗೆಯೇ ಇರಲಿದೆ ಎಂದು ತಿಳಿಸಿದರು. ಪ್ರವಾಸೋದ್ಯಮ ಹಾಗೂ ಹೋಟೆಲ್ ಉದ್ಯಮ ಎರಡು ಜೊತೆಯಾಗಿ ಹೋದರೆ ಅಭಿವೃದ್ಧಿ ಸಾಧ್ಯ. ಬಂಡೀಪುರದಲ್ಲೂ ಮುಂದೆ ರೆಸಾರ್ಟ್‌ವೊಂದನ್ನು ತೆರೆಯಲಿದ್ದೇವೆ. ಸದ್ಯ ಇಲ್ಲಿಗೆ ಬರುವ ಗ್ರಾಹಕರನ್ನು ಬಂಡೀಪುರ ಹಾಗೂ ನಾಗರಹೊಳೆ ಸಫಾರಿಗಳಿಗೆ ಕರೆದೊಯ್ಯುವ ವ್ಯವಸ್ಥೆಯನ್ನು ಮಾಡಲಿದ್ದೇವೆ ಎಂದರು.

ಇದರ ವಿಶೇಷ ಎಂದರೆ ಮಂಗಳೂರು ಮೀನಿನ ಖಾದ್ಯ ವಿಶೇಷ ಆಹಾರವಾಗಿದೆ. ಉದ್ಘಾಟನೆ ಅಂಗವಾಗಿ ಒಂದು ವಾರದವರೆಗೆ 599 ರೂ. ಗೆ ಡಿನ್ನರ್ ಹಾಗೂ ಲಂಚ್ ನೀಡಲಿದೆ 40 ವಿಧವಾದ ಮಾಂಸಾಹಾರ ಹಾಗೂ ಸಸ್ಯಾಹಾರಿ ಖಾದ್ಯಗಳು ಇರಲಿವೆ ಇದರೊಟ್ಟಿಗೆ ಕಾಕ್‌ಟೇಲ್ ವ್ಯವಸ್ಥೆ ಇದ್ದು, ಅದಕ್ಕೆ ಪ್ರತ್ಯೇಕ ದರ ಇರಲಿದೆ ಎಂದು ಹೇಳಿದರು.

ಇದೇ ವೇಳೆ ಕಿಂಗ್ಸ್ ಕೋರ್ಟ್ ಮಾಲೀಕರಾದ ವಿವೇಕ್ ಮಾತನಾಡಿ 40 ವರ್ಷಗಳಿಂದ ಮೈಸೂರಿನ ಪರಂಪರೆಗೆ ತಕ್ಕಂತೆ ತನ್ನ ವೈಭವವನ್ನು ಉಳಿಸಿಕೊಂಡು ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುತ್ತಾ ಬಂದಿದೆ. ಹೊಸ ಬದಲಾವಣೆ ಮಾಡಬೇಕು ಎಂದು ಚಿಂತಿಸಿದ್ದೆ. ಅದಕ್ಕೆ ತಕ್ಕಂತೆ ಮಾಯಾಸ್ ಅವರಿಗೆ ಸಹಭಾಗಿತ್ವ ನೀಡಲಾಗಿದೆ. ಅವರು ಉತ್ತಮ ಸೇವೆ ನೀಡಲಿದ್ದಾರೆ ಎಂಬ ಭರವಸೆ ಇದೆ ಎಂದು ತಿಳಿಸಿದರು.



ಮೈಸೂರಿನ ಡಾ.ರಾಜ್‌ಕುಮಾರ್ ಉದ್ಯಾನದಲ್ಲಿರುವ ಅವರ ಪ್ರತಿಮೆಗೆ ಡಿಸಿಸಿ ಕಾರ್ಯದರ್ಶಿ ಹಾಗೂ ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಮಾಲಾರ್ಪಣೆ ಮಾಡಿದರು. ಈ ವೇಳೆ ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್, ಪ್ರಧಾನ ಕಾರ್ಯದರ್ಶಿ ಹರೀಶ್ ರೆಡ್ಡಿ, ಹುಯಿಲಾಳು ಮಂಜುನಾಥ್ ಪ್ರಸಾದ್, ಜಯರಾಮು, ಮಳವಳ್ಳಿ ಚಂದ್ರು, ಸ್ವಾಮಿ ಇದ್ದರು.

ಶಕ್ತಿನಗರದಲ್ಲಿ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ





ಮೈಸೂರು,ಏ.24(ಎಸ್‌ಬಿಡಿ)– ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಮೈಸೂರಿನ ಡಾ.ರಾಜ್‌ಕುಮಾರ್ ರಸ್ತೆ ಬಿಎಸ್‌ಎನ್‌ಎಲ್ ಕಚೇರಿ ಹಿಂಭಾಗದ ಶಕ್ತಿನಗರ ಉದ್ಯಾನದಲ್ಲಿ ಭಾನುವಾರ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿತ್ತು.

ಖ್ಯಾತ ಕಲಾವಿದ ಅರ್ನಾಲ್ಡ್ ಶಾಲೆಯ ಪುನೀತ್, ಸ್ವಾಮಿ ವಿವೇಕಾನಂದರ ಚಿತ್ರ ಬಿಡಿಸುವ ಮೂಲಕ ಚಿತ್ರಕಲಾ ಸ್ಪರ್ಧೆಗೆ ಚಾಲನೆ ನೀಡಿದರು. ವಿವೇಕಾನಂದರ ಚಿತ್ರವನ್ನು ಉಲ್ಟಾ ಬಿಡಿಸಿ, ಅದನ್ನು ಸರಿಯಾದ ಕ್ರಮದಲ್ಲಿ ಪ್ರದರ್ಶಿಸುತ್ತಿದ್ದಂತೆ ನೆರೆದಿದ್ದ ಮಕ್ಕಳು, ಪೋಷಕರು ಹಾಗೂ ಶಕ್ತಿ ನಗರ ನಿವಾಸಿಗಳು 'ವಂದೇ ಮಾತರಂ' ಘೋಷಣೆಯೊಂದಿಗೆ ಸಂಭ್ರಮಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಇಡೀ ಶಕ್ತಿನಗರ ನಿವಾಸಿಗಳು ಒಟ್ಟಾಗಿ ಚಿತ್ರ ರಚನಾ ಸ್ಪರ್ಧೆ ಏರ್ಪಡಿಸುವ ಮೂಲಕ ಮಕ್ಕಳ ಕಲೆಯನ್ನು ಪ್ರೋತ್ಸಾಹಿಸುತ್ತಿರುವುದು ಅಭಿನಂದನಾರ್ಹ. 'ಏಳಿ, ಎದ್ದೇಳಿ, ಜಾಗೃತರಾಗಿರಿ' ಸಂದೇಶ ಸಾರಿದ ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಯುವ ಸಮುದಾಯ ಪಾಲಿಸಬೇಕು. ಪೋಷಕರು ಹಾಗೂ ಶಿಕ್ಷಕರು ಉತ್ತಮ ಮಾರ್ಗದರ್ಶನ ನೀಡಬಹುದೇ ಹೊರತು ನಿಮ್ಮ ಉದ್ಧಾರ ನಿಮ್ಮಿಂದಲೇ ಎನ್ನುವ ಅರಿವಿರಬೇಕು ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಶಕ್ತಿನಗರ ಗಣಪತಿ ದೇವಸ್ಥಾನದ ಸಂಸ್ಥಾಪಕ ಕೆ.ಜಿ.ಮಹೇಶ್, ಶಕ್ತಿನಗರ ಹಿತರಕ್ಷಣಾ ಸಮಿತಿ ಅಧ್ಯಕ್ಷ ವೆಂಕಟೇಶ್, ಉಪಾಧ್ಯಕ್ಷ ಮಹಾಂತಪ್ಪ, ಸಣ್ಣತಮ್ಮೇಗೌಡ, ಶ್ರೀನಗರ ಹಿತರಕ್ಷಣಾ ಸಮಿತಿ ಕಾರ್ಯದರ್ಶಿ ಚಂದ್ರಶೇಖರ್, ಕಾರ್ಯಕ್ರಮ ಆಯೋಜಕ ಮೈಕ್ ಪ್ರಕಾಶ್, ಆರ್.ಮಂಜುನಾಥ್ ಸ್ವಾಮಿ, ಕ್ರೆಡಿಟ್ ಐ ಸಂಸ್ಥೆಯ ಡಾ.ಎಂ.ಪಿ.ವರ್ಷ, ಚಿಕ್ಕಕೆಂಪೇಗೌಡ, ಮನೋಹರ್, ಸ್ಪರ್ಧೆಯ ತೀರ್ಪುಗಾರರಾದ ನಿಸರ್ಗ ಹಾರ್ಟ್ ಕ್ಲಬ್‌ನ ಸುರೇಶ್, ವೈಜಯಂತಿ ಚಿತ್ರಕಲಾ ಮಹಾವಿದ್ಯಾಲಯ ಪ್ರಾಚಾರ್ಯ ಎಸ್.ಪಿ.ವಿನೋದ್‌ರಾಜ್, ಕಲ್ಯಾಣಿ ಶಾಲೆಯ ಚಿತ್ರಕಲಾ ಶಿಕ್ಷಕ ಮನೋಹರ್ ಮತ್ತಿತರರು ಉಪಸ್ಥಿತರಿದ್ದರು.

ಚಿತ್ರಕಲಾ ಸ್ಪರ್ಧೆಯ ವಿಜೇತರಿಗೆ ನಗದು ಬಹುಮಾನ ಹಾಗೂ ಭಾಗವಹಿಸಿದ್ದ ಎಲ್ಲಾ 250 ಮಕ್ಕಳಿಗೂ ಪ್ರಶಂಸನಾ ಪತ್ರ ನೀಡಲಾಯಿತು. ನಂತರ ಮಾತನಾಡುವ ಗೊಂಬೆ, ಮ್ಯಾಜಿಕ್ ಶೋ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಮೈಸೂರಲ್ಲಿ ಜೆಡಿಎಸ್‌ನಿಂದ ಇಫ್ತಿಯಾರ್ ಕೂಟ

ಸಮಾಜದ ಶಾಂತಿ ಕದಡುವವರಿಗೆ ಪ್ರೋತ್ಸಾಹ ನೀಡಬೇಡಿ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕರೆ

ಮೈಸೂರು, ಏ.24(ಎಂಕೆ)– 'ಸರ್ವಜನಾಂಗದ ಶಾಂತಿಯ ತೋಟ'ವಾದ ರಾಜ್ಯದಲ್ಲಿನ ಶಾಂತಿಯುತ ವಾತಾವರಣವನ್ನು ಕಲುಷಿತಗೊಳಿಸಲು ಪ್ರತಿನಿತ್ಯ ಪ್ರಯತ್ನಿಸುತ್ತಿರುವ ಕೆಲ ಸಂಘಟನೆಗಳು ವಿನಾಃ ಕಾರಣ ಒಂದಲ್ಲಾ ಒಂದು ಸಮಸ್ಯೆ ಸೃಷ್ಟಿ ಮಾಡುತ್ತಿವೆ. ಸಮಾಜದ ಶಾಂತಿ ಕದಡುವವರಿಗೆ ಯಾವುದೇ ಪ್ರೋತ್ಸಾಹ ನೀಡದಿರಿ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕರೆ ನೀಡಿದರು.

ಮೈಸೂರಿನ ಸಿದ್ದಿಕ್‌ನಗರದಲ್ಲಿರುವ ಖಾಸಗಿ ಸಮುದಾಯ ಭವನದಲ್ಲಿ ಜೆಡಿಎಸ್ ಮುಖಂಡ ಅಬ್ದುಲ್ ಅಜೀಜ್ ನೇತೃತ್ವದಲ್ಲಿ ಪಕ್ಷದ ನಾಯಕರು, ಕಾರ್ಯಕರ್ತರಿಗೆ ಆಯೋಜಿಸಿದ್ದ ಇಫ್ತಿಯಾರ್ ಕೂಟದಲ್ಲಿ ಭಾಗವಹಿಸಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಹಿಂದೂ–ಮುಸ್ಲಿಮರ ನಡುವೆ ಭೇದ–ಭಾವ ಇರಬಾರದು. ಸಹೋದರರಂತೆ ಪರಸ್ಪರ ಕಷ್ಟ–ಸುಖದಲ್ಲಿ ಭಾಗಿಯಾಗುವ ವಾತಾವರಣ ನಿರ್ಮಾಣ ಆಗಬೇಕು. ಶಾಂತಿ ಕದಡುವವರಿಗೆ ಬೆಂಬಲ ಕೊಡಬಾರದು ಎಂದರು.

ಮೈಸೂರು ನಗರದಲ್ಲಿ ಪ್ರಥಮವಾಗಿ ರಂಜಾನ್ ಇಫ್ತಿಯಾರ್ ಕೂಟದಲ್ಲಿ ಇಸ್ಲಾಂ ಧರ್ಮ ಗುರುಗಳ ಹಾಗೂ ಹಿಂದೂ ಧರ್ಮದ ಅರ್ಚಕರು ದೇವರಲ್ಲಿ ಪಾರ್ಥನೆ ಮಾಡಿದ್ದಾರೆ. ರಾಜ್ಯದಲ್ಲಿ ಯಾವುದೇ ಅಹಿತಕರ ಘಟನೆ ನಡೆಯಲು ನಾವು ಅವಕಾಶ ಕೊಡುವುದಿಲ್ಲ. ನಾವು ಅಣ್ಣ–ತಮ್ಮಂದಿರು ಎಂಬ ಸಂದೇಶವನ್ನು ಈ ಸ್ಥಳದಿಂದ ರವಾನಿಸುವ ಕೆಲಸ ಆಗಿದೆ ಎಂದು ಹೇಳಿದರು.



ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಮಾತನಾಡಿ, ಮಾಜಿ ಪ್ರಧಾನಿ ದೇವೇಗೌಡರು ಬಹಳ ಹಿಂದಿನಿಂದಲೂ ಇಫ್ತಿಯಾರ್ ಕೂಟದಲ್ಲಿ ಭಾಗವಹಿಸುತ್ತಾ ಬಂದಿದ್ದಾರೆ. ಇದೊಂದು ಪರಂಪರೆಯಾಗಿದೆ. ಮಠಗಳಲ್ಲಿ ನಮಾಜ್ ಮಾಡಲು ಪೇಜಾವರ ಶ್ರೀಗಳು ಅವಕಾಶ ಮಾಡಿಕೊಟ್ಟಿದ್ದರು. ಮೈಸೂರು ಮಹಾರಾಜರ ನಾಡು, ಸಂಸ್ಕೃತಿಯ ಬೀಡು. ಈ ನೆಲ ಶಾಂತಿಯನ್ನು ಬಯಸುತ್ತದೆ. ಹಿಂದೂ, ಮುಸ್ಲಿಮರು ಸೇರಿ ಸೌಹಾರ್ದ ಇಫ್ತಿಯಾರ್ ಕೂಟ ಆಯೋಜಿಸಿದ್ದು, ರಾಜ್ಯದಲ್ಲಿ ಶಾಂತಿ ನೆಮ್ಮದಿ ನೆಲೆಸಲಿ ಎಂದು ಆಶಿಸಿದರು.

ಹೊಸ ಹುರುಪಿನಲ್ಲಿ ಮೈಮರೆಯಬೇಡಿ: ಪಕ್ಷ ಕಟ್ಟುವ ಕೆಲಸವನ್ನು ಮೈಸೂರಿನಿಂದಲೇ ಆರಂಭಿಸಿದ್ದೇನೆ. ಮುಂದೆ ರಾಜ್ಯದಲ್ಲಿ ಉತ್ತಮ ವಾತಾವರಣ ನಿರ್ಮಾಣ ಆಗಲಿ. ಹೆಚ್.ಡಿ.ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿ ಆಗಲಿ. ಪಕ್ಷಕ್ಕೆ ರಾಜ್ಯಾದ್ಯಂತ ಉತ್ತಮ ಜನಬೆಂಬಲ ದೊರೆಯುತ್ತಿರುವುದರಿಂದ ಕಾರ್ಯಕರ್ತರಿಗೆ ಹೊಸ ಹುರುಪು ಬಂದಿದೆ. ಆದರೆ ಹೊಸ ಹುರುಪಿನಲ್ಲಿ ಮೈಮರೆಯಬೇಡಿ ಹುಷಾರಾಗಿರಿ. ಎಲ್ಲಾ ಪಾಲಿಕೆ ಸದಸ್ಯರು, ಮಾಜಿ ಮೇಯರ್‌ಗಳ ಪರಿಚಯ ಇದೆ. ನಾನೇನು ಹುಚ್ಚಾಸ್ಪತ್ರೆಗೆ ಹೋಗಿರಲಿಲ್ಲ ಸ್ವಲ್ಪ ದಿನ ದೂರ ಇದ್ದೆ ಅಷ್ಟೇ. ಎಲ್ಲರೂ ಒಂದು ಕುಟುಂಬದಂತೆ. ಮುಂದಿನ 25 ವರ್ಷ ಜೆಡಿಎಸ್ ಆಡಳಿತ ನಡೆಸಲು ಅವಕಾಶ ಕರುಣಿಸಲು ಎಂದು ಪಾರ್ಥನೆ ಸಲ್ಲಿಸಿದ್ದೇವೆ ಎಂದು ಹೇಳಿದರು.

ಮುಸ್ಲಿಂ ಧರ್ಮಗುರು ಮೈಸೂರು ಸರ್ಖಾಜಿ, ಶಾಸಕರಾದ ಸಾ.ರಾ.ಮಹೇಶ್, ಅಶ್ವಿನ್ ಕುಮಾರ್, ಎಂಎಲ್‌ಸಿ ಮಂಜೇಗೌಡ, ಕೆ.ಟಿ.ಶ್ರೀಕಂಠೇಗೌಡ, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ದಾದಾಪೀರ್ ಶೇಕ್, ಜೆಡಿಎಸ್ ಮುಖಂಡರಾದ ಹೆಚ್.ಕೆ.ರಾಮು, ಕೆ.ವಿ.ಮಲ್ಲೇಶ್, ಪಾಲಿಕೆಯ ಜೆಡಿಎಸ್ ಸದಸ್ಯರು, ಕಾರ್ಯಕರ್ತರು ಇಫ್ತಿಯಾರ್ ಕೂಟದಲ್ಲಿ ಭಾಗವಹಿಸಿದ್ದರು.

ಶ್ರೀ ಶ್ರೀ ಶ್ರೀ ಕುಮಾರಸ್ವಾಮಿ ಪಟ್ಟಾಭಿಷೇಕರಸ್ತು....!

ಇಫ್ತಿಯಾರ್ ಕೂಟದಲ್ಲಿ ಭಾಗವಹಿಸಿದ್ದ ಅರ್ಚಕರು ವಿಘ್ನೇಶ್ವರ ಸ್ತೋತ್ರ ಹೇಳಿದ ಕೂಡಲೇ ಮೈಕ್ ಹಿಡಿದ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ, ಶ್ರೀ ವಿಘ್ನೇಶ್ವರಾಯರ ಪಾರ್ಥನೆ ಮಾಡಿ ಶ್ರೀ ಶ್ರೀ ಶ್ರೀ ಕುಮಾರಸ್ವಾಮಿ ಪಟ್ಟಾಭಿಷೇಕರಸ್ತು ಅಭಿರಸ್ತು ಅಭಿರಸ್ತು ಎಂದರಲ್ಲದೆ ಕರ್ನಾಟಕ ರಾಜ್ಯದಲ್ಲಿ ಇನ್ನೂ ಮುಂದೆ ಪ್ರತಿ ಇಫ್ತಿಯಾರ್ ಕೂಟವನ್ನು ಹಿಂದೂ–ಮುಸ್ಲಿಮರು ಸೇರಿ ಆಚರಣೆ ಮಾಡುವುದನ್ನು ಜಾರಿಗೆ ತರುತ್ತೇವೆ ಎಂದರು.

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಲೋ ಗುಂಡ, ಶಬ್ದ ಮಾಲಿನ್ಯಕ್ಕೆ ಏನ್ ಮಾಡಬೇಕೋ?
ಗುಂಡ : ಅದು, ಅದು, ಅದು, ಕಿವಿ ಮುಚ್ಕೋಬೇಕು ಸಾರ್?

ಮೈಸೂರು ಮಿತ್ರ

ಸೋಮವಾರ, 25 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಸತ್ಯವು ಮನುಷ್ಯನ ಘನತೆ, ಗೌರವ ಹೆಚ್ಚಿಸುತ್ತದೆ.

– ಮಹಾವೀರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕಾಶಿಗೆ ಹೋದರೂ ಶನೀಶ್ವರನ ಕಾಟ ತಪ್ಪಲಿಲ್ಲ.

ನಿಮ್ಮ ಪತ್ರಗಳು

'ಮೈಸೂರು ಮಿತ್ರ'ನಿಗೆ ಅಭಿನಂದನೆಗಳು

ಮಾನ್ಯರೇ

ಓದುಗರ ಸಮಸ್ಯೆಗೆ ಸ್ಪಂದಿಸಿ ಪರಿಹಾರದ ದಾರಿ ತೋರಿಸಿದ 'ಮೈಸೂರು ಮಿತ್ರ'ನಿಗೆ ಅಭಿನಂದನೆಗಳು.

ಮೈಸೂರು ಸಿದ್ಧಾರ್ಥ ನಗರದಲ್ಲಿರುವ ಕೇಂದ್ರೀಯ ವಿದ್ಯಾಲಯದ ಮುಂದಿನ ರಸ್ತೆಯಲ್ಲಿ ದಿನ ನಿತ್ಯ ಟ್ರಾಫಿಕ್ ಸಮಸ್ಯೆ ಉಂಟಾಗಿ ಶಾಲೆಯ ಮಕ್ಕಳು ಮತ್ತು ಪೋಷಕರು ರಸ್ತೆ ದಾಟಲು ಮತ್ತು ಓಡಾಡಲು ಪರದಾಡುವಂತಹ ಪರಿಸ್ಥಿತಿಯಿತ್ತು. ಈ ಕುರಿತು ನಾನು ಬರೆದ ಪತ್ರವನ್ನು 'ಮೈಸೂರು ಮಿತ್ರ, ಓದುಗರ ಪತ್ರಗಳು' ವಿಭಾಗದಲ್ಲಿ ಏ.19ರಂದು ಪ್ರಕಟಿಸಲಾಗಿತ್ತು.

ಅದನ್ನು ಗಮನಿಸಿದ ಕೂಡಲೇ ಪೊಲೀಸ್ ಆಯುಕ್ತರು ಕ್ರಮವಹಿಸಿ ಅಂದೇ ಟ್ರಾಫಿಕ್ ಪೇದೆಯೊಬ್ಬರನ್ನು ಅಲ್ಲಿಗೆ ನೇಮಿಸಿ, ಶಾಲಾ ಮಕ್ಕಳು ಮತ್ತು ಪೋಷಕರು ರಸ್ತೆ ದಾಟಲು ಮತ್ತು ಓಡಾಡಲು ಅವಕಾಶ ಮಾಡಿಕೊಟ್ಟರು. ಇದಕ್ಕಾಗಿ ಪೊಲೀಸ್ ಆಯುಕ್ತರು ಮತ್ತು 'ಮೈಸೂರು ಮಿತ್ರ'ನಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

–ಎಸ್. ರಾಜಗೋಪಾಲ್, ಗಾಂಧಿ ನಗರ ಮೈಸೂರು

ಆರೋಗ್ಯ ಮೇಳದಿಂದ ಅನುಕೂಲ

ಮಾನ್ಯರೇ

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಸೇಠ್ ಮೋಹನ್‌ದಾಸ್ ತುಳಸಿದಾಸ್ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಜಾಗೃತಿ ಅಭಿಯಾನದ ಅಂಗವಾಗಿ ನಡೆದ ಉಚಿತ ಬೃಹತ್ ಆರೋಗ್ಯ ಮೇಳ ಯಶಸ್ವಿಯಾಯಿತು.

ತಜ್ಞ ವೈದ್ಯರಿಂದ ಮಧುಮೇಹ, ಸಕ್ಕರೆ ಕಾಯಿಲೆ, ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆಗಳ ತಪಾಸಣೆ, ಇಸಿಜಿ, ಎಕೋ, ಸಿಟಿ ಸ್ಕ್ಯಾನ್, ಎಕ್ಸ್‌ರೇ ಮೊದಲಾದ ತಪಾಸಣೆಯನ್ನು ಉಚಿತವಾಗಿ ನಡೆಸುವುದರೊಂದಿಗೆ ಅಗತ್ಯವಿರುವವರಿಗೆ ಔಷಧಿಯನ್ನೂ ವಿತರಿಸಿದ್ದು ಸಾಕಷ್ಟು ಜನರಿಗೆ ಅನುಕೂಲವಾಯಿತು.

ಸಾವಿರಾರು ಮಂದಿ ಸಾರ್ವಜನಿಕರು ಆರೋಗ್ಯ ತಪಾಸಣಾ ಶಿಬಿರದ ಪ್ರಯೋಜನ ಪಡೆದರು. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದ ಆರೋಗ್ಯ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಹಾಗೂ ಸ್ಥಳೀಯ ಜನ ಪ್ರತಿನಿಧಿಗಳಿಗೆ ಧನ್ಯವಾದಗಳು.

– ನಾಗೇಂದ್ರ ಶರ್ಮ, ಮೈಸೂರು

ಬೆಲೆ ನಿಯಂತ್ರಣ ಸಾಧ್ಯ ಇಲ್ಲವೇ...

ಮಾನ್ಯರೇ

ಜನಪ್ರತಿನಿಧಿಗಳು ಮತ್ತು ನಮ್ಮನ್ನಾಳುವ ಸರ್ಕಾರಗಳಿಗೆ ಜನರ ಹಿತ ಮುಖ್ಯವಲ್ಲ, ಬದ್ಧತೆಯೂ ಇಲ್ಲ. ಇದರಿಂದ ಜನರು ಸಂಕಷ್ಟದ ಪರಿಸ್ಥಿತಿಯಲ್ಲಿ ಜೀವನ ನಡೆಸಬೇಕಾಗಿದೆ.

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಪೆಟ್ರೋಲ್, ಡೀಸೆಲ್, ಅಡುಗೆ ಎಣ್ಣೆ, ತರಕಾರಿ ಮತ್ತು ಸೊಪ್ಪು ಸೇರಿದಂತೆ ದಿನನಿತ್ಯ ಬಳಸುವ ಪದಾರ್ಥಗಳ ಬೆಲೆ ಗಗನಕ್ಕೇರುತ್ತಿದ್ದು, ಜನರು ಜೀವನ ನಡೆಸುವುದೇ ಕಷ್ಟವಾಗುತ್ತಿದೆ. 20 ರೂಪಾಯಿ ಇದ್ದ ಟೊಮೊಟೊ 40 ರೂ. ಆಗಿದೆ. 10 ರೂ.ಗೆ ಮೂರು ಕಂತೆ ಇದ್ದ ಕೊತ್ತಂಬರಿ, ಕರಿಬೇವು, ಮೆಂತ್ಯ ಸೊಪ್ಪುಗಳು ಒಂದು ಕಂತೆಗೆ 7ರಿಂದ 10 ರೂ.ಗೆ ಏರಿಕೆಯಾಗಿದೆ. ಇದರೊಂದಿಗೆ ಹೂವಿನ ದರವೂ ಸಹ ಏರಿಕೆಯಾಗಿದ್ದು, ದೇವರ ಪೂಜೆ ಮಾಡುವುದಕ್ಕೂ ನೆಮ್ಮದಿ ಇಲ್ಲದಂತಾಗಿದೆ.

ಇನ್ನು ಪೆಟ್ರೋಲ್ ಮತ್ತು ಡೀಸೆಲ್ ದರವೂ ಸದ್ದಿಲ್ಲದೇ ಪ್ರತಿನಿತ್ಯವೂ 70ರಿಂದ 80 ಪೈಸೆ ಏರಿಕೆಯಾಗುತ್ತಿದೆ. ವರ್ಷದ ಹಿಂದೆ ಲೀಟರ್ 98 ರೂ. ಇದ್ದ ಪೆಟ್ರೋಲ್ ದರ ಈಗ 115 ರೂ.ಗಳಷ್ಟು ಹೆಚ್ಚಾಗಿದೆ. ಹೀಗಾದರೆ ಬಡವರು ಹೇಗೆ ಜೀವನ ಮಾಡಬೇಕು. ಇದೀಗ ಅಡುಗೆ ಎಣ್ಣೆ ದರವೂ ಏರಿಕೆಯಾಗುತ್ತದೆ ಎಂಬ ಮಾತುಗಳು ಕೇಳಿಬರುತ್ತಿದೆ. ಇದು ಏರಿಕೆಯಾದರೆ ಒಗ್ಗರಣೆ ಹಾಕಿದಂತೆಯೇ.

ನಮ್ಮನ್ನು ಆಳುತ್ತಿರುವ ಸರ್ಕಾರಗಳು ಮತ್ತು ಅಲ್ಲಿ ಕುಳಿತಿರುವ ಜನಪ್ರತಿನಿಧಿಗಳಿಗೆ ಇದ್ಯಾವುದೂ ಕಾಣುತ್ತಿಲ್ಲವೇ. ಬೇಡವಾದ ಮತ್ತು ಅವಶ್ಯಕತೆಯಿಲ್ಲದ ವಿಚಾರಗಳಬಗ್ಗೆ ವಾದ–ಪ್ರತಿವಾದ ಮಾಡುವ ಬದಲು ಬೆಲೆ ಏರಿಕೆಯತ್ತ ಒಮ್ಮೆ ಗಮನಹರಿಸಿ, ಬಡಜನರ ಕಷ್ಟ ಏನೆಂದು ತಿಳಿಯಿರಿ. ಕೊನೇ ಪಕ್ಷ ಓಟು ಪಡೆದ ಗೌರವಕ್ಕಾದರೂ ಬೆಲೆ ಏರಿಕೆಯನ್ನು ನಿಯಂತ್ರಿಸುವ ಪ್ರಯತ್ನ ಮಾಡಿ ನಿಮ್ಮ ಕಚ್ಚಾಟ ಯಾರಿಗೆ ಬೇಕು ಸ್ವಾಮಿ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಓಟು ಕೇಳಿಕೊಂಡು ಬರುವ ಆಡಳಿತ ಮತ್ತು ವಿರೋಧ ಪಕ್ಷಗಳಿಗೆ ಜನರು ಸರಿಯಾಗಿ ಪಾಠ ಕಲಿಸುವುದರಲ್ಲಿ ಅಚ್ಚರಿ ಪಡಬೇಕಾಗಿಲ್ಲ.

– ನೊಂದ ಗ್ರಾಹಕ, ಮೈಸೂರು.

ಕಸ ತೆರವುಗೊಳಿಸಿ

ಮಾನ್ಯರೆ,

ಮೈಸೂರಿನ ಬನ್ನಿ ಮಂಟಪ ಬಡಾವಣೆಯ ಜೋಡಿ ತೆಂಗಿನ ಮರ ಸ್ಮಶಾನ ರಸ್ತೆಯ ಬದಿಯಲ್ಲಿ ಕಸದ ರಾಶಿಯನ್ನು ನಗರ ಪಾಲಿಕೆಯವರು ತೆರವುಗೊಳಿಸದೇ ಹಾಗೇ ಬಿಟ್ಟಿರುವುದರಿಂದ ಸೊಳ್ಳೆ, ನೊಣಗಳ ಹಾವಳಿ ಮಿತಿ ಮೀರಿದೆ.

ಕಸದ ರಾಶಿಯ ಬಳಿ ಹಂದಿಗಳ ಗುಂಪು ಬೀಡುಬಿಟ್ಟಿದ್ದು, ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯುಂಟಾಗಿದೆ. ಆಗಾಗ್ಗೆ ಮಳೆಯೂ ಸುರಿಯುತ್ತಿರುವುದರಿಂದ ಕಸದ ರಾಶಿ ಕೊಳೆತು ದುರ್ವಾಸನೆ ಬೀರುತ್ತಿದ್ದು, ಈ ಮಾರ್ಗದಲ್ಲಿ ಸಂಚರಿಸುವವರು ಮೂಗು ಮುಚ್ಚಿಕೊಂಡೇ ಓಡಾಡಬೇಕಾಗಿದೆ. ಈ ರಸ್ತೆಯ ಬದಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ನಿರ್ಮಿಸಿರುವ ಕಾರ್ಮಿಕರ ಮನೆಗಳಿದ್ದು, ಅವರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುವ ಸಾಧ್ಯತೆಯಿರುತ್ತದೆ. ನಗರಪಾಲಿಕೆಯ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕಸದ ರಾಶಿಯನ್ನು ತೆರವುಗೊಳಿಸುವ ಮೂಲಕ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಬೇಕಾಗಿದೆ.

–ನಾಗರಾಜ್, ಮೈಸೂರು

ಚತುರ್ ಹನಿ

ಕೋಡು

ಸಮಾಜದಲ್ಲಿ ಮನುಷ್ಯ
'ಕೋಡು'ಗಳಿಸಿಕೊಳ್ಳಬೇಕು!
ಆದರೆ ಒಂಟಿಕೊಂಬಿನ
ಘೇಂಡಾ 'ಮೃಗ'
ಖಂಡಿತಾ ಆಗಬಾರದು!

ಹರಳು

ಕವಿತೆ ಹೂವಾಗಬೇಕು;
ಹರಳಾಗಬೇಕು;
ಕಲ್ಲಾಗಬಾರದು,
ಆಲಿ ಕಲ್ಲಂತೂ
ಆಗಲೇ ಬಾರದು!

ಕಹಳೆ

ಅಂತಿಮವಾಗಿ
ನ್ಯಾಯಕ್ಕೆ ಗೆಲುವು
ಎಂಬುದೆಲ್ಲ ಬರಿಯ
'ಬೊಗಳೆ'
ಕಡೆಗೆ ಅನ್ಯಾಯಕ್ಕೆ
ಜಯದ ಕಹಳೆ!

ಅಗತ್ಯ

ನಮಗೀಗ ಬೇಕಾದದ್ದು
ವರ್ತಮಾನವಲ್ಲ,
ಜೀರ್ಣ 'ಪುರಾಣ'ವೂ ಅಲ್ಲ;
ಪೂರ್ಣ!

– ಸಿಪಿಕೆ ಮೈಸೂರು



ಜಿ.ಎಲ್. ತ್ರಿಪುರಾಂತಕ
ಮೊ : 9686677284

ಸುಪ್ರಭ

ಮಕ್ಕಳಿಗೆ ಆಸ್ತಿ ಮಾಡಿದರೂ... ಮಕ್ಕಳನ್ನೆ ಆಸ್ತಿಯಾಗಿ ಮಾಡಿದರೂ ಅಷ್ಟೇ...!

ಮನುಷ್ಯನ ಬದುಕು ಬೇರೆಲ್ಲಾ ಜೀವಿಗಳಿಗಿಂತ ವಿಭಿನ್ನ ಹಾಗೂ ವಿಶಿಷ್ಟ. ತನ್ನ ಬುದ್ಧಿಶಕ್ತಿಯಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ಭದ್ರತೆ ಹೊಂದಲು ಹವಣಿಸುತ್ತಾನೆ. ಮನುಷ್ಯ ವಿದ್ಯೆ–ವಿದ್ವತ್ತನ್ನು ಗಳಿಸುವಂತೆಯೇ ಹಣ–ಆಸ್ತಿ ಗಳಿಸಲು ಹಪಹಪಿಸುತ್ತಾನೆ. ಯಾವುದೇ ಪ್ರಾಣಿಪಕ್ಷಿಯು ತನಗೆ ಹಾಗೂ ತನ್ನ ಪರಿವಾರಕ್ಕೆ ಆಹಾರ ಸಂಪಾದನೆ ಮಾಡುವುದು, ಕಷ್ಟಕಾಲಕ್ಕೆ ಸ್ವಲ್ಪ ಕೂಡಿಡುವುದು ವಾಡಿಕೆ. ನಿಸರ್ಗದ ನಿಯಮದಂತೆ ವಾಸಕ್ಕೆ ಒಂದು ಗೂಡನ್ನು ನಿರ್ಮಿಸಿಕೊಳ್ಳುವುದು ಸಹಜ. ಆದರೆ ಮನುಷ್ಯ ಮಾತ್ರ ತನ್ನ ಗಳಿಕೆಯ ಜೊತೆಗೆ ಉಳಿಕೆ ಕುರಿತು ಚಿಂತನೆ ನಡೆಸಿ, ಆಹಾರ ಸಾಮಗ್ರಿಗಳನ್ನು ಬಹುಕಾಲದ ವರೆವಿಗೆ ಕೂಡಿಡುವುದನ್ನು ಕಾಣಬಹುದು. ಹಾಗೆಯೇ ವಾಸಕ್ಕೆ ಸುಭದ್ರವಾದ ಮನೆ ನಿರ್ಮಾಣ ಮಾಡಿಕೊಳ್ಳಲು ಬಳಸುತ್ತಾನೆ. ತನ್ನ ಭವಿಷ್ಯದ ಬದುಕಿನ ಭದ್ರತೆಗಾಗಿ ಗಳಿಕೆಯಲ್ಲಿ ಉಳಿಸಿ, ಬ್ಯಾಂಕಿನಲ್ಲಿ ಠೇವಣಿ ಇಡುವುದು, ಜೀವವಿಮಾ ಪಾಲಿಸಿ ಮಾಡಿಸುವುದು, ಅಷ್ಟೇ ಅಲ್ಲದೆ ಆಭರಣ, ಭೂಮಿ, ಷೇರು ಖರೀದಿ ಹೀಗೆ ಬೇರೆ ಬೇರೆ ರೀತಿಯಲ್ಲಿ ಹೂಡಿಕೆ ಮಾಡುವುದನ್ನು ಸಹ ಕಾಣಬಹುದು.

ಮನುಷ್ಯನಿಗೆ ತನ್ನ ಸೃಷ್ಟಿಯ ಕುರಿತು ಅಪಾರವಾದ ಪ್ರೀತಿ. ತನ್ನ ಮುಂದಿನ ಸಂತತಿಯ ಸೌಖ್ಯದ ಕುರಿತು ಅತಿಯಾದ ಆಸೆ. ಹಾಗಾಗಿ ಎಷ್ಟೋ ಜನ ತಮ್ಮ ವಂಶೋದ್ಧಾರಕರ ಒಳಿತಿಗಾಗಿ ತಮ್ಮ ಜೀವನದ ಸುಖವನ್ನು ತ್ಯಾಗ ಮಾಡಿ, ಸರ್ವಸ್ವವನ್ನೂ ಅವರಿಗೆ ಧಾರೆ ಎರೆಯುವುದನ್ನು ಕಾಣಬಹುದು. ತಾವು ಎಷ್ಟು ಬೆವರು ಹರಿಸಿ ದುಡಿದರೂ ಪರವಾಗಿಲ್ಲ, ಮಕ್ಕಳು ನೆರಳಿನಲ್ಲಿ ತಂಪಾಗಿ ಇರಲಿ ಎಂದು ಬಯಸುವುದು ಸಾಮಾನ್ಯ. ಮಕ್ಕಳಿಗೋಸ್ಕರ ಆಸ್ತಿ ಮಾಡುವುದು ಅಷ್ಟೇ ಸಹಜ. ಎಷ್ಟೋ ಜನ ಅಪಾರ ಆಸ್ತಿ ಗಳಿಸಿದರೂ, ತಾವು ಅದನ್ನು ಅನುಭವಿಸದೆ ಮುಂದಿನ ಮೂರ್‍ನಾಲ್ಕು ತಲೆಮಾರು ಕೂತು ತಿನ್ನಲಿ ಎಂದು ಬಯಸುತ್ತಾರೆ. ಇದು ತ್ಯಾಗವೋ, ಆಸೆಯೋ, ದುರಾಸೆಯೋ ಅಥವಾ ತಮ್ಮ ವಂಶದ ಹೆಸರನ್ನು ಹೇಳುವವರು ಚೆನ್ನಾಗಿರಲಿ ಎಂಬ ಸ್ವಾರ್ಥವೋ? ಅರಿಯದು.

ಇತ್ತೀಚಿನ ವರ್ಷಗಳಲ್ಲಿ ಮಕ್ಕಳಿಗೆ ಆಸ್ತಿ ಮಾಡುವ ವಿಚಾರವಾಗಿ ಒಂದು ಸಂದೇಶ ಜನಪ್ರಿಯವಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ, ಭಾಷಣ–ಉಪನ್ಯಾಸಗಳಲ್ಲಿ ಬದುಕಿನ ಕುರಿತು ಒಂದು ಜಾಗೃತಿಯೇ ಮೂಡುತ್ತಿದೆ ಎನ್ನುವಷ್ಟರ ಮಟ್ಟಿಗೆ ಆ ಸಂದೇಶ ಪ್ರಚಾರ ಗಿಟ್ಟಿಸುತ್ತಿದೆ. ಅದೇನೆಂದರೆ 'ಮಕ್ಕಳಿಗೆ ಆಸ್ತಿ ಮಾಡುವ ಬದಲು, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ' ಎಂಬುದಾಗಿದೆ. ಇದನ್ನು ಯಾವ ಮಹನೀಯರು ಹೇಳಿದ್ದಾರೋ ಗೊತ್ತಿಲ್ಲ. ಆದರೆ ಅನೇಕರು ಇದನ್ನು ಯಾರದ್ಯಾರದೋ ಹೆಸರಿನಲ್ಲಿ ಪ್ರಸಾರ ಮಾಡುತ್ತಲೇ ಇದ್ದಾರೆ. ಒಂದು ರೀತಿಯಲ್ಲಿ ಈ ಸಂದೇಶ ಉತ್ತಮ ತಿಳುವಳಿಕೆಯನ್ನು ಹೊಂದಿದೆ ಎನ್ನಬಹುದು. ಮಕ್ಕಳಿಗೆ ಆಸ್ತಿ ಮಾಡುವ ಬದಲು ಅನೇಕರು ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಜಮೀನು, ಸೈಟು, ಮನೆ ಎಂದು ಮಾಡದೆ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಮುಂದಾಗಿದ್ದಾರೆ. ಎಷ್ಟೋ ಮಂದಿ ಇರುವ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿ ಮಕ್ಕಳ ಶಿಕ್ಷಣಕ್ಕೆ ವಿನಿಯೋಗಿಸಿರುವುದು ಉಂಟು. ಎಷ್ಟೇ ದುಬಾರಿಯಾದರೂ ಉತ್ತಮವಾದ ಶಾಲೆ, ಕಾಲೇಜು, ತರಬೇತಿ ಸಂಸ್ಥೆಗಳಿಗೆ ದಾಖಲು ಮಾಡಿ ಒಂದು ರೀತಿ ಶಿಕ್ಷಣ ಕ್ಷೇತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಬಂಡವಾಳ ಅಂದ ಮೇಲೆ ಲಾಭದ ನಿರೀಕ್ಷೆ ಇದ್ದೇ ಇರುತ್ತದೆ ಅಲ್ಲವೇ?. ಮಕ್ಕಳಿಗೆ ಕೆಲಸ ಸಿಕ್ಕಿ, ವಾರ್ಷಿಕ ಲಕ್ಷಗಟ್ಟಲೇ ಸಂಬಳದ ಪ್ಯಾಕೇಜ್ ಘೋಷಣೆಯಾದಾಗ ಊರಿಗೆಲ್ಲಾ ಪ್ಯಾಕೇಜ್ ಕುರಿತು ಹೇಳಿ ಖುಷಿ ಪಡುತ್ತಾರೆ. ಮಕ್ಕಳು ವಿದೇಶದಲ್ಲಿ ಸೆಟಲ್ ಆದರೆ ತಮ್ಮ ಬಂಡವಾಳ ಹೂಡಿಕೆಗೆ ತಕ್ಕುದಾಗಿ ತಮಗೆ ವೈಯಕ್ತಿಕ ಬದುಕಿಗೆ ಲಾಭವಾಗದೇ ಭ್ರಮನಿರಸನ ಅನುಭವಿಸುತ್ತಿರುವ ಹೆತ್ತವರು ಅಸಂಖ್ಯ.

ಮಕ್ಕಳಿಗೆ ಜನ್ಮ ನೀಡುವುದು, ಸಾಕಿ ಸಲಹುವುದು, ಅವರಿಗೆ ಶಿಕ್ಷಣ, ಕೌಶಲ್ಯ, ಸಂಸ್ಕಾರ ನೀಡುವುದು ಹೆತ್ತವರ ಕರ್ತವ್ಯ, ಜವಾಬ್ದಾರಿ, ಪ್ರಕೃತಿ ನಿಯಮ, ಮಾನವ ಧರ್ಮ ಎಂದು ಭಾವಿಸಿದರೆ ನಿರಾಸೆಯಾಗಲಿ, ನೋವಾಗಲಿ ಆಗುವುದಿಲ್ಲ. ಬದಲಿಗೆ ನಾವು ತುಂಬಾ ಚೆನ್ನಾಗಿ ಪ್ರೀತಿಯಿಂದ, ಕಾಳಜಿಯಿಂದ ಸಾಕಿದ್ದೇವೆ, ಮಕ್ಕಳಿಗೋಸ್ಕರ ತಮ್ಮ ಸುಖವನ್ನು ತ್ಯಾಗ ಮಾಡಿದ್ದೇವೆ, ಹಾಗಾಗಿ ಮಕ್ಕಳು ಇಳಿ ವಯಸ್ಸಿನಲ್ಲಿ ನಮ್ಮನ್ನು ಪ್ರೀತಿ–ಕಾಳಜಿಯಿಂದ ಸಾಕಬೇಕು ಎಂದು ಬಯಸುವುದು ಮಾತ್ರ ಸ್ವಾರ್ಥವಾಗುತ್ತದೆ, ಜೊತೆಗೆ ನಿರಾಸೆ ಹಾಗೂ ನೋವು ಕಟ್ಟಿಟ್ಟ ಬುತ್ತಿ.



> ಹೆತ್ತವರು ತಮ್ಮ ಬದುಕಿನ ಕುರಿತಾಗಿ ಸ್ಪಷ್ಟ ಅರಿವನ್ನು ಹೊಂದಬೇಕಾಗುತ್ತದೆ. ಮಕ್ಕಳಿಗೆ ಆಸ್ತಿ ಮಾಡಿ ಸುಖಾಸುಮ್ಮನೆ ಆತಂಕಪಡುವ ಬದಲು ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ಕೊಡುವುದು ತಮ್ಮ ಕರ್ತವ್ಯ ಎಂದು ಭಾವಿಸಿ, ತಮ್ಮ ಜೀವನದ ಸುಖಸಂತೋಷಗಳನ್ನು ಕಳೆದುಕೊಳ್ಳದೆ, ಮುಂದೂಡದೆ, ತ್ಯಾಗ ಮಾಡದೆ ಅನುಭವಿಸಬೇಕಾದುದು ಜಾಣತನ. ಮಕ್ಕಳ ಭವಿಷ್ಯಕ್ಕಾಗಿ ಸರ್ವವನ್ನು ಮುಡಿಪಾಗಿಡುವುದು ಪೆದ್ದುತನ. ಎಷ್ಟೋ ಮಕ್ಕಳು ಹೆತ್ತವರು ಆಸ್ತಿಯ ಕುರಿತು ಹೇಳಿದಾಗ 'ಇಷ್ಟೆಲ್ಲಾ ಆಸ್ತಿ ನಮಗಾಗಿ ಮಾಡಿ ಎಂದು ಹೇಳಿದವರು ಯಾರು?, ನಮಗೆ ನೀವು ಬೇಡ, ನಿಮ್ಮ ಆಸ್ತಿಯೂ ಬೇಡ' ಎನ್ನುವ ಅನೇಕರು ಇದ್ದಾರೆ. ಎಲ್ಲವನ್ನೂ ಮಕ್ಕಳಿಗಾಗಿ ಮಾಡಿದರೆ ನಿಮಗಾಗಿ ಮಾಡಿಕೊಳ್ಳುವುದು ಯಾವಾಗ? ಮಕ್ಕಳಿಗೆ ಆಸ್ತಿ ಮಾಡುವ ಬದಲು ತಮ್ಮ ಭವಿಷ್ಯದ ದೃಷ್ಟಿಯಿಂದ ಆಸ್ತಿ ಮಾಡುವುದು ಒಳಿತು. ವಯೋ ಸಹಜ ಸುಖಸಂತೋಷಗಳನ್ನು ಅನುಭವಿಸುವ ಮನೋಭಾವ ಹೊಂದಬೇಕು. ಸಮಯ ಸಿಕ್ಕಾಗ, ಪ್ರವಾಸ, ಯಾತ್ರೆ ಎಲ್ಲವನ್ನೂ ಕೈಗೊಳ್ಳಬೇಕು. ಮಕ್ಕಳಿಗೋಸ್ಕರ ಎಲ್ಲವನ್ನೂ ತ್ಯಾಗ ಮಾಡಿ ವಯಸ್ಸಾಗುವವರೆವಿಗೂ ಯಾವ ಪ್ರವಾಸವನ್ನು ಮಾಡದೆ, ವಯಸ್ಸಾದ ಮೇಲೆ ಎಷ್ಟೊಂದು ಸುಂದರ ದಿನಗಳನ್ನು ವ್ಯರ್ಥ ಮಾಡಿಬಿಟ್ಟೆವಲ್ಲ ಎಂದು ಕೊರಗುವ ಪ್ರಮೇಯವೇ ಬರುವುದಿಲ್ಲ.

ನಿರೀಕ್ಷೆ ಇಲ್ಲದೇ ಇದ್ದಲ್ಲಿ ನಿರಾಸೆ ಇರುವುದಿಲ್ಲ. ಮಕ್ಕಳು ಚೆನ್ನಾಗಿ ನೋಡಿಕೊಂಡರೆ ಅದು ಪುಣ್ಯ ಎಂದು ಭಾವಿಸಬೇಕು. ಅವರು ನೋಡಿಕೊಳ್ಳಲಿಲ್ಲವಲ್ಲ ನಾವು ಪಾಪಿಗಳು ಎಂದು ಭಾವಿಸುವುದು ತಪ್ಪು. ವೃದ್ಧಾಶ್ರಮಗಳಲ್ಲಿ, ನಗರ ಪ್ರದೇಶದ ಅನೇಕ ಮನೆಗಳಲ್ಲಿ 'ಮಕ್ಕಳಿಗೆ ತುಪ್ಪದಲ್ಲಿ ಕೈತೊಳೆಸಿದ್ದೆವು, ಇಂದು ಅವರು ನಮ್ಮನ್ನ ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡಿದ್ದಾರೆ' ಎಂದು ಹೆತ್ತ ಮಕ್ಕಳನ್ನೇ ಶಪಿಸುತ್ತಾ, ತಾವು ಮಾಡಿರುವ, ಮಾಡದೇ ಇರುವ ತಪ್ಪುಗಳಿಗೆ ಪಶ್ಚಾತ್ತಾಪ ಪಡುತ್ತಾ ಕೊರಗುವುದು, ನರಳುವುದು ಸಹಜವಾಗಿದೆ.

ಮನುಷ್ಯ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಎಷ್ಟೇ ಅಭಿವೃದ್ಧಿ ಸಾಧಿಸಿದ್ದರೂ ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದು ಕಷ್ಟವಾಗುತ್ತಿದೆ. ನಿಸರ್ಗದ ನಿಯಮವನ್ನು ಮೀರಲು ಯತ್ನಿಸುತ್ತಿರುವುದರಿಂದಲೇ ಇಂದು ಅನೇಕ ಆಘಾತ, ಅನಾಹುತ, ಪ್ರಕೃತಿ ವಿಕೋಪಗಳು ನಡೆಯುತ್ತಿವೆ. ಇದೇ ರೀತಿ ಮನುಷ್ಯನ ಬದುಕಿನ ಸಂಗತಿಗಳಲ್ಲಿಯೂ ಪ್ರಕೃತಿ ನಿಯಮವನ್ನು ಗಾಳಿಗೆ ತೂರಿ, ತನ್ನದೇ ಆದ ಅಲಿಖಿತ ನಿಯಮವನ್ನು ತಯಾರು ಮಾಡಿ, ಅದರಂತೆ ನಡೆದುಕೊಳ್ಳಬೇಕು ಎಂದು ಷರತ್ತನ್ನು ವಿಧಿಸುತ್ತಿರುವುದರಿಂದಲೇ ಇಂದು ಅವನಿಗೆ ಅನಪೇಕ್ಷಿತ ಶಿಕ್ಷೆ ಅನುಭವಿಸುವಂತಾಗಿದೆ. ಅನೇಕ ಮುಂದುವರಿದ ರಾಷ್ಟ್ರಗಳಲ್ಲಿ ಮಕ್ಕಳಿಗೆ ಉತ್ತಮ ಭವಿಷ್ಯ ಕಲ್ಪಿಸಿದರೂ, ಅವರಿಂದ ಪ್ರತಿ ನಿರೀಕ್ಷೆ ಇಟ್ಟುಕೊಂಡಿರುವುದಿಲ್ಲ. ಹಾಗಾಗಿ ಅವರು ಇಳಿವಯಸ್ಸಿನಲ್ಲಿಯೂ ಆನಂದವಾಗಿ ಬದುಕನ್ನು ಕಂಡುಕೊಂಡಿರುತ್ತಾರೆ.

ಯಾವುದೇ ಪ್ರಾಣಿ–ಪಕ್ಷಿಯು ತಾವು ಜನ್ಮಕೊಟ್ಟು ಸಾಕಿದ ಮರಿಗಳು ಬೆಳೆದು ದೊಡ್ಡದಾದ ಮೇಲೆ ತಮ್ಮನ್ನು ಸಾಕಬೇಕು ಎಂದು ಅಪೇಕ್ಷಿಸುವುದಿಲ್ಲ. ವಯಸ್ಸಾದ ಮೇಲೆ ಶಕ್ತಿ ಇರುವವರೆವಿಗೆ ಆಹಾರ ಸಂಪಾದಿಸಿ, ತಮ್ಮ ಆಯಸ್ಸಿಗೆ ಅನುಗುಣವಾಗಿ ಮರಣವನ್ನಪ್ಪುತ್ತವೆ. ಆದರೆ ಮನುಷ್ಯನ ಬದುಕಿನಲ್ಲಿ ಹೀಗೆ ಆಗುವುದಿಲ್ಲ. ಮನುಷ್ಯನು ಸಂತಾನೋತ್ಪತ್ತಿ ಆದ ಮೇಲೆ ಅಗತ್ಯ ಮೀರಿ ಮಕ್ಕಳನ್ನು ಸಾಕುತ್ತಾನೆ. ಅವುಗಳು ಅಪೇಕ್ಷಿಸಲಿ ಬಿಡಲಿ ಅನೇಕ ಸವಲತ್ತುಗಳನ್ನು ಒದಗಿಸುತ್ತಾನೆ. ಇವೆಲ್ಲವೂ ಒಬ್ಬ ತಂದೆಯಾಗಿ, ತಾಯಿಯಾಗಿ ಮಾಡು ಕರ್ತವ್ಯ ಎಂದು ಭಾವಿಸುವುದು ಸಹಜ ಚಿಂತನೆಯಾಗಿರುತ್ತದೆ. ಆದರೆ ಮಕ್ಕಳಿಗೆ ತೋರುವ ಪ್ರೀತಿ–ಕಾಳಜಿಯ ಹಿಂದೆಯೂ ಒಂದು ಸ್ವಾರ್ಥವಿದ್ದಂತೆ ಕಾಣುತ್ತದೆ.

ನಾವು ಕಷ್ಟಪಟ್ಟು ಸಾಕಿದ್ದೇವೆ, ಇಳಿವಯಸ್ಸಿನಲ್ಲಿ ಅವರು ನಮ್ಮನ್ನು ಕಷ್ಟವಾದರೂ ಸರಿ ಸಾಕಬೇಕು ಎಂದು ಬಯಸುತ್ತಾರೆ, ಒಂದು ನಿರೀಕ್ಷೆ ಇಟ್ಟುಕೊಂಡಿರುತ್ತಾರೆ. ಅನೇಕರು ಈ ಸ್ವಾರ್ಥದಿಂದಲೇ ಮಕ್ಕಳಿಗೆ ಆಸ್ತಿಯ ಆಸೆಯನ್ನು ತೋರುತ್ತಾರೆ. 'ಇಷ್ಟೆಲ್ಲಾ ಮಾಡಿರುವುದು ನಿನಗಾಗಿ/ನಿಮಗಾಗಿ' ಎಂದು ಪದೇ ಪದೇ ಹೇಳುತ್ತಾರೆ ಸಹ. ಆದರೆ ಮಕ್ಕಳು ಅವರು ಸಂಸಾರಸ್ತರಾದ ನಂತರ ಅವರು ತಮ್ಮ ಮಕ್ಕಳ ಸುಖಸೌಖ್ಯ ನೋಡಿಕೊಳ್ಳುವುದರಲ್ಲಿ ಬ್ಯುಸಿಯಾಗುತ್ತಾರೆ. ಹೆತ್ತವರನ್ನು ಅಷ್ಟು ಕಾಳಜಿ ಮಾಡಲು ಸಾಧ್ಯವಾಗದೇ ಇರಬಹುದು. ಇದನ್ನು ಒಂದು ಅಪರಾಧ ಎನ್ನುವಂತೆ ಬಿಂಬಿಸುವ ಅನೇಕರು ಇದ್ದಾರೆ. ತಮ್ಮ ಮಕ್ಕಳು ತಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂಬುದನ್ನು ಅನೇಕರಿಗೆ ದೂರನ್ನು ಸಹ ನೀಡುತ್ತಾರೆ. ಈ ಇಡೀ ಪ್ರಕ್ರಿಯೆಯಲ್ಲಿ ಒಂದು ಅಂಶವನ್ನು ಮರೆತಿರುತ್ತಾರೆ. ಇಳಿವಯಸ್ಸಿನಲ್ಲಿ ತಮ್ಮ ಮಕ್ಕಳ ನಡೆಯನ್ನು ದೂರುವ ಎಷ್ಟೋ ಮಂದಿ ತಾವು ಸಹ ತಮ್ಮ ಹೆತ್ತವರನ್ನು ಉಪೇಕ್ಷಿಸಿ ಬಂದವರೇ ಆಗಿರುತ್ತಾರೆ. ತಮ್ಮ ಹೆತ್ತವರನ್ನು ನೋಡಿಕೊಳ್ಳಲು ಸಬೂಬು ಹೇಳಿ ತಪ್ಪಿಸಿಕೊಂಡ ಜನ ತಮ್ಮ ಮಕ್ಕಳು ತಮ್ಮನ್ನು ಕಾಳಜಿ ಮಾಡಲಿಲ್ಲವಲ್ಲ ಎಂದು ದೂರುವುದು ಎಷ್ಟು ಸರಿ ಅಲ್ಲವೇ?

ಹೆತ್ತವರು ತಮ್ಮ ಬದುಕಿನ ಕುರಿತಾಗಿ ಸ್ಪಷ್ಟ ಅರಿವನ್ನು ಹೊಂದಬೇಕಾಗುತ್ತದೆ. ಮಕ್ಕಳಿಗೆ ಆಸ್ತಿ ಮಾಡಿ ಸುಖಾಸುಮ್ಮನೆ ಆತಂಕಪಡುವ ಬದಲು ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ಕೊಡುವುದು ತಮ್ಮ ಕರ್ತವ್ಯ ಎಂದು ಭಾವಿಸಿ, ತಮ್ಮ ಜೀವನದ ಸುಖಸಂತೋಷಗಳನ್ನು ಕಳೆದುಕೊಳ್ಳದೆ, ಮುಂದೂಡದೆ, ತ್ಯಾಗ ಮಾಡದೆ ಅನುಭವಿಸಬೇಕಾದುದು ಜಾಣತನ. ಮಕ್ಕಳ ಭವಿಷ್ಯಕ್ಕಾಗಿ ಸರ್ವಸ್ವವನ್ನು ಮುಡಿಪಾಗಿಡುವುದು ಪೆದ್ದುತನ. ಎಷ್ಟೋ ಮಕ್ಕಳು ಹೆತ್ತವರು ಆಸ್ತಿಯ ಕುರಿತು ಹೇಳಿದಾಗ 'ಇಷ್ಟೆಲ್ಲಾ ಆಸ್ತಿ ನಮಗಾಗಿ ಮಾಡಿ ಎಂದು ನಿಮಗೆ ಹೇಳಿದವರು ಯಾರು?, ನಮಗೆ ನೀವು ಬೇಡ, ನಿಮ್ಮ ಆಸ್ತಿಯೂ ಬೇಡ' ಎನ್ನುವ ಅನೇಕರು ಇದ್ದಾರೆ. ಎಲ್ಲವನ್ನೂ ಮಕ್ಕಳಿಗಾಗಿ ಮಾಡಿದರೆ ನಿಮಗಾಗಿ ಮಾಡಿಕೊಳ್ಳುವುದು ಯಾವಾಗ? ಮಕ್ಕಳಿಗೆ ಆಸ್ತಿ ಮಾಡುವ ಬದಲು ತಮ್ಮ ಭವಿಷ್ಯದ ದೃಷ್ಟಿಯಿಂದ ತಮಗೆ ಆಸ್ತಿ ಮಾಡುವುದು ಒಳಿತು. ವಯೋ ಸಹಜ ಸುಖಸಂತೋಷಗಳನ್ನು ಅನುಭವಿಸುವ ಮನೋಭಾವ ಹೊಂದುವುದು. ಸಮಯ ಸಿಕ್ಕಾಗ ತಮ್ಮ ವಯೋಮಾನದವರೊಂದಿಗೆ ಪ್ರವಾಸ, ಯಾತ್ರೆ ಎಲ್ಲವನ್ನೂ ಕೈಗೊಳ್ಳುವುದು ಒಳ್ಳೆಯದು. ಮಕ್ಕಳಿಗೋಸ್ಕರ ಎಲ್ಲವನ್ನೂ ತ್ಯಾಗ ಮಾಡಿ ವಯಸ್ಸಾಗುವವರೆವಿಗೂ ಯಾವ ಪ್ರವಾಸವನ್ನು ಮಾಡದೆ, ವಯಸ್ಸಾದ ಮೇಲೆ ಎಷ್ಟೊಂದು ಸುಂದರ ದಿನಗಳನ್ನು ವ್ಯರ್ಥ ಮಾಡಿಬಿಟ್ಟೆವಲ್ಲ ಎಂದು ಕೊರಗುವ ಪ್ರಮೇಯವೇ ಬರುವುದಿಲ್ಲ.

ಮಕ್ಕಳು ಒಂದು ವಯಸ್ಸಿಗೆ ಬಂದ ಮೇಲೆ ಅವರು ಸ್ವತಂತ್ರರು ಎಂದು ಭಾವಿಸಬೇಕು. ಅವರಿಗೂ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಅವಕಾಶ ನೀಡಬೇಕು. ನೀವು ತ್ಯಾಗ ಮಾಡಿದ ಮಾತ್ರಕ್ಕೆ ಅವರಿಂದಲೂ ಪ್ರತಿತ್ಯಾಗ ನಿರೀಕ್ಷೆ ಮಾಡಬಾರದು. ನಿಸ್ವಾರ್ಥದಿಂದ ಮಕ್ಕಳನ್ನು ಬೆಳೆಸಬೇಕೆ ವಿನಃ ಸ್ವಾರ್ಥದಿಂದ ಬೆಳೆಸಬಾರದು. ಪ್ರಾಣಿಪಕ್ಷಿಗಳೇ ಇಳಿವಯಸ್ಸಿನಲ್ಲಿ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಹೋರಾಟ ಮಾಡುತ್ತವೆ. ಅಂತಹುದರಲ್ಲಿ ಮನುಷ್ಯ ತನ್ನ ಬುದ್ಧಿಶಕ್ತಿಯಿಂದ ಬದುಕುವುದು ಅಷ್ಟು ಕಷ್ಟವಲ್ಲ. ವಿನಾಕಾರಣ ಮಕ್ಕಳನ್ನು ದೂರುವುದನ್ನು ಬಿಟ್ಟು, ಇದು ಪ್ರಕೃತಿ ನಿಯಮ ಎಂದು ಅರಿತು, ತಮ್ಮ ಕೈಲಾದ ಮಟ್ಟಕ್ಕೆ ಬದುಕುವುದು ಸೂಕ್ತ. ಏನಂತೀರಿ?

ಬೆಳ್ಳಿ ಕಿರಣ : ತಾವು ಹೆತ್ತ ಮಕ್ಕಳಿಗೆ ಮಾಡಿದ ಉಪಕಾರಕ್ಕೆ ಪ್ರತಿ ಉಪಕಾರ ಬಯಸುವುದು ಸ್ವಾರ್ಥದ ಪರಮಾವಧಿ

5 ವಿಶೇಷ ಯೋಜನೆ ಮೂಲಕ ಕನ್ನಡ ನಾಡನ್ನು ಹಚ್ಚ ಹಸಿರಾಗಿಸುತ್ತೇವೆ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಘೋಷಣೆ

ಹುಣಸೂರು, ಏ.24(ಕೆಕೆ)– ಕಾಂಗ್ರೆಸ್ ಮತ್ತು ಬಿಜೆಪಿ ದುರಾಡಳಿತದಿಂದ ಬೇಸತ್ತ ರಾಜ್ಯದ ಜನತೆಗೆ ಮುಂಬರುವ ದಿನಗಳಲ್ಲಿ ಜೆಡಿಎಸ್ 'ಜನತಾ ಜಲಧಾರೆ' ಸೇರಿದಂತೆ 5 ವಿಶೇಷ ಕಾರ್ಯಕ್ರಮಗಳನ್ನು ನೀಡುವ ಮೂಲಕ ಕನ್ನಡ ನಾಡನ್ನು ಹಚ್ಚ ಹಸಿರು ನಾಡನ್ನಾಗಿಸುತ್ತೇವೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಘೋಷಿಸಿದರು.

ನಗರದ ರತ್ನಪುರಿ ರಸ್ತೆಯಲ್ಲಿರುವ ಸಲೀಮ್ ಪ್ಯಾಲೇಸ್‌ನಲ್ಲಿ ಏರ್ಪಡಿಸಿದ್ದ ಜನತಾ ಜಲಧಾರೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ನಮ್ಮ ರಾಜ್ಯದ ನದಿಗಳ ಸಂರಕ್ಷಣೆ ಮತ್ತು ನೀರು ಬಳಕೆ ಮಾಡಿಕೊಳ್ಳುವಲ್ಲಿ ಸರ್ಕಾರಗಳು ವಿಫಲವಾಗಿವೆ. ನಮ್ಮ ರಾಜ್ಯದ ನದಿಗಳ ನೀರನ್ನು ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ನದಿಗಳನ್ನು ಸಂರಕ್ಷಣೆ ಮಾಡಿ, ನೀರನ್ನು ಸಂಗ್ರಹಿಸಿ ಪ್ರತಿ ರೈತನ ಜಮೀನಿಗೆ ನೀರು ಹರಿಸುವ ಮಹತ್ತರವಾದ 4ರಿಂದ 5 ಲಕ್ಷ ಕೋಟಿ ವೆಚ್ಚದ ಬೃಹತ್ ಯೋಜನೆ ಹಮ್ಮಿಕೊಂಡಿದ್ದೇವೆ ಎಂದರು.

ಮುಂದಿನ 5 ವರ್ಷದಲ್ಲಿ ನಮ್ಮ ಈ ಯೋಜನೆಯನ್ನು ಪೂರ್ಣಗೊಳಿಸಿ ಪ್ರತಿ ರೈತನ ಜಮೀನಿಗೆ ನೀರು ಹರಿಸುವ ಮೂಲಕ ರಾಜ್ಯವನ್ನು ಹಸಿರು ನಾಡನ್ನಾಗಿ ಮಾಡುವ ಮಹದಾಕಾಂಕ್ಷೆ ನಮ್ಮದಾಗಿದ್ದು, ಇದಕ್ಕಾಗಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಲು ನಿಮ್ಮೆಲ್ಲರ ಆಶೀರ್ವಾದ ಮತ್ತು ಬೆಂಬಲ ನಮಗೆ ಬೇಕಾಗಿದೆ ಎಂದರು.

ನಮ್ಮ ಮುಂದಿನ 5 ವಿಶೇಷ ಕಾರ್ಯಕ್ರಮಗಳು: ಜನತಾ ಜಲಧಾರೆ ಸೇರಿದಂತೆ ಬಡ ಕುಟುಂಬದ ಮಕ್ಕಳಿಗೆ ಎಲ್‌ಕೆಜಿಯಿಂದ 12ನೇ ತರಗತಿವರೆಗೆ ಆಂಗ್ಲ ಮಾಧ್ಯಮದಲ್ಲಿ ಉಚಿತ ಶಿಕ್ಷಣ, ಸಾಲದ ಸಂಕಷ್ಟದಲ್ಲಿದ್ದ ರೈತರಿಗೆ ಸಾಲವಿಲ್ಲದಂತಹ ವಿಶೇಷ ಕಾರ್ಯಕ್ರಮಗಳು, ಹೆಣ್ಣು, ಗಂಡು ಎನ್ನದೆ ಪ್ರತಿ ಕುಟುಂಬಕ್ಕೆ ಒಂದು ಉದ್ಯೋಗ, ಭೂಮಿ ಇಲ್ಲದ ಕೂಲಿ ಕೆಲಸ ಮಾಡುವ ಪ್ರತಿಯೊಬ್ಬ ಬಡವರಿಗೂ ಆರ್ಥಿಕ ನೆರವು ನೀಡಿ ಸ್ವಾವಲಂಬನೆಯ ಬದುಕಿಗಾಗಿ ಸ್ವ ಉದ್ಯೋಗಗಳು, ಇವು ನಮ್ಮ ಪಕ್ಷದ ಮುಂದಿನ 5 ಪ್ರಮುಖ ವಿಶೇಷ ಕಾರ್ಯಕ್ರಮ ಎಂದರು.

ಶಾಂತಿ ಸೌಹಾರ್ದತೆ ಪ್ರತಿಷ್ಠಿತ ಕ್ಷೇತ್ರ: ಹುಣಸೂರು ಶಾಂತಿ ಸೌಹಾರ್ದತೆಗೆ ರಾಜ್ಯದಲ್ಲೇ ಹೆಸರಾಗಿದ್ದು, ಹೆಚ್.ಡಿ.ದೇವೇಗೌಡರಿಗೆ ಮೊದಲಿನಿಂದಲೂ ಬೆಂಬಲ ನೀಡಿದ ಪ್ರತಿಷ್ಠಿತ ಕ್ಷೇತ್ರವಾಗಿದೆ. ಹಿಂದೆ ತಂಬಾಕು ಬೆಲೆ ಕುಸಿತಗೊಂಡು ರೈತರು ಸಂಕಷ್ಟಕ್ಕೆ ಒಳಗಾಗಿದ್ದಾಗ ಹೋರಾಟ ಮಾಡಿ ರೈತರಿಗೆ ನ್ಯಾಯ ಒದಗಿಸಿಕೊಟ್ಟ ನಾಯಕ ದೇವೇಗೌಡರು ಈಗ ರಾಜ್ಯದ ನದಿಗಳ ಸಂರಕ್ಷಣೆ ಮತ್ತು ನೀರಿನ ಬಳಕೆ ಮಾಡುವಲ್ಲಿ ಜನತಾ ಜಲಧಾರೆ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಹಮ್ಮಿಕೊಂಡಿದ್ದಾರೆ. ಅಲ್ಲದೆ ಮತ್ತಷ್ಟು ವಿಶೇಷ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಎಂದರು.


156 ಕೋಟಿ ರೂ. ರೈತರ ಸಾಲ ಮನ್ನಾ: ಪ್ರಸ್ತುತ ಅಭಿವೃದ್ಧಿ ಕಾರ್ಯಗಳಲ್ಲಿ 40 ಪರ್ಸೆಂಟ್ ಲೂಟಿ ಎಂದು ಕಾಂಗ್ರೆಸ್ ಮತ್ತು ಬಿಜೆಪಿ ಕಚ್ಚಾಡುತ್ತಿವೆ. ಅದರೆ ನಮ್ಮ ಅಧಿಕಾರಾವಧಿಯಲ್ಲಿ ಹುಣಸೂರು ತಾಲೂಕಿನಲ್ಲಿ 156 ಕೋಟಿ ರೂ. ರೈತರ ಸಾಲ ಮನ್ನಾ ಮಾಡಿದಾಗ 17 ಸಾವಿರ ರೈತ ಕುಟುಂಬಗಳು ಇದರ ಪ್ರಯೋಜನ ಪಡೆದುಕೊಂಡರು ಎಂದರು.

ಜನತೆಯ ಹಣ ಲೂಟಿ ಮಾಡಲಿಲ್ಲ, ಕೆಟ್ಟ ಸರ್ಕಾರ ನೀಡಿಲ್ಲ: 14 ತಿಂಗಳ ನಮ್ಮ ಅವಧಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ 25 ಸಾವಿರ ಕೋಟಿ ರೂ. ಖರ್ಚು ಮಾಡಿದ್ದೆವು. ನಾವು ಜನತೆ ಹಣ ಲೂಟಿ ಮಾಡಲಿಲ್ಲ. ಕೆಟ್ಟ ಸರ್ಕಾರ ನೀಡಲಿಲ್ಲ. ಆದರೆ ನೀವು ಓಟು ಸಹ ಹಾಕದೆ ನಮ್ಮ ಸೋಲಿಸಿದ್ದೀರಿ. ಈಗ ಯಾರು ಹಿತವರು ಎಂದು ನಿಮಗೆ ಮನವರಿಕೆಯಾಗಿದೆ. ಮುಂದಿನ ದಿನಗಳಲ್ಲಾದರು ನಮ್ಮ ಜೆಡಿಎಸ್ ಸರ್ಕಾರವನ್ನು ಅಧಿಕಾರಕ್ಕೆ ತನ್ನಿ, ರಾಜ್ಯವನ್ನು ಹಸಿರು ನಾಡನ್ನಾಗಿ ಮಾಡೋಣ ಎಂದರು.

ಹಿಂದು ಮುಸ್ಲಿಂ ಸೌಹಾರ್ದ ಸಾಮರಸ್ಯಕ್ಕೆ ಕೈ ಜೋಡಿಸಿ: ಬಿಜೆಪಿ ಸರ್ಕಾರ ವಿನಾಕಾರಣ ಬೇರೆ ಬೇರೆ ವಿಚಾರಗಳನ್ನು ಮುಂದಿಟ್ಟುಕೊಂಡು ಧರ್ಮ ಮತ್ತು ಸಮುದಾಯಗಳ ನಡುವೆ ಬಿರುಕುಂಟು ಮಾಡಿ ಕಲುಷಿತ ವಾತಾವರಣ ನಿರ್ಮಾಣ ಮಾಡಿದ್ದು, ಯಾವುದೇ ಅಶಾಂತಿ ವಿಚಾರಗಳಿಗೆ ಯಾರೂ ಕಿವಿಗೊಡಬೇಡಿ. ರೈತರು ಬೆಳೆಯುವ ಕೃಷಿ ಉತ್ಪನ್ನಗಳನ್ನು ಹೆಚ್ಚಾಗಿ ಮುಸಲ್ಮಾನ್ ವ್ಯಾಪಾರಿಗಳು ಖರೀದಿಸುತ್ತಾರೆ. ಇದರಿಂದ ಹಿಂದೂ–ಮುಸ್ಲಿಂ ಭಾವೈಕ್ಯತೆ ಹಲವು ವರ್ಷಗಳಿಂದ ಸಾಮರಸ್ಯವಾಗಿರುತ್ತದೆ. ಈ ಸಂಬಂಧ ಹಾಳು ಮಾಡಲು ಹೊರಟಿರುವ ಕೋಮುವಾದಿಗಳಿಗೆ ಯಾವುದೇ ಅವಕಾಶ ನೀಡದೆ, ಸೌಹಾರ್ದ ಸಾಮರಸ್ಯಕ್ಕೆ ಕೈ ಜೋಡಿಸಿ. ಇನ್ನು ಹಲವು ವಿಚಾರಗಳನ್ನು ಬಹಿರಂಗವಾಗಿ ಸಾರ್ವಜನಿಕರಿಗೆ ತಿಳಿಸಬೇಕಾಗಿದೆ ಮುಂದಿನ ದಿನಗಳಲ್ಲಿ ಎಲ್ಲವನ್ನೂ ಬಹಿರಂಗವಾಗಿ ಹೇಳುತ್ತೇನೆ ಎಂದರು.

ಬೈಕ್ ರ್‍ಯಾಲಿ ಹಾಗೂ ತೆರದ ವಾಹನದಲ್ಲಿ ಮೆರವಣಿಗೆ: ನಗರದ ಬಾಲಕರ ಸರ್ಕಾರಿ ಕಿರಿಯ ಕಾಲೇಜು ಪಕ್ಕದಲ್ಲಿರುವ ದೇವರಾಜ ಅರಸು ಕ್ರೀಡಾಂಗಣದಲ್ಲಿ ನಿರ್ಮಿಸಿರುವ ಹೆಲಿಪ್ಯಾಡ್‌ಗೆ ಮಧ್ಯಾಹ್ನ 4.30ಕ್ಕೆ ಹೆಲಿಕಾಪ್ಟರ್ ಮೂಲಕ ಆಗಮಿಸಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ತಾಲೂಕು ಜೆಡಿಎಸ್ ಅಧ್ಯಕ್ಷರು ಮತ್ತು ಮುಖಂಡರು ಸ್ವಾಗತಿಸಿ, ಅಲ್ಲಿಂದ ಜೆಡಿಎಸ್ ಕಚೇರಿಗೆ ಬೈಕ್ ರ್‍ಯಾಲಿ ಮೂಲಕ ಕರೆದೊಯ್ದು, ಅಲ್ಲಿ ಕ್ರೇನ್ ಮೂಲಕ 200ಕೆಜಿ ತೂಕದ ಸೇಬಿನ ಹಾರ ಹಾಕಿ ನಂತರ ಸಲಿಂ ಪ್ಯಾಲೇಸ್‌ವರೆಗೆ ತೆರದ ವಾಹನದಲ್ಲಿ ಮೆರವಣಿಗೆ ಮೂಲಕ ಕರೆದೊಯ್ಯಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಸಾ.ರಾ. ಮಹೇಶ್, ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಳ್ಳಿ ಸೋಮಶೇಖರ್, ಉಪಾಧ್ಯಕ್ಷ ದೇವರಾಜ್ ಒಡೆಯರ್, ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಯಶೋಧ, ಜಿಪಂ ಮಾಜಿ ಸದಸ್ಯರಾದ ಹೆಚ್.ಎಂ. ಫಜಲುಲ್ಲಾ, ನಗರಸಭಾ ಸದಸ್ಯರಾದ ಕೃಷ್ಣರಾಜಗುಪ್ತ, ಸರವಣ, ಶ್ರೀನಾಥ್, ಶಿ.ದೇವರಾಜು, ರಾಣಿ ಪೆರುಮಾಳ್, ಸಿರಾಜ್ ಪಾಷ, ಅಣ್ಣಯ್ಯ, ಧಣಿ ಕುಮಾರ್, ಮಾಜಿ ಪುರಸಭಾ ಅಧ್ಯಕ್ಷ ಹೆಚ್.ಎನ್.ಚಂದ್ರಶೇಖರ್, ರಾಜೇಗೌಡ, ಜೆಡಿಎಸ್ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಸೇರಿದಂತೆ ಇತರರಿದ್ದರು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

REQUIRED
Experienced Cooks, Waiters & Helpers for leading hotel in Mysore.
Call / Whatsapp
9740322422

WANTED
ACCOUNTANT - 2 POST (MALE / FEMALE)
MARKETING - 3 POST (MALE)
Min Qualification Any Degree, Experience 1 year
7829668666

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷಿನ್, ಮೈಕ್ರೋ ಪ್ರೋವೆನ್, LED, LCD, AC
Sales & Service
Contact: Srinivas
9379699229

ಮನೆ ಬಾಡಿಗೆಗೆ ಇದೆ
1BHK ಅಮೃತ ವಿದ್ಯಾಲಯಂ ಹತ್ತಿರ C.F.T.R.I ಲೇಔಟ್ ಬೋಗಾದಿ 2ನೇ ಹಂತ, ಮೈಸೂರು.
9611417456
9449088032

ತಕ್ಷಣ ಬೇಕಾಗಿದ್ದಾರೆ
ವಿದ್ಯಾರ್ಹತೆ: SSLC, PUC, Degree above 30 years ಯುವಕ, ಯುವತಿಯರು, ಗೃಹಿಣಿಯರು, ಸರ್ಕಾರಿ ನಿವೃತ್ತ ನೌಕರರು ಸಹ ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದಾಗಿ ಇಲ್ಲಿಗೆ ನೋಂದಾಯಿಸಿಕೊಳ್ಳಲು ಸಂಪರ್ಕಿಸಿ:
9449152797
8660764095

ನಿವೇಶನ ಮಾರಾಟಕ್ಕಿದೆ
ವಿದ್ಯಾಶಂಕರ ನಗರ ಬಡಾವಣೆ (ಸಾತಗಳ್ಳಿ) ನಂ.563, 40x60 (ಕೊಡಗು ಶಾಲೆ ಪಕ್ಕ)
9164765674

TV ಕೆಟ್ಟಿದೆಯೇ?
LCD, LED TV
ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven
Doorstep ಸರ್ವೀಸ್ ಮಾಡಿಕೊಡಲಾಗುವುದು
ತೇಜು ಎಲೆಕ್ಟ್ರಾನಿಕ್ಸ್
9342114069

WANTED
Computer Teacher
Basic DTP, Tally
Saraswathipuram, Mysore.
9538483399, 8310287187

ಮೈಸೂರು ಮ್ಯಾರೇಜ್ ಲಿಂಕ್ಸ್
ವಧು ವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆಮಾಡಿ
ಡಾ. ಗುರೂಜಿ ಮೈಸೂರು
6361740552

ಮನೆ ಬಾಡಿಗೆಗೆ ಮತ್ತು ಭೋಗ್ಯಕ್ಕೆ ದೊರೆಯುತ್ತದೆ
ಉದ್ದxಅಗಲ, 33X50, 2 ಬೆಡ್ ರೂಂ
ಉದ್ದxಅಗಲ, 35X40, 2 ಬೆಡ್ ರೂಂ
ಉದ್ದxಅಗಲ, 25X20, ಸಿಂಗಲ್ 1 ಬೆಡ್ ರೂಂ
7619527710 / 9611135796

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–
7259865221 / 8867373902

ಬೇಕಾಗಿದ್ದಾರೆ
1) ರಾತ್ರಿ ಪಾಳಿಗೆ ಸೆಕ್ಯೂರಿಟಿಗಳು
2) ಫೀಲ್ಡ್ ಆಫೀಸರ್
3) ಮಹಿಳಾ ಹೌಸ್‌ಕೀಪರ್
4) ಪುರುಷ ಸೆಕ್ಯೂರಿಟಿಗಳು
ಸಂಪರ್ಕಿಸಿ:
9686422400
9242406261

ASFT Fashion Design Courses
3 MONTHS SHORT TERM COURSES
* Basic Hand Embroidery * Basic Stitches & Motifs Kurtha * Saree Designing for hand * Embroidery Motif * Basic Sewing * Basic Necklines * 2 Frock Zabla Petticoat * Blouse Lining without lining.
Srirampura Branch - Alpha Intl. School.
Proposed Branch: Gokulam & Udayagiri
Mob: 782 993 7469

ಬಟ್ಟಲು ಸಾಂಬ್ರಾಣಿ ಉದ್ಯೋಗ
ಉತ್ತಮ ಗುಣಮಟ್ಟದ ಬಟ್ಟಲು ಸಾಂಬ್ರಾಣಿಯನ್ನು ತಯಾರಿಸಿ, ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ, ತರಬೇತಿಗಾಗಿ:
7406375196
9880548596

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೋಟೆಲ್, ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸಕ್ಕೆ ಹುಡುಗ / ಹುಡುಗಿಯರು ಬೇಕಾಗಿದ್ದಾರೆ. Qualification: 7th, SSLC, PUC, Diploma, ITI, B.E (Mec), Any Degree
7338430805

TEACHERS WANTED
Montessori Teacher - 03
M.Sc, B.Ed - 02
B.Sc, B.Ed - 02
M.A, B.Ed English - 02
Hindi B.Ed - 02
M.A, B.Ed in Social -02
D.Ed any Subject - 02
P.E. Teacher - 01
GAYATHRI VIDYALAYA
Hosaundavadi, K.R.Sagara
8892927318 / 8183054747

WANTED
Computer Hardware Trainer To Train Harware & Networking at Educational Institute. Free Training Provided for the Trainer, Salary 20,000/- per month. Contact:
9902955544
*Conditions apply

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಕೆಲಸದಲ್ಲಿ ಅನುಭವವುಳ್ಳ ಗಾರ್ಡ್‌ಗಳು ಮೈಸೂರಿನ ಟಿನರ್‌ಸ್ಪುರ ರಸ್ತೆಯಲ್ಲಿ ಚಿಕ್ಕಳ್ಳಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ ಆಸಕ್ತಿವುಳ್ಳವರು ತಕ್ಷಣವೇ ಸಂಪರ್ಕಿಸಿ.
8197807977
9108100117

FREE TRAINING PROVIDED ON
1) Fundamentals of Computer
2) Advance M S Word
3) Advance M S Excel
4) Tally
5) Soft Skills
6) Professional Skills
9902955544
*Conditions apply

ಬೇಕಾಗಿದ್ದಾರೆ
ಮಂಗಳೂರಿನ ಪ್ರಖ್ಯಾತ ಕಂಪೆನಿಗೆ ಅಸಿಸ್ಟೆಂಟ್ ಮ್ಯಾನೇಜರ್ ಹುದ್ದೆಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 10500–15000 ಊಟ, ವಸತಿ ಉಚಿತ. ಸಂಪರ್ಕಿಸಿ:
7026597572

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ನಲ್ಲಿ ಕೆಲಸ
ಮಾಡಿಕೊಡಲಾಗುವುದು ಸ್ಯಾನಿಟರಿ ಕೆಲಸ, ಬಾತ್ ರೂಂ, ಆ್ಯಸಿಡ್ ವಾಶ್ ಮಾಡಿ ಕೊಡಲಾಗುವುದು
7829236625

ಬೇಕಾಗಿದ್ದಾರೆ
ಅಕೌಂಟೆಂಟ್
ಟ್ಯಾಲಿ & ಜಿಎಸ್‌ಟಿ ತಿಳಿದಿರಬೇಕು
ಗ್ರಾಫಿಕ್ ಡಿಸೈನರ್
Corel Draw & Photoshop ತಿಳಿದಿರಬೇಕು ಅನುಭವ ಇರುವವರಿಗೆ ಆದ್ಯತೆ
ಅಶೋಕ ರೋಡ್, ಮೈಸೂರು
Call: 0821-4267800

AVAILABLE FOR RENT
SHOWROOM SPACE 9000 Sqft on Bannur Road, Near Ring Road, 5HP, 3PH Power, Bore Well, 3 Side Compound & Gate on front with 600 Sqft RCC BLDG, 1000 Sqft Basement, 1500 Sqft Covered Area, Plus Watchmen Shelter and resting Room
Call: 94483 90918

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್&ಸರ್ವಿಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮಹಿಳೆಯರ ಕೈಗಾರಿಕಾ ಪ್ರದೇಶದಲ್ಲಿರುವ ಹೆಸರಾಂತ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ವರ್ಷ–ದೊರೆಯ ಬಂದವರಿಗೆ ಆದ್ಯತೆ. ವಿದ್ಯಾರ್ಹತೆ– ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ: 12,165+ESI&PF ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ. (ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ)
8453408502 / 9108100117

ಸೈಟುಗಳು ಮಾರಾಟಕ್ಕಿವೆ
MUDA Approved
Bank Loan Available
ಶ್ರೀನಗರ ಪಕ್ಕ ಮತ್ತು ಶ್ರೀರಾಂಪುರ ರಿಂಗ್ ರೋಡ್
8050345574

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
2921/ಎ, ಸರಸ್ವತಿಪುರಂ, ಮೈಸೂರು 11B, 9&11A ಖಾತಾಗಳಿಗೂ ಮುಡಾ & ಕಾರ್ಪೋರೇಷನ್ ಖಾತೆ ಇದ್ದರು, ಇಲ್ಲದಿದ್ದರೂ ಹಾಗೂ 15,000 ಮೇಲ್ಪಟ್ಟ ಸಂಬಳ ಇರುವವರಿಗೆ ಪರ್ಸನಲ್ ಲೋನ್ ಹಾಗೂ ಬಿಸಿನೆಸ್ ಲೋನ್, ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಸೌಲಭ್ಯ ದೊರೆಯುತ್ತದೆ. ಸಂಪರ್ಕಿಸಿ.
8088647887

ಎಸ್ಸಾರ್ ಸೋಲಾರ್ ವಾಟರ್ ಹೀಟರ್
UPS, Battery, Chimney, Water Purifier, Bio Mass Boiler, Gas Electrical Geyser Solar Home light
* Sales and Services available
* Exchange also available (with offer)
* Repair and Spare parts also available
* All Brands Solar Water Heater Service Available. Contact:
8073427780

ಬೇಕಾಗಿದ್ದಾರೆ
ತಮಿಳು ಮತ್ತು ಕನ್ನಡ ಮಾತನಾಡಲು ಬರುವ Telecaller ಮತ್ತು Executive ಬೇಕಾಗಿದ್ದಾರೆ.
ಸಂಬಳ - 20000/-
8884304444

ಸುವರ್ಣ ಯಾತ್ರ
24/05/22 ಕಾಶಿ ಪ್ರವಾಸ 6 ದಿನಗಳು: ಕಾಶಿ ಗಯಾ ಬುದ್ಧಗಯಾ, ಶ್ರೀ ಜಗನ್ನಾಥ ಮಂದಿರ
28/05/22 ಮನ ಜಗನ್ನಾಥ ಹಾಗೂ ಪಶುಪತಿನಾಥ ಪ್ರವಾಸ 9 ದಿನಗಳು, ...
11/06/22 ಚಾರ್‌ಧಾಮ್ ಪ್ರವಾಸ 13 ದಿನಗಳು ಕೇದಾರ್‌ನಾಥ್, ಬದ್ರಿನಾಥ್, ಯಮುನೋತ್ರಿ ಗಂಗೋತ್ರಿ
9008381022
9019462508

ಬೇಕಾಗಿದ್ದಾರೆ
ಬಜಾಜ್ ಫೈನಾನ್ಸ್ ಕಂಪನಿಗೆ ಟೆಲಿಕಾಲರ್ಸ್ ಯಾವುದೇ ವಿದ್ಯಾರ್ಹತೆ, ಭಾಷೆ: ಕನ್ನಡ, ಹಿಂದಿ, ತಮಿಳು, ತೆಲುಗು
6363567994
8951081653

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd, Kuvempu Nagar, Mysuru, Karnataka-570023
8152066999

Sri Narayanananda Vidyalaya
(English medium School)
Hinkal, Mysuru - 30
REQUIRED LADY TEACHERS
1) NST / Montessori, 2) P.U.C., D.Ed, 3) B.A., B.Ed 4) B.Sc., B.Ed, 5) C.PEd / B.PEd
Interview on 01-05-2022, Time: 10.00 a.m to 1.00 p.m
7353711673

ಬೇಕಾಗಿದ್ದಾರೆ
ಮೈಸೂರಿನ ಹೂಟಗಳ್ಳಿ ರಸ್ತೆ, ಬೆಳವಾಡಿಯಲ್ಲಿರುವ ಹೆಸರಾಂತ ಕಂಪನಿಗೆ ಅನುಭವವುಳ್ಳ ಸೆಕ್ಯುರಿಟಿ ಗಾರ್ಡ್‌ಗಳು ಮತ್ತು ಸೆಕ್ಯೂರಿಟಿ ಸೂಪರ್ ವೈಸರ್‌ಗಳು ಬೇಕಾಗಿದ್ದಾರೆ. ESI, EPF, W/off ಸೌಲಭ್ಯವಿದ್ದು 26/27 ದಿನಕ್ಕೆ 8 ಗಂಟೆ ಪಾಳಿಗೆ ಗಾರ್ಡ್‌ಗಳಿಗೆ 15,451, ಸೂಪರ್‌ವೈಸರ್‌ಗೆ 17,300 ರೂ. ಸಂಬಳ ದೊರೆಯುತ್ತದೆ. ಆಸಕ್ತರು ಕೂಡಲೇ ಈ ನಂಬರ್‌ಗಳಿಗೆ ಸಂಪರ್ಕಿಸಿ.
9900066284 / 9900066478
0821-2001661

ತಕ್ಷಣ ಬೇಕಾಗಿದ್ದಾರೆ
ಮೈಸೂರು ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ: 7th, SSLC, PUC, ITI, Diploma, Any Degree, Pass / Fail ಆದವರಿಗೆ Packing, Helper, Checking, Maintance, Line incharge, Filling, Front office, Telephone attender ಮುಂತಾದ ಕೆಲಸಗಳಿಗೆ ಸಂಪರ್ಕಿಸಿ. ಸಂಬಳ: 14,000-39000 (ESI+PF+OT)
9353753194
9980692151

WANTED URGENT
ಹೊಸದಾಗಿ ಆರಂಭಿಸಿರುವ Impulse Project ಗಳಿಗೆ 10th, PUC, Age (18-22) Earn (8,500/- ರಿಂದ 16,500/-) pm Freshers Only, No.Fee, Full Time Work ಪರಸ್ಪರವರಿಗೆ ವಸತಿಗಾಗಿ Call: 9am to 5.30pm, ಕಾಲ್:
9342827788
9353475598

ತಕ್ಷಣ ಬೇಕಾಗಿದ್ದಾರೆ
1) ಸೂಪರ್ ವೈಸರ್ – ಬಿ.ಬಿ.ಎ / ಬಿಕಾಂ ಆಫೀಸ್ ಮತ್ತು ಫ್ಯಾಕ್ಟರಿಗಾಗಿ
2) ಡ್ರೈವರ್ – (ಹೆವಿ ಗೂಡ್ಸ್ ವಾಹನ ಲೈಸೆನ್ಸ್ ಹೊಂದಿರಬೇಕು)
ಆಕರ್ಷಕ ಸಂಬಳ
STAR Al-Hamra Group
ಎಸ್.ಎಸ್.ಸ್ಟಾರ್ ಫೀಡ್ಸ್ ಪ್ರೈ.ಲಿ., ನಾಗಮಂಗಲ
9663001850 / 9739525293

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಮೊಬೈಲ್‌ನಲ್ಲಿ ಕೆಲಸ
ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಶ್ರೀ ಸಮ್ಮೋಹಿನಿ ಕ್ಲಿನಿಕ್
ದೇಹದ ಎಲ್ಲಾ ನೋವು ಮತ್ತು ಸಮಸ್ಯೆಗಳಿಗೆ
• ಭಯ ಮತ್ತು ಆತಂಕ (OCD)
• ಆತ್ಮಹತ್ಯೆ ಪ್ರವೃತ್ತಿ (SUICIDAL TENDENCY)
• ಮಾನಸಿಕ ಖಿನ್ನತೆ
9986216554 / 8762443326
Gangothri layout Mysore

ಉದ್ಯೋಗವಕಾಶ
ಮೈಸೂರಿನಲ್ಲಿ ಹೊಸದಾಗಿ ಆರಂಭವಾಗಿರುವ ಕಂಪನಿಯಲ್ಲಿ ಟೆಲಿಕಾಲಿಂಗ್ ಮಾಡಲು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC, Diploma, Any Degree ವಯೋಮಿತಿ:– 18 ರಿಂದ 28 ವರ್ಷದ ಒಳಗೆ, ಸಂಬಳ: 7000 to 12,500 (ಊಟ ವಸತಿ)
7899369558 / 7338009488

WANTED
English Medium Lady Teachers for a School at Gundlupet, 1) BA/MA English with B.Ed, 2) Any Degree with or without B.Ed, 3) BCA/MCA or Engineering graduates to teach Computer, 4) BA/MA Hindi with B.Ed. Very Good Salary, Free Transportation, Fluency in English is must.
9731897495

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

FOR SALE
1) 30x40 - 12 Lakhs, HD Kote Road.
2) Bogadi Road 40x30 22 Lks
3) 30x40 - Karle Habitat, Opp Univercity Layout.
4) 30x40 - KHB Layout, attch
5) Gayatri Layout 40x60.
PRAKRUTHI PROPERTIES
90359 90359, 95386 90359

ಜಮೀನು ಜೆ.ವಿ.ಗೆ ಲಭ್ಯವಿದೆ
7 ಎಕರೆ ಜಮೀನು ಟೌನ್‌ನಲ್ಲಿ (ಮೈಸೂರು ಜಿಲ್ಲೆ) ಜಂಟಿ ಅಭಿವೃದ್ಧಿ ವಸತಿ ಬಡಾವಣೆಗೆ ಲಭ್ಯವಿದೆ ಕಡಿಮೆ ಬಂಡವಾಳ ಅಧಿಕ ಲಾಭ
ಮೊ:9880059793

ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5250
(T&C) ಸಂಪರ್ಕಿಸಿ:– S.M ಗೋಲ್ಡ್ ಫೈನಾನ್ಸ್
8050518881

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

LOAN
(10 ಲಕ್ಷದಿಂದ 100 ಲಕ್ಷದವರೆಗೆ)
ಎಲ್ಲಾ ಹೊಸ Business ಗೆ Start up Loan without Collateral (30% Subsidy*) ಹಾಗೂ ಎಲ್ಲಾ old Business Loan ಗೆ Top Up Loan ಮತ್ತು ಹಲವಾರು ಸರ್ಕಾರದ ಎಲ್ಲಾ Project and Business Documents ಅನ್ನು ಮಾಡಿಕೊಡಲಾಗುವುದು (ಮಹಿಳೆಯರಿಗೆ SC ST ಗೆ ಮೊದಲ ಆದ್ಯತೆ)
9008507648
6364012493

916 ಅಚರಣಕ್ಕೆ 4700 ರೂ ಗಿರವಿ ಚಿನ್ನಾಭರಣ ಖರೀದಿ
10 ಗ್ರಾಂ ಚಿನ್ನಕ್ಕೆ 500 ಮಿಲಿ ಚಿನ್ನ ಲೆಸ್ ಮಾಡಿ 4700 ರೂಪಾಯಿಗಳಿಗೆ ಲೆಕ್ಕ ಮಾಡಿ. ... ಸಂಪರ್ಕಿಸಿ: MNM ಗೋಲ್ಡ್, ಅಶೋಕ ರಸ್ತೆ, ಗುಪ್ತ ಹೋಟೆಲ್ ಹತ್ತಿರ, ಮೈಸೂರು
9036991977

SAI Z+ SECURITY SERVICE
ಮೈಸೂರು ನಗರ ಪ್ರದೇಶಗಳಿಗೆ ಜೆ.ಪಿ.ನಗರ, ಹೂಟಗಳ್ಳಿ, ಆಲನಹಳ್ಳಿ, ಸೆಕ್ಯೂರಿಟಿಗಳು ಬೇಕಾಗಿದ್ದಾರೆ.
9632049421
8951661568

ಶ್ರೀ ರಾಮ್ ಟೂರ್
29/5/22 ರಿಂದ ವಿಮಾನದಲ್ಲಿ ನೇಪಾಳ ಪಶುಪತಿನಾಥ್ ಮುಕ್ತಿನಾಥ್ ಪುರಿ ಜಗನ್ನಾಥ್ ಕಾಶಿ ಜಾರ್ಖಂಡ್ 40000/–
9108933383
9606600383

ಬೇಕಾಗಿದ್ದಾರೆ
Doorstep CAR WASH
Part Time & Full Time
ತಿಂಗಳಿಗೆ : 15,000 – 25,000/– ಗಳಿಸಿ
Two Wheeler ಇರಬೇಕು.
8105169384

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಅನುಭವವುಳ್ಳ ಯುವಕ, ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಸಂಬಳ: 14,000 ರಿಂದ 16,000 (ESI, PF ಸೌಲಭ್ಯ ಇರುತ್ತದೆ)
8050699742

2 ಲಕ್ಷ ಇನ್‌ವೆಸ್ಟ್‌ಮೆಂಟ್ ಮಾಡುವವರಿಗೆ ಕೆಲಸ ಮತ್ತು ಪ್ರತಿದಿನ ಸಂಬಳ
ಪ್ರತಿದಿನ 2 ಲಕ್ಷ ಇನ್‌ವೆಸ್ಟ್‌ಮೆಂಟ್ ಮಾಡುವವರಿಗೆ ಕೆಲಸ ಮತ್ತು ಪ್ರತಿದಿನ 500 ರೂ. ಸಂಬಳ ಕೊಡಲಾಗುವುದು ಹಾಗೂ ಸಂಜೆ ಹಣ ವಾಪಸ್ ಪಡೆಯಬಹುದು. ಆಸಕ್ತಿಯುಳ್ಳವರು ಕರೆಮಾಡಿ. ಸಂಪರ್ಕಿಸಿ: MNM ಗೋಲ್ಡ್, ಅಶೋಕ ರಸ್ತೆ, ಗುಪ್ತ ಹೋಟೆಲ್ ಹತ್ತಿರ, ಮೈಸೂರು
9036991977

ಮನೆ ಮತ್ತು ಮಳಿಗೆ ಬಾಡಿಗೆಗೆ ಇದೆ
ಆಫೀಸ್ / ವಾಸಕ್ಕೆ G/F, E/F 30x40 2BHK 2ನೇ ಮುಖ್ಯ ರಸ್ತೆ, ಜಯನಗರ, ಮೈಸೂರು.
9341426433

ಬೇಕಾಗಿದ್ದಾರೆ
ಕನ್ನಡ ಟೈಪಿಂಗ್ ಗೊತ್ತಿರುವ ಹುಡುಗಿಯರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ: ಪ್ರಸಾದ್
7349672395

ಬೇಕಾಗಿದ್ದಾರೆ
ಕೊಟ್ಟಹಳ್ಳ ಆಯುರ್ವೇದಿಕ್ ಪಾರ್ಲರ್ ನಲ್ಲಿ ಕೆಲಸ ಮಾಡಲು ಆಸಕ್ತಿಯುಳ್ಳ ಯುವತಿಯರು (18 ರಿಂದ 30) ಮತ್ತು ಹುಡುಗಿಯರಿಗೆ ಉಚಿತ ತರಬೇತಿ ನೀಡಲಾಗುತ್ತದೆ ಮತ್ತು ನಮ್ಮಲ್ಲೇ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆ. (ಪಂಚಕರ್ಮ, ನಸ್ಯಕರ್ಮ, ಅಭ್ಯಂಗ, ಕಟಿಬಸ್ತಿ) ತರಬೇತಿ ನೀಡಲಾಗುವುದು.
8792785161 / 8861785154

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್, ಸಂಬಳ: 9,500 ರಿಂದ 11,000/–, ಸ್ಥಳ: ಆಲನಹಳ್ಳಿ, ಬನ್ನೂರು ರಿಂಗ್ ರೋಡ್, ಸಿದ್ಧಾರ್ಥ ಲೇಔಟ್, ವಯಸ್ಸು : 20 ರಿಂದ 50 ವರೆಗೆ
9741513225
9741513227

ಸೈಟು ಮಾರಾಟಕ್ಕಿದೆ
40x60 S/Face, T.N.Pura Main Road, ಕಮರ್ಷಿಯಲ್ ಜಾಗ, ಪ್ರಕೃತಿ ಲೇಔಟ್ ಪಕ್ಕ
DTCP Conversion 11B Khata ಸಂಪರ್ಕಿಸಿ: ರಾಜೇಶ್
8050332377

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಾರ್ಖಾನೆಗಳಲ್ಲಿ ಕೆಲಸ ಮಾಡಲು SSLC, PUC PASS / FAIL, ITI FITTERS, MECHANICAL MAINTENENCE, TOOLROOM (CNC AND VMC) OPERATORS, QUALITY INSPECTOR, ತಕ್ಷಣ ಬೇಕಾಗಿದ್ದಾರೆ. ESI, PF AND CANTEEN ಸೌಲಭ್ಯವಿರುತ್ತದೆ. ಸಂಪರ್ಕಿಸಿ :
8553934317 / 8660196479
8970775753

ಟೈಲರಿಂಗ್ ತರಬೇತಿ
ನಮ್ಮಲ್ಲಿ ನುರಿತ ತರಬೇತುದಾರರಿಂದ ಟೈಲರಿಂಗ್ ತರಬೇತಿ ನೀಡಲಾಗುತ್ತದೆ. ಸ್ಥಳ: ಗಣಪತಿ ಇಂಟರ್‌ನ್ಯಾಷನಲ್, 22/2, ಚಂದ್ರಗುಪ್ತ ರಸ್ತೆ, ಸಂಗಮ್ ಥಿಯೇಟರ್ ಹತ್ತಿರ, ಮೈಸೂರು
8073502957 / 959066328
8123819136

CAR FOR SALE
2015 Duster Diesel RCL Well Maintained Single Owner Mysuru Registration (5.50 Lakhs) Negotiable
9341333133

ಬೇಕಾಗಿದ್ದಾರೆ
ಮೈಸೂರಿನಲ್ಲಿ ಹೊಸದಾಗಿ ಪ್ರಾರಂಭವಾಗುತ್ತಿರುವ ಸಸ್ಯಾಹಾರಿ ಹೋಟೆಲ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ
1. ಸಪ್ಲೈಯರ್ಸ್, 2. ಕ್ಯಾಷಿಯರ್ 3. ಕೌಂಟರ್ ಬಾಯ್ಸ್, 4. ಕಿಚನ್ ಸ್ಟಾಫ್ 5. ಕ್ಲೀನರ್ ಗಳು, ನೇರವಾಗಿ ಸಂಪರ್ಕಿಸಿ:
9538556565
8951114554

SITE FOR SALE
30x42 N/F (Form - 11B)
ಮಾರುತಿ ಬಡಾವಣೆ, ಮಂಡಕಳ್ಳಿ
9845199240

ಜಮೀನು ಮಾರಾಟಕ್ಕಿದೆ
ಎರಡು ಎಕರೆ ಜಮೀನು ಮಾರಾಟಕ್ಕಿದೆ. ಮೈಸೂರು – ಬೆಂಗಳೂರು ಹೈವೆ ರಸ್ತೆ ಇಂದ 3 ಕಿ.ಮೀ. ಒಳಗೆ ದೊಡ್ಡ ಬ್ಯಾಡರ ಹಳ್ಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.
8880209752

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯೋಮಿತಿ 45 ವರ್ಷ ಒಳಪಟ್ಟು ಊಟ, ವಸತಿ ಸೌಲಭ್ಯ ಇರುತ್ತದೆ. ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ/ಪಿಯುಸಿ, ಆಗತ್ಯ ವಿವರಗಳೊಂದಿಗೆ ಸಂಪರ್ಕಿಸಿ: #380/ಎ, 2ನೇ ಮಹಡಿ, ಕೃಷ್ಣ ವಿಲಾಸ ರಸ್ತೆ, ಮೈಸೂರು
9513999755
9513089922

HOUSE FOR RENT
New Compact House Solar /UPS / Furniture @ Top Floor in 3rd Stage Vijayanagar Ideal for Single / Small Family
9986845068

ಉಚಿತ ಉಚಿತ ಉಚಿತ
25Kg ಚೀಲ BT ರೈಸನ್ನು ಖರೀದಿಸಿದರೆ 5Kg ಬ್ರಾಂಡ್ ಗೋಧಿಹಿಟ್ಟು, 2Kg ಸಕ್ಕರೆ, 1Kg ಫ್ರೈನ್ ತೊಗರಿಬೇಳೆ, ಅಥವಾ 2 ಕೆಜಿ ಸನ್‌ಫ್ಲವರ್ ಅಡುಗೆ ಎಣ್ಣೆ ಉಚಿತ
ಬೆಲೆ ರೂ 1350/–ಮಾತ್ರ
ಸನ್‌ಶೈನ್ ಟ್ರೇಡರ್ಸ್, ಶಿವರಾಂಪೇಟೆ ಮೋರ್ ಹತ್ತಿರ ಮೈಸೂರು
9206470833

ಬೇಕಾಗಿದ್ದಾರೆ
ಖಾಸಗಿ ಬ್ಯಾಂಕಿನಲ್ಲಿ ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: PUC, Degree ವೇತನ: ರೂ.12,000/– ರಿಂದ 25,000/– ಸಂಪರ್ಕಿಸಿ:
9980812378
9980814578

ಬೇಕಾಗಿದ್ದಾರೆ
(Consultancy ಅಲ್ಲ) AWG ಕಂಪನಿಗೆ SSLC (Pass), PUC, ITI, Any Degree, Dip, M.Com etc., ಆಗಿರುವ ಅಭ್ಯರ್ಥಿಗಳನ್ನು ನೇರ Interview ಮೂಲಕ Selection ಮಾಡಿಕೊಳ್ಳಲಾಗುತ್ತದೆ. ಯಾವುದೇ Experience ನ ಅಗತ್ಯವಿಲ್ಲ. ವಯೋಮಿತಿ 18 - 31 Years, ತಿಂಗಳಿಗೆ : 27,500 – 37,600 + ಉಚಿತ ವಸತಿ.
ಪ್ರತಿಭಾರವರು: 9663481922
7349699460

ಶಿಕ್ಷಕರು ಬೇಕಾಗಿದ್ದಾರೆ
ಶ್ರೀರಾಮ ವಿದ್ಯಾ ಸಂಸ್ಥೆ, ಅಂಕನಹಳ್ಳಿಪುರ, ಚಾಮರಾಜನಗರ ತಾಲ್ಲೂಕು, ಜಿಲ್ಲೆ
B.Sc, B.Ed - 2
B.A, B.Ed (ಇಂಗ್ಲೀಷ್, ಹಿಂದಿ)-2
P.E.T - 1
PUC, D.Ed - 2
NST -2
8453857576 / 8762718423

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ।। ಎಸ್.ಮಣಿಕಂಠನ್
ಮೊ: 9480743991

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮಾಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990

ಕೊಳ್ಳೇಗಾಲದ ಜ್ಯೋತಿಷ್ಯರು
ಮಾಟ ಮಂತ್ರ ವಶೀಕರಣ ಪ್ರಯೋಗಗಳಿಂದ ...
ಮೊ: 9880583804
(Divorce) ... (Reliance Smart) ... ATM ... (KSRTC) ...

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳ ವಿಶ್ವಾಸಾರ್ಹತೆ ಆಧರಿಸಿ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಇದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೇ 5, ರಾಮಾನುಜಾಚಾರ್ಯರ ಜಯಂತ್ಯುತ್ಸವ



ಮೇಲುಕೋಟೆ, ಏ.24– ಸಮಾನತೆಯ ಹರಿಕಾರ ಹಾಗೂ ಭಕ್ತಿ ಸಿದ್ಧಾಂತದ ಪ್ರತಿಪಾದಕ ಆಚಾರ್ಯ ರಾಮಾನುಜರ 1005ನೇ ಜಯಂತ್ಯುತ್ಸವ ಮೇ 5ರಂದು ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ವಿಜೃಂಭಣೆಯಿಂದ ನೆರವೇರಲಿದೆ. ತತ್ಸಂಬಂಧದ ಧಾರ್ಮಿಕ ಉತ್ಸವಗಳು ಏ.25 ರಿಂದ ಆರಂಭವಾಗಲಿದ್ದು, ಮೇ4 ರಂದು ರಥೋತ್ಸವ ನಡೆಯಲಿದೆ.

ಭಾರತದಲ್ಲಿ ಕರ್ನಾಟಕದ ಮೇಲುಕೋಟೆ ರಾಮಾನುಜರ ಕರ್ಮಭೂಮಿಯಾಗಿದ್ದು, ಶ್ರೀವೈಷ್ಣವರಿಗೆ ಪ್ರಮುಖ ಕ್ಷೇತ್ರವೆನಿಸಿದೆ. ಇಲ್ಲಿನ ಚೆಲುವನಾರಾಯಣನ ಸನ್ನಿಧಿಯಲ್ಲಿ ಹತ್ತು ದಿನಗಳ ಕಾಲ ನಡೆಯುವ ತಿರುನಕ್ಷತ್ರ ಮಹೋತ್ಸವ ಪವಿತ್ರವೆನಿಸಿದೆ. ಏ.26 ರಿಂದ ರಾಮಾನುಜರಿಗೆ ಪ್ರತಿದಿನ 8 ಗಂಟೆಗೆ ವಿವಿಧ ವಾಹನೋತ್ಸವಗಳು, ಮಧ್ಯಾಹ್ನ ಅಭಿಷೇಕ ಏ.29ರವರೆಗೆ ಪ್ರತಿ ಸಂಜೆ ಬೆಳ್ಳಿಯ ಪಲ್ಲಕ್ಕಿ ಉತ್ಸವ ಮೇ 30ರಂದು ಪುಷ್ಪಾಲಂಕೃತ ಬಂಗಾರದ ಪಲ್ಲಕ್ಕಿ ಉತ್ಸವ ನೆರವೇರಲಿದೆ.

ಗೋವಿಂದರಾಜಮುಡಿ: ರಾಮಾನುಜರಿಗೆ 6ನೇ ಉತ್ಸವದ ನಿಮಿತ್ತ ಮೇ 1 ರಂದು ಸಂಜೆ 7 ಗಂಟೆಗೆ ಗೋವಿಂದರಾಜಮುಡಿ ಕಿರೀಟ ಧಾರಣ ಮಹೋತ್ಸವ ನೆರವೇರಲಿದೆ. ಅಂದಿನಿಂದ ನಾಲ್ಕು ದಿನಗಳ ಕಾಲ ಆಚಾರ್ಯರಿಗೆ ವಿವಿಧ ಉತ್ಸವಗಳ ವೇಳೆ ಗೋವಿಂದರಾಜ ಮುಡಿ ಕಿರೀಟದ ಅಲಂಕಾರ ನಡೆಯಲಿದೆ.

ಮಹಾರಥೋತ್ಸವ: ಆಚಾರ್ಯರ ತಿರುನಕ್ಷತ್ರ ಮಹೋತ್ಸವದ 9ನೇ ದಿನವಾದ ಮೇ 4ರಂದು ರಾಮಾನುಜರಿಗೆ ಮಹಾರಥೋತ್ಸವ ನಡೆಯಲಿದೆ. ಅಂದು ಬೆಳಗ್ಗೆ 8 ಗಂಟೆಗೆ ಯಾತ್ರಾದಾನವಾದ ನಂತರ ಉತ್ಸವ ನಡೆದು 10 ಗಂಟೆಯ ವೇಳೆಗೆ ರಥೋತ್ಸವಕ್ಕೆ ಚಾಲನೆ ದೊರೆಯಲಿದೆ. ರಥೋತ್ಸವದ ನಂತರ ಯತಿರಾಜ ಮಠದಲ್ಲಿ ಅಭಿಷೇಕ ನಡೆಯಲಿದೆ. ದೇವಾಲಯದಲ್ಲಿ ಯತಿರಾಜ ದಾಸರ್ ಗುರುಪೀಠದಿಂದ ಭಿಕ್ಷಾಕೈಂಕರ್ಯ ನೆರವೇರಲಿದೆ

ಭಿಕ್ಷಾಕೈಂಕರ್ಯ; ರಾಮಾನುಜಾಚಾರ್ಯರ ತಿರುನಕ್ಷತ್ರ ಮಹೋತ್ಸವದಲ್ಲಿ ಸ್ಥಾನೀಕರಿಂದ ನಡೆಯುವ ಭಿಕ್ಷಾಕೈಂಕರ್ಯ ಅತ್ಯಂತ ವಿಶೇಷವಾಗಿದೆ. 12ನೇ ಶತಮಾನದಲ್ಲಿ 12 ವರ್ಷ ಮೇಲುಕೋಟೆಯಲ್ಲಿದ್ದ ರಾಮಾನುಜರು ಪ್ರತಿದಿನ 4 ಮಂದಿಯಲ್ಲಿ ಸ್ಥಾನೀಕರೊಬ್ಬರ ಮನೆಗೆ ತೆರಳಿ ಭಿಕ್ಷೆ ಸ್ವೀಕಾರ ಮಾಡುತ್ತಿದ್ದರೆಂಬ ಇತಿ ಹಾಸವಿದೆ. ಹೀಗಾಗಿ ತಿರುನಕ್ಷತ್ರ ಮಹೋತ್ಸವ ಸೇರಿದಂತೆ ಹಿಂದಿನ ಮೂರು ದಿನಗಳಂದು ಸ್ಥಾನೀಕರು ಇಡೀ ದಿನ ಉಪವಾಸವಿದ್ದು ರಾಮಾನುಜರಿಗೆ ಭಿಕ್ಷಾಕೈಂಕರ್ಯ ಸೇವೆ ಸಲ್ಲಿಸಲಿದ್ದಾರೆ. ಮೇ 2 ರಂದು ಕರಗಂ ಗುರು ಪೀಠದಿಂದ ಪ್ರಥಮ ಸ್ಥಾನೀಕರಾದ ಕರಗಂ ನಾರಾಯಣ ಅಯ್ಯಂಗಾರ್ ಮೇ 3 ರಂದು ಮೂರನೇ ಸ್ಥಾನೀಕರ ಪೈಕಿ ಸರದಿಯವರು ಮೇ 4 ರಂದು ರಥೋತ್ಸವದಂದು ಯತಿರಾಜದಾಸರ್ ಗುರುಪೀಠದಿಂದ ಸ್ಥಾನಾಚಾರ್ಯ ಶ್ರೀನಿವಾಸ ನರಸಿಂಹನ್ ಗುರೂಜಿ ಮೇ5 ರಂದು 2ನೇ ಸ್ಥಾನೀಕರು ಸೀತಾರಣ್ಯದಲ್ಲಿ ಭಿಕ್ಷಾಕೈಂಕರ್ಯ ನೆರವೇರಿಸಲಿದ್ದಾರೆ.

ಶ್ರೀ ಪೆರಂಬೂದೂರಿನ ಉತ್ಸವದಷ್ಟೆ ವೈಭವವನ್ನು ಮೇಲುಕೋಟೆ ಚೆಲುವನ ಸನ್ನಿಧಿಯಲ್ಲಿ ನಡೆಯುವ ತಿರುನಕ್ಷತ್ರ ಮಹೋತ್ಸವ ಪಡೆದುಕೊಂಡಿದ್ದು, ಸಹಸ್ರಾರು ಭಕ್ತರು ಪಾಲ್ಗೊಳ್ಳುತ್ತಾರೆ.

ಏನೇನು ಕಾರ್ಯಕ್ರಮಗಳು

ಏ.26 ಮಂಟಪ ವಾಹನೋತ್ಸವ ಏ.27 ಹಂಸವಾಹನೋತ್ಸವ, ಏ.28 ಸೂರ್ಯಮಂಡಲ ವಾಹನೋತ್ಸವ ಏ.29 ಚಂದ್ರಮಂಡಲ ವಾಹನೋತ್ಸವ ಏ.30 ಅಶ್ವ ವಾಹನೋತ್ಸವ ಮೇ1 ರಾತ್ರಿ 7 ಗಂಟೆಗೆ ಗೋವಿಂದರಾಜಮುಡಿ ಉತ್ಸವ ಮೇ 2 ಅಶ್ವ ವಾಹನೋತ್ಸವ ಮೇ 3 ಆನೆ ವಾಹನೋತ್ಸವ ಮೇ 4 ಬೆಳಗ್ಗೆ 10 ಗಂಟೆಗೆ ಮಹಾರಥೋತ್ಸವ ಮೇ 5 ರಾಮಾನುಜರ ತಿರುನಕ್ಷತ್ರ ಮಹೋತ್ಸವ ಬೆಳಿಗ್ಗೆ 7 ಸಮರ ಭೂಪಾಪ ವಾಹನ, ಮಧ್ಯಾಹ್ನ ದ್ವಾದಶಾರಾಧನೆಯೊಂದಿಗೆ ಅಭಿಷೇಕ ಸಂಜೆ ಗಂಧದ ಅಲಂಕಾರ ರಾತ್ರಿ 11–30ಕ್ಕೆ ಚೆಲುವನಾರಾಯಣ ಸ್ವಾಮಿಗೆ ದಶಾವತಾರ ಉತ್ಸವ ನಡೆಯಲಿದೆ. ಏ 26 ರಿಂದ ಮೇ 5 ರವರೆಗೆ ಪ್ರತಿದಿನ ಬೆಳಗ್ಗೆ 8 ಗಂಟೆಗೆ ವಾಹನೋತ್ಸವಗಳು, 10 ಗಂಟೆಗೆ ರಾಮಾನುಜರಿಗೆ ಅಭಿಷೇಕ ನಡೆಯಲಿದೆ.

ಡಾ.ರಾಜ್‌ಕುಮಾರ್ ದೇಶಕಂಡ ಅಪ್ರತಿಮ ನಟ



ಮಂಡ್ಯ,ಏ.24(ಮೋಹನ್‌ರಾಜ್)– ಡಾ.ರಾಜ್‌ಕುಮಾರ್‌ದೇಶ ಕಂಡ ಅಪ್ರತಿಮ ನಟರಾಗಿದ್ದರು ಎಂದು ನಗರಸಭಾಧ್ಯಕ್ಷ ಎಚ್.ಎಸ್. ಮಂಜು ಬಣ್ಣಿಸಿದರು.

ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕಿನಲ್ಲಿ ಮಂಡ್ಯ ಜಿಲ್ಲಾ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಡಾ.ರಾಜ್‌ಕುಮಾರ್‌ರವರ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಿಂಗಾನಲ್ಲೂರಿ ನಂತಹ ಸಣ್ಣ ಹಳ್ಳಿಯಲ್ಲಿ ಹುಟ್ಟಿದ ಅವರು, ಕಲಾ ರಂಗದ ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಛಾಪನ್ನು ಮೂಡಿಸಿದ್ದರು. ಅವರು ನಟಿಸಿದ್ದ ಚಿತ್ರಗಳು ಸಂದೇಶ ಸಾರುತ್ತಿದ್ದರು.

ದಾನ, ಧರ್ಮ, ಸಮಾಜ ಸೇವೆ ಮಾಡುವ ಮೂಲಕ ತಮ್ಮನ್ನು ತೊಡಗಿಸಿ ಕೊಂಡಿದ್ದರು. ಕನ್ನಡ ಭಾಷೆಯ ಚಿತ್ರವನ್ನು ಬಿಟ್ಟು ಬೇರೆ ಭಾಷೆಯಲ್ಲಿ ಅವರು ನಟಿಸಲಿಲ್ಲ ಎಂದರು.

ಮಾಜಿ ಸಚಿವ ಎಂ.ಎಸ್. ಆತ್ಮಾನಂದ ಮಾತನಾಡಿ, ಡಾ.ರಾಜ್‌ಕುಮಾರ್‌ರವರು ನಾಡು ನುಡಿಗೆ ಸಲ್ಲಿಸಿದ ಸೇವೆ ಪ್ರತಿಯೊಬ್ಬರೂ ಸ್ಮರಿಸಬೇಕು. ಗೋಕಾಕ್ ಚಳವಳಿಯಲ್ಲೂ ಭಾಗವಹಿಸುವ ಮೂಲಕ ಕನ್ನಡತನವನ್ನು ಎತ್ತಿ ಹಿಡಿಯುವ ಪ್ರಯತ್ನ ಮಾಡಿದರು ಎಂದರು. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ಜಿ.ಟಿ. ರವೀಂದ್ರ ಕುಮಾರ್ ಮಾತನಾಡಿ, ಮಂಡ್ಯ ನಗರದಲ್ಲಿ ರಾಜ್‌ಕುಮಾರ್ 94ನೇ ವರ್ಷದ ಹುಟ್ಟು ಹಬ್ಬವನ್ನು ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ಪ್ರಗತಿಪರ ಸಂಘಟನೆಗಳ ಸಹಕಾರದೊಂದಿಗೆ ವಿಜೃಂಭಣೆಯಿಂದಆಚರಣೆ ಮಾಡಲಾಗುತ್ತಿದೆ. ಜೊತೆಗೆ ಅನ್ನಸಂತರ್ಪಣೆ ಹಾಗೂ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಹೇಳಿದರು.

ಬಿಜೆಪಿ ಮುಖಂಡರಾದ ಡಾ.ಸಿದ್ದರಾಮಯ್ಯ, ಹೊಸಹಳ್ಳಿ ನಾಗೇಶ್, ಅರುಣ್ ಕುಮಾರ್, ಬೇಕ್ರಿರಮೇಶ್, ಅಭಿಮಾನಿಗಳ ಸಂಘದ ಪ್ರವೀಣ್‌ಕುಮಾರ್, ಸುರೇಶ್, ಮಾಜಿ ನಗರಸಭಾ ಸದಸ್ಯಎಲ್.ಆನಂದ್ ಸೇರಿದಂತೆ ಇತರರು ಇದ್ದರು.

ಧರ್ಮದ ರಕ್ಷಣೆಗೆ ಎಲ್ಲರೂ ಒಗ್ಗೂಡಬೇಕು



ಪಾಂಡವಪುರ, ಏ.24– ಹಿಂದೂ ಧರ್ಮದ ರಕ್ಷಣೆಗಾಗಿ ಪ್ರತಿಯೊಬ್ಬ ಹಿಂದೂಗಳು ಜಾತಿ, ಮತಗಳನ್ನು ಮೀರಿ ಒಗ್ಗೂಡಬೇಕು ಎಂದು ಬಾಲ ವಾಗ್ಮಿ ಹಾರಿಕಾ ಮಂಜುನಾಥ್ ಹೇಳಿದರು.

ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ನಡೆದ ಶ್ರೀರಾಮ ಪಟ್ಟಾಭಿಷೇಕ ಮತ್ತು ಶೋಭಯಾತ್ರೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಹಿಂದೂಗಳಿಗೆ ಇರುವುದು ಒಂದೇ ರಾಷ್ಟ್ರ ಅದು ಭಾರತ. ಧರ್ಮದ ಉಳಿವಿಗಾಗಿ ನಮ್ಮ ಪೂರ್ವಿಕರು ಅನೇಕ ತ್ಯಾಗ ಮಾಡಿದ್ದಾರೆ. ಅವರ ಹೋರಾಟದ ಫಲವಾಗಿ ನಾವು ಇನ್ನೂ ಹಿಂದೂಗಳಾಗಿ ಈ ರಾಷ್ಟ್ರದಲ್ಲಿ ಬದುಕಿದ್ದೇವೆ. ಡಚ್ಚರು, ಫ್ರೆಂಚರು, ಪೋರ್ಚುಗೀಸರು, ಇಂಗ್ಲೀಷ್, ಸವಣರು, ಸೇರಿದಂತೆ ಅನೇಕ ರಾಜಮನೆತನಗಳು ಹಿಂದೂ ಧರ್ಮದ ಮೇಲೆ ದಬ್ಬಾಳಿಕೆ ನಡೆಸಿದ್ದಾರೆ. ಎಲ್ಲವನ್ನು ಸಹಿಸಿಕೊಂಡು ಬಂದಿದ್ದೇವೆ. ಇತ್ತೀಚಿನ ದಿನಗಳಲ್ಲಿ ಹಿಂದೂಗಳು ಒಗ್ಗೂಡುತ್ತಿರುವುದು ಸಂತಸದ ವಿಚಾರ. ಶಿವಮೊಗ್ಗದ ಹರ್ಷನ ಕೊಲೆ ಪ್ರಕರಣದಲ್ಲಿ ಹಿಂದೂಗಳೆಲ್ಲಾ ಒಗ್ಗೂಡಿ ಕುಟುಂಬಕ್ಕೆ ಆರ್ಥಿಕ ಸಹಾಯ ಮಾಡಿದ್ದು, ಒಳ್ಳೆಯ ಬೆಳವಣಿಗೆಯಾಗಿದೆ ಎಂದರು.

ದೇಶದ 9 ರಾಜ್ಯಗಳಲ್ಲಿ ಈಗಾಗಲೇ ಹಿಂದೂಗಳು ಅಲ್ಪಸಂಖ್ಯಾತರಾಗಿದ್ದಾರೆ. ಇದನ್ನು ಅರ್ಥಮಾಡಿಕೊಂಡು ನಾವು ಜಾಗೃತರಾಗಬೇಕಾಗಿದೆ. ನಾನು ದೆಹಲಿ, ಮಹಾರಾಷ್ಟ್ರ ಪ್ರವಾಸ ಮಾಡಿದ ಸಂದರ್ಭದಲ್ಲಿ ಅಲ್ಲಿನ ಜನರು ಕರ್ನಾಟಕದ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಿದ್ದಾರೆ. ಮುಂದೆ ಭಾರತ ಮಾಡಬೇಕಾಗಿರುವ ಕೆಲಸವನ್ನು ಕರ್ನಾಟಕ ರಾಜ್ಯ ಈಗಾಗಲೇ ಮಾಡಿದೆ ಎಂಬುದು ಅಲ್ಲಿನ ಜನರ ಭಾವನೆಯಾಗಿದೆ. ನಾವು ಹಿಂದಿನಿಂದಲೂ ಹೆಣ್ಣುಮಕ್ಕಳು ಭಾಗಿಯಾಗಿ ಎಂದು ಬೇಡಿಕೊಂಡರು ಆ ಕೆಲಸ ಆಗಿರಲಿಲ್ಲ. ಇದೀಗ ಹಿಂದೂ ಧರ್ಮದ ರಕ್ಷಣೆ ಪ್ರತಿಮನೆಯಿಂದ ಆರಂಭಗೊಳ್ಳಬೇಕಾಗಿದೆ. ಮೊದಲು ಮಹಿಳೆಯರು ಜಾಗೃತರಾಗಬೇಕು. ಮಹಿಳೆಯರು ತಮ್ಮ ಮಕ್ಕಳಿಗೆ ನಮ್ಮ ಸನಾತನ ಧರ್ಮದ ಬಗ್ಗೆ ಅರಿವು ಮೂಡಿಸಬೇಕು. ನಾವೆಲ್ಲರೂ ಸೇರಿ ಸಂಘಟನೆ ಮತ್ತು ಸಂಘಟನಾಮನೋಭಾವವನ್ನು ಮುಂದುವರೆಸಿ ಧರ್ಮರಕ್ಷಣೆ ಮಾಡೋಣ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಶ್ರೀ ರಾಮಯೋಗೀಶ್ವರ ಮಠದ ಪೀಠಾಧ್ಯಕ್ಷ ಶ್ರೀ ಶಿವಬಸವ ಸ್ವಾಮೀಜಿ, ಅವ್ವೇರಹಳ್ಳಿ ಹೊಸಮಠದ ಶ್ರೀ ಸಿದ್ದಲಿಂಗಸ್ವಾಮೀಜಿ, ಮೇಲುಕೋಟೆ ಆನಂದಾಶ್ರಮದ ಶ್ರೀ ರಾಮಾಂಜನೇಯ ಜೀಯರ್, ಬಿಜೆಪಿ ಮುಖಂಡ ಡಾ.ಎನ್.ಎಸ್.ಇಂದ್ರೇಶ್ ಹಲವರು ಇದ್ದರು.

ಉತ್ತಮ ಸಮಾಜ ನಿರ್ಮಾಣಕ್ಕೆ ಪೌರಾಣಿಕ ನಾಟಕ ಸಹಕಾರಿ



ಕೆ.ಆರ್.ಪೇಟೆ,ಏ.24– ಪೌರಾಣಿಕ ನಾಟಕಗಳು ಸತ್ಯ, ನ್ಯಾಯ, ನೀತಿ, ಧರ್ಮದ ಹಾದಿಯಲ್ಲಿ ಮನುಷ್ಯರು ಜೀವನ ಸಾಗಿಸುವುದಕ್ಕೆ ಪ್ರೇರಕ ಶಕ್ತಿಯಾಗಿವೆ, ಜೊತೆಗೆ ಅಧರ್ಮ, ಮೋಸ, ದ್ವೇಷಕ್ಕೆ ಎಂದಿಗೂ ಕಾಲವಿಲ್ಲ ಎಂಬ ಸಂದೇಶವನ್ನು ನಾಟಕದ ವಿವಿಧ ಪಾತ್ರಗಳು ಸಾರುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಿವೆ ಎಂದು ಮಾಜಿ ಶಾಸಕ ಡಾ. ಕೆ.ಬಿ.ಚಂದ್ರಶೇಖರ್ ಅವರು ಅಭಿಪ್ರಾಯಪಟ್ಟರು.

ತಾಲೂಕಿನ ಬೂಕನಕೆರೆ ಗ್ರಾಮದಲ್ಲಿ ದಿ.ಕೆಂಚೇಗೌಡ ಹಾಗೂ ದಿ.ಅಡಿಕೆ ಸ್ವಾಮಿಗೌಡ ಅವರ ಸ್ಮರಣಾರ್ಥ ಮಿತ್ರ ಫೌಂಡೇಶನ್ ಟ್ರಸ್ಟ್ ಅಧ್ಯಕ್ಷರು ಹಾಗೂ ಸಮಾಜ ಸೇವಕ ವಿಜಯ್ ರಾಮೇಗೌಡ ಹಾಗೂ ಜಿ.ಪಂ.ಮಾಜಿ ಸದಸ್ಯ ವೆಂಕಟೇಶ್ ನೇತೃತ್ವದಲ್ಲಿ ಶ್ರೀ ರಾಮ ಕೃಪಾ ಪೋಷಿತ ನಾಟಕ ಮಂಡ ಳಿಯ ಹೇಮಾವತಿ ಪರಿಣಯ ಅಥವಾ ಶಿವಭಕ್ತ ಚಂಡಾಸುರನ ವಧೆ ಎಂಬ ಪೌರಾಣಿಕ ನಾಟಕದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬಹಳ ವರ್ಷಗಳ ಹಿಂದೆ ಗ್ರಾಮೀಣ ಪ್ರದೇಶಗಳಲ್ಲಿ ರಾಮಾಯಣ, ಮಹಾಭಾರತ ನಾಟಕಗಳನ್ನು ನೋಡಿದ ಜನರು ಅಲ್ಲಿನ ಪಾತ್ರಗಳಲ್ಲಿ ಬರುವ ಸತ್ಯ, ತ್ಯಾಗ, ಪರೋಪಕಾರ ಗುಣಗಳನ್ನು ಬೆಳೆಸಿ ಕೊಂಡು ತಮ್ಮ ಬದುಕನ್ನು ಉತ್ತಮ ರೀತಿ ಯಲ್ಲಿ ಬದಲಾಯಿಸಿ ಕೊಂಡು ಜೀವನ ಮಾಡುತ್ತಿದ್ದರು ಎಂದು ಚಂದ್ರಶೇಖರ್ ಹೇಳಿದರು.

ಮಾಜಿ ಶಾಸಕ ಬಿ.ಪ್ರಕಾಶ್ ಕಾರ್ಯಕ್ರಮ ಉದ್ಘಾಟಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಿಕ್ಕೇರಿ ಸುರೇಶ್, ಮಿತ್ರ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ವಿಜಯ್ ರಾಮೇಗೌಡ ಮಾತನಾಡಿದರು.

ಗ್ರಾಮದ ಹಿರಿಯ ಮುಖಂಡ ಬಿ.ಬೋಳೇಗೌಡ, ಎಂಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ವಿ ಡಿ ಹರೀಶ್, ಕೆಯುಐಡಿಎಫ್‌ಸಿ ನಿಗಮದ ಮಾಜಿ ರಾಜ್ಯಾಧ್ಯಕ್ಷ ಎಂ.ಡಿ.ಕೃಷ್ಣಮೂರ್ತಿ, ಜಿ.ಪಂ.ಮಾಜಿ ಸದಸ್ಯರಾದ ಸರ್ವಮಂಗಳ ವೆಂಕಟೇಶ್, ತಾ.ಪಂ.ಮಾಜಿ ಸದಸ್ಯ ಮಾಧವಪ್ರಸಾದ್, ಹಲವು ಗಣ್ಯರು ಉಪಸ್ಥಿತರಿದ್ದರು.

ದ್ಯಾವಶೆಟ್ಟಿ ನಿಧನ



ಕೆ.ಆರ್.ಪೇಟೆ,ಏ.24– ತಾಲೂಕಿನ ಮಂದಗೆರೆ ಗ್ರಾಮದ ರೈಲ್ವೆ ಇಲಾಖೆ ನಿವೃತ್ತ ನೌಕರ ದ್ಯಾವಶೆಟ್ಟಿ (95) ಭಾನುವಾರ ನಿಧನರಾದರು. ಮೃತರು ವಕೀಲರಾದ ರಾಣಿ, ಪೂರ್ಣಿಮಾ ಸೇರಿದಂತೆ ನಾಲ್ಕರು ಪುತ್ರಿಯರು, ಪುತ್ರ ಜೆಎಂಎಫ್‌ಸಿ ನ್ಯಾಯಾಲಯ ಸರ್ಕಾರಿ ಅಭಿಯೋಜಕ ಎಂ.ಡಿ.ಅನುರೇವು, ಅಳಿಯ ಆರ್.ಶ್ರೀನಿವಾಸ್ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಸ್ವಗ್ರಾಮದಲ್ಲಿ ನೆರವೇರಿತು.

ಇಂದು ಬೃಹತ್ ಆರೋಗ್ಯ ಮೇಳ

ಶ್ರೀರಂಗಪಟ್ಟಣ,ಏ.24(ವಿನಯ್ ಕಾರೇಕುರ)– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಾಲೂಕು ಆರೋಗ್ಯಾಧಿಕಾರಿ ವತಿಯಿಂದ ಏ.25ರಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ತಾಲೂಕು ಮಟ್ಟದ ಬೃಹತ್ ಆರೋಗ್ಯ ಮೇಳ ಹಾಗೂ ಆರೋಗ್ಯ ಕಾರ್ಯಕ್ರಮಗಳ ಜಾಗೃತಿ ಅಭಿಯಾನವನ್ನು ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಲಾಗಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಎನ್.ಕೆ.ವೆಂಕಟೇಶ್ ತಿಳಿಸಿದರು.

ಈ ಉಚಿತ ಆರೋಗ್ಯ ಮೇಳದಲ್ಲಿ ಸಾಮಾನ್ಯ ಕಾಯಿಲೆಗಳು, ಕಣ್ಣು ಕಿವಿ, ಗಂಟಲು, ಎಲುಬು, ಕೀಲು, ಕ್ಷಯ, ಕ್ಯಾನ್ಸರ್, ಹೃದಯ ತೊಂದರೆ, ಸಾಂಕ್ರಾಮಿಕ ರೋಗಗಳ ತಪಾಸಣೆ, ಯೋಗ, ವಿವಿಧ ವಸ್ತುಪ್ರದರ್ಶನ ಸೇರಿದಂತೆ ಎಲ್ಲ ಬಗೆಯ ಕಾಯಿಲೆಗಳಿಗೆ ತಜ್ಞ ವೈದ್ಯರಿಂದ ಎಲ್ಲ ಬಗೆಯ ಆರೋಗ್ಯ ತಪಾಸಣೆ ಹಾಗೂ ಉಚಿತ ಔಷಧಿ ವಿತರಣೆ ಮಾಡಲಾಗುತ್ತಿದೆ. ಆದ್ದರಿಂದ ತಾಲೂಕಿನ ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳುವಂತೆ ಡಾ.ವೆಂಕಟೇಶ್ ತಿಳಿಸಿದ್ದಾರೆ.

ದೇವೇಗೌಡರ ಆಗಮನದ ವೇಳೆ ಡ್ರೋಣ್ ಹಾರಾಟ

ಕೆಲ ಸಮಯ ಭದ್ರತಾ ಸಿಬ್ಬಂದಿಗೆ ಆತಂಕ

ನೆಲಮಂಗಲ, ಏ.24– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಆಗಮನದ ವೇಳೆ ಭದ್ರತಾ ವೈಫಲ್ಯ ಎದುರಾಗ ಘಟನೆ ಬೆಂಗಳೂರು ಹೊರವಲಯ ನೆಲಮಂಗಲದಲ್ಲಿ ನಡೆದಿದೆ.

ನೆಲಮಂಗಲ ತಾಲೂಕಿನ ಭಾರತಿಪುರದ ಗ್ರಾಮದಲ್ಲಿ ದೇವತಾ ಕಾರ್ಯಕ್ರಮ ಇತ್ತು. ಈ ಕಾರ್ಯಕ್ರಮದಲ್ಲಿ ಭಾಗಿಯಾಗಲು ಮಾಜಿ ಪ್ರಧಾನಿ ಆಗಮಿಸುತ್ತಿದ್ದರು. ಅಂತೆಯೇ ನೆಲಮಂಗಲ ತಾಲೂಕಿನ ನಿಡವಂದ ಹೆಲಿಪ್ಯಾಡ್ ಗೆ ಆಗಮಿಸಿದ ವೇಳೆ ಹೆಲಿಕಾಪ್ಟರ್ ಸಮೀಪಕ್ಕೆ ಡ್ರೋನ್ ಕ್ಯಾಮೆರಾ ಬಂದಿದೆ. ಇದರಿಂದ ಸಿಬ್ಬಂದಿ ಕೆಲಕಾಲ ಆತಂಕ ಗೊಂಡ ಪ್ರಸಂಗ ಎದುರಾಗಿದೆ. ಡ್ರೋನ್ ಹಾರಾಟ ಕಂಡು ಭದ್ರತಾ ಸಿಬ್ಬಂದಿ ಆಕ್ರೋಶ ಹೊರಹಾಕಿದ್ದಾರೆ. ಡ್ರೋನ್ ಹಾರಾಟ ನಿಲ್ಲಿಸುವಂತೆ ಭದ್ರತಾ ಸಿಬ್ಬಂದಿ ಗರಂ ಆಗಿದ್ದಾರೆ. ಡ್ರೋನ್ ಹಾರಾಟ ನಿಲ್ಲಿಸುವವರೆಗೂ ಮಾಜಿ ಪ್ರಧಾನಿ ಕೆಳಗೆ ಇಳಿಯಲಿಲ್ಲ. ಡ್ರೋನ್ ಹಾರಾಟ ನಿಂತ ಬಳಿಕ ದೇವೇಗೌಡರು ಕೆಳಗಿಳಿದರು.

'ಮಾರ್ ಥೋಮಸಿರಿಯನ್ ಚರ್ಚ್' ಉದ್ಘಾಟನೆ



ಮೈಸೂರು, ಏ.24(ಎಂಕೆ)– ನಗರದ ಹೆಬ್ಬಾಳ 2ನೇ ಹಂತದಲ್ಲಿ ನಿರ್ಮಾಣಗೊಂಡಿರುವ ನೂತನ 'ಮಾರ್ ಥೋಮಸಿರಿಯನ್ ಚರ್ಚ್' ಶನಿವಾರ ಉದ್ಘಾಟನೆಗೊಂಡಿತು.

ಚೆನ್ನೈ ಮತ್ತು ಬೆಂಗಳೂರು ಧರ್ಮಪ್ರಾಂತ್ಯ ಬಿಷಪ್ ಡಾ.ಮ್ಯಾಥ್ಯೂಸ್ ಮಾರ್ ಮಕಾರಿಯೋಸ್ ಎಪಿಸ್ಕೋಪಾ ಅವರು, ವಿಶೇಷ ಪೂಜಾ ಕೈಂಕರ್ಯದ ನೆರವೇರಿಸಿ ಚರ್ಚ್ ಉದ್ಘಾಟಿಸಿದರು. ಅವರೊಂದಿಗೆ ಮೈಸೂರು ಬಿಷಪ್ ಡಾ.ಕೆ.ಎ.ವಿಲಿಯಂ, ಕ್ರೈಸ್ತ ಧರ್ಮಗುರುಗಳಾದ ಜಯನ್ ಥಾಮಸ್, ಪ್ರಕಾಶ್ ಅಬ್ರಹಾಂ, ವರ್ಗಿಸ್ ಜಾನ್ ಸೇರಿದಂತೆ ಕ್ರೈಸ್ತ ಸಮುದಾಯವರು ಪಾರ್ಥನೆ ಸಲ್ಲಿಸಿದರು.

ಬಳಿಕ ಮಾತನಾಡಿದ ಚೆನ್ನೈ ಮತ್ತು ಬೆಂಗಳೂರು ಧರ್ಮಪ್ರಾಂತ್ಯ ಬಿಷಪ್ ಮ್ಯಾಥ್ಯೂಸ್ ಮಾರ್ ಮಕಾರಿಯೋಸ್ ಎಪಿಸ್ಕೋಪಾ, ಜೀಸಸ್ ಇತರಲ್ಲಿ ಒಬ್ಬರಾಗಿದ್ದಾರೆ. ಉದ್ಘಾಟನೆಯಾಗಿರುವ ಚರ್ಚ್ ಅದರ ಸದಸ್ಯರಿಗೆ ಮಾತ್ರವಲ್ಲ, ಎಲ್ಲರಿಗೂ ಉಪಯುಕ್ತವಾಗಬೇಕು. ಚರ್ಚ್‌ಗಳಲ್ಲಿ ನಡೆಯುವ ಪ್ರಾರ್ಥನೆ ಮತ್ತು ಆರಾಧನೆಯು ದುಃಖದ ಮರೆಸಿ ಸುಖ–ಶಾಂತಿಯನ್ನು ನೀಡುತ್ತದೆ ಎಂದು ಹೇಳಿದರು.

ವಿಶೇಷ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ಪೊಲೀಸ್ ಅಕಾಡೆಮಿ ಮೈಸೂರು ಸಹಾಯಕ ನಿರ್ದೇಶಕಿ ದಿವ್ಯಾ ಸಾರಾ ಥಾಮಸ್ ಕಾರ್ಯಕ್ರಮದ ಕುರಿತು ಮಾತನಾಡಿದರು. ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ನಗರ ಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಪ್ರೇಮಾ ಶಂಕರೇಗೌಡ, ಶೋಭಾ ಸುನೀಲ್ ಮತ್ತಿತರರು ಭಾಗವಹಿಸಿದ್ದರು.

ಗುವಾಹಟಿ ಪಾಲಿಕೆ ಚುನಾವಣೆ: 60ಕ್ಕೆ 58 ವಾರ್ಡ್‌ಗಳಲ್ಲಿ ಬಿಜೆಪಿ ಮೈತ್ರಿಗೆ ಜಯಭೇರಿ

ದಿಸ್ಪುರ, ಏ.24– ಅಸ್ಸಾಂನ ಗುವಾಹಟಿ ಪಾಲಿಕೆ ಚುನಾವಣೆಯ ಮತ ಎಣಿಕೆ ನಡೆದಿದ್ದು, ಬಿಜೆಪಿ ಮತ್ತು ಮಿತ್ರಪಕ್ಷ ಅಸೋಮ್ ಗಣ ಪರಿಷದ್ (ಎಜಿಪಿ) ಕ್ಲೀನ್ ಸ್ವೀಪ್ ಸಾಧಿಸಿದೆ. 60ರ ಪೈಕಿ 58 ವಾರ್ಡ್‌ಗಳಲ್ಲಿ ಭರ್ಜರಿ ಜಯ ಸಾಧಿಸಿದೆ.

ಅಸ್ಸಾಂನ ಅತಿದೊಡ್ಡ ನಗರ ಮತ್ತು ಈಶಾನ್ಯ ಭಾಗದ ಗುವಾಹಟಿಯಲ್ಲಿ ಬಿಜೆಪಿ 52 ಸ್ಥಾನಗಳನ್ನು ಗಳಿಸಿದರೆ, ಎಜೆಪಿ 6 ಸ್ಥಾನಗಳನ್ನು ಗೆದ್ದಿದೆ. ರಾಜ್ಯದಲ್ಲಿ ಅಧಿಕಾರದಲ್ಲಿರುವ ಪಕ್ಷವು ಈ ಹಿಂದೆ ಕಳೆದ ತಿಂಗಳು ನಡೆದ ನಗರಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಿತ್ತು.

ಬಿಜೆಪಿಯ ನಂತರ ರಾಜ್ಯ ವಿಧಾನಸಭೆಯಲ್ಲಿ ಎರಡನೇ ಅತಿದೊಡ್ಡ ಪಕ್ಷವಾದ ವಿರೋಧ ಪಕ್ಷ ಕಾಂಗ್ರೆಸ್ ಒಂದೇ ಒಂದು ಸ್ಥಾನ ಗೆಲ್ಲುವಲ್ಲಿ ವಿಫಲವಾಗಿದೆ. ಆದರೆ ಆಮ್ ಆದ್ಮಿ ಪಕ್ಷ (ಎಎಪಿ) ಗುವಾಹಟಿಯಲ್ಲಿ ಒಂದು ಸ್ಥಾನವನ್ನು ಗೆಲ್ಲುವ ಮೂಲಕ ಖಾತೆ ತೆರೆದಿದೆ. ಅಸ್ಸಾಂ ಜಾತಿಯ ಪಕ್ಷ (ಎಜೆಪಿ) ಕೂಡ ಒಂದು ಸ್ಥಾನ ಗೆದ್ದಿದೆ.

PSI ನೇಮಕಾತಿ ಅಕ್ರಮ ಬೆನ್ನಲ್ಲೇ ಮತ್ತೊಂದು ನೇಮಕಾತಿ ಪ್ರಕರಣ ಬಯಲಿಗೆ

● ಬಮೂಲ್ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ಆರೋಪ ● ಸಹಕಾರ ಸಚಿವರಿಗೆ ಸಂಸದ ಡಿ.ಕೆ.ಸುರೇಶ್ ದೂರು ● ತನಿಖಾಧಿಕಾರಿ ನೇಮಕ

ರಾಮನಗರ, ಏ.24– ಪಿಎಸ್‌ಐ ನೇಮಕಾತಿ ಅಕ್ರಮ ರಾಜಕೀಯ ತಿರುವು ಪಡೆಯುತ್ತಿದೆ. ಇದರ ಬೆನ್ನಲ್ಲೇ ರಾಜ್ಯದಲ್ಲಿ ಮತ್ತೊಂದು ನೇಮಕಾತಿ ಪ್ರಕರಣವೊಂದು ಬಯಲಿಗೆ ಬಂದಿದೆ. ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರದ ಬಮೂಲ್‌ನಲ್ಲಿ ಅಕ್ರಮದ ಆರೋಪ ದೊಡ್ಡ ಮಟ್ಟದಲ್ಲಿ ಸದ್ದು ಮಾಡ್ತಿದೆ.

ಬಮೂಲ್‌ನಲ್ಲಿನ ಹುದ್ದೆಗಳ ನೇಮಕಾತಿಗೆ 2021ರ ಡಿಸೆಂಬರ್ 12ರಂದು ಲಿಖಿತ ಪರೀಕ್ಷೆ ನಡೆದಿತ್ತು. ಆದರೆ ಪರೀಕ್ಷೆ, ಮೌಲ್ಯಮಾಪನ, ಫಲಿತಾಂಶದ ಹೊಣೆ ಹೊತ್ತಿದ್ದ ಮೈಸೂರು ಮುಕ್ತ ವಿವಿ ಪಾರದರ್ಶಕವಾಗಿ ಪರೀಕ್ಷೆ ನಡೆಸಿಲ್ಲ ಎಂಬ ದೂರು ಕೇಳಿ ಬಂದಿದೆ.. 7ಕ್ಕೂ ಹೆಚ್ಚು ಅಕ್ರಮಗಳ ಬಗ್ಗೆ ಸಹಕಾರ ಸಚಿವರಿಗೆ ಸ್ವತಃ ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ.ಸುರೇಶ್ ಲಿಖಿತ ದೂರು ನೀಡಿದ್ದಾರೆ. ಅಕ್ರಮದ ಬಗ್ಗೆ ತನಿಖೆಗೆ ಆಗ್ರಹಿಸಿದ್ದಾರೆ. ಬಮೂಲ್ ವ್ಯವಸ್ಥಾಪಕ ನಿರ್ದೇಶಕರ ಅಮಾನತುಗೊಳಿಸಲು ಮನವಿ ಮಾಡಲಾಗಿದೆ. ಸಹಕಾರ ಸಂಘಗಳ ಜಂಟಿ ನಿಬಂಧಕ ಪ್ರಸಾದ್ ರೆಡ್ಡಿಯನ್ನು ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಈ ಬಗ್ಗೆ ಮರು ಪರೀಕ್ಷೆಗೆ ಆದೇಶ ನೀಡಲಾಗಿದೆ.

ಮುಕ್ತ ವಿವಿ ಮೂಲಕ ಪರೀಕ್ಷೆ ನಡೆದಿದ್ದು, ಮೌಲ್ಯಮಾಪನ, ಫಲಿತಾಂಶ ಪ್ರಕಟಿಸಲಾಗಿತ್ತು. ಪರೀಕ್ಷೆ ನಡೆಯುವ 30 ನಿಮಿಷಗಳ ಮೊದಲೇ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ನೇಮಕಾತಿ ವಿಚಾರದಲ್ಲಿ ಕೆಲ ಅಭ್ಯರ್ಥಿಗಳಿಂದ ಮೊದಲೇ ಒಡಂಬಡಿಕೆ ಮಾಡಿಕೊಂಡು, 15 ರಿಂದ 20 ಲಕ್ಷ ನಿಗದಿ ಮಾಡಲಾಗಿದೆ. ಒಎಂಆರ್ ಶೀಟ್‌ಗಳನ್ನು ಖಾಲಿ ಬಿಟ್ಟು, ಅದೇ ಶೀಟ್‌ಗಳನ್ನು ಅಕ್ರಮ ಭಾಗಿದಾರರಿಗೆ ನೀಡಿದರೆ, ಅವರೆ ಪರೀಕ್ಷೆ ಬರೆಸುತ್ತಾರೆ.

ಇನ್ನೂ ಒಎಂಆರ್ ಶೀಟ್‌ಗೂ ಅಂಕಪಟ್ಟಿಗೂ ಸಾಕಷ್ಟು ವ್ಯತ್ಯಾಸ ಇದ್ದು, ಅಂಕಗಳನ್ನು ಕೆಲವರಿಗೆ ಬೇಕಾಬಿಟ್ಟಿಯಾಗಿ ಹೆಚ್ಚುವರಿ ನೀಡಲಾಗಿದೆಯಂತೆ. ಒಟ್ಟಾರೆ ನೂರಾರು ಅಭ್ಯರ್ಥಿಗಳು ಬಮೂಲ್ ಪರೀಕ್ಷೆ ಎದುರಿಸಿ, ಹುದ್ದೆಗಳಿಗೆ ಆಯ್ಕೆಯೂ ಆಗಿದ್ದಾರೆ. ಆದರೆ, ಇದರಲ್ಲಿ ಭ್ರಷ್ಟಾಚಾರದ ಮೂಲಕ ಆಯ್ಕೆ ಆದವರು ಯಾರು? ಪ್ರಾಮಾಣಿಕವಾಗಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ಯಾರು? ಎಂಬುದು ತನಿಖೆ ನಂತರ ತಿಳಿಯಬೇಕಿದೆ.

ಪ್ರಧಾನಿ ಮೋದಿಗೆ ದೀನನಾಥ್ ಮಂಗೇಶ್ಕರ್ ಪ್ರಶಸ್ತಿ ಪ್ರದಾನ

ಪ್ರಶಸ್ತಿಯನ್ನು ದೇಶದ ಪ್ರಜೆಗಳಿಗೆ ಅರ್ಪಣೆ



ಮುಂಬೈ, ಏ. 24– ದೇಶ ಹಾಗೂ ಸಮಾಜಕ್ಕಾಗಿ ದುಡಿದ ಸೇವೆಗಾಗಿ ಪ್ರಧಾನಿ ನರೇಂದ್ರ ಮೋದಿಯವರಿಗೆ ಮೊದಲ ಲತಾ ದೀನನಾಥ್ ಮಂಗೇಶ್ಕರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮುಂಬೈನಲ್ಲಿ 80ನೇ ಮಾಸ್ಟರ್ ದೀನನಾಥ್ ಮಂಗೇಶ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು. ಸಮಾರಂಭದಲ್ಲಿ ಭಾಗವಹಿಸಿ ಪ್ರಶಸ್ತಿ ಸ್ವೀಕರಿಸಿದ ಮೋದಿ ಈ ಪ್ರಶಸ್ತಿಯನ್ನು ನನ್ನ ದೇಶದ ಪ್ರಜೆಗಳಿಗೆ ಅರ್ಪಿಸುತ್ತೇನೆ ಎಂದರು.

ಈ ಸಂಗೀತದ ಶಕ್ತಿಯನ್ನು ಲತಾ ದೀದಿಯ ರೂಪದಲ್ಲಿ ಕಂಡ ನಾವೆಲ್ಲರೂ ಅದೃಷ್ಟವಂತರು. ಸಂಗೀತಕ್ಕೆ ವಿಶೇಷವಾದ ಶಕ್ತಿ ಇದೆ. ಸಂಗೀತವು ಮಾತೃತ್ವ ಮತ್ತು ಪ್ರೀತಿಯ ಭಾವನೆಯನ್ನು ನೀಡುತ್ತದೆ. ಸಂಗೀತವು ನಿಮ್ಮನ್ನು ದೇಶಭಕ್ತಿಯೆಡೆಗೆ ಕೊಂಡೊಯ್ಯುವ ಮಹಾಶಕ್ತಿ ಹೊಂದಿದೆ. ಲತಾ ದೀದಿಯನ್ನು ಜನ ತಾಯಿ ಸರಸ್ವತಿಯ ಪ್ರತಿರೂಪವೆಂದು ಕಂಡಿದ್ದರು. ಲತಾ ದೀದಿ ಜನರಿಗೆ ಸೇರಿದ ಹಾಗೆ ಅವರ ಹೆಸರಿನಲ್ಲಿ ನನಗೆ ನೀಡಿರುವ ಈ ಪ್ರಶಸ್ತಿ ಜನತೆಗೆ ಅರ್ಪಿಸುತ್ತೇನೆ ಎಂದು ನುಡಿದರು.

ಲತಾ ದೀದಿ ನನ್ನ ದೊಡ್ಡ ಅಕ್ಕ. ಲತಾ ದೀದಿ ಹಲವು ವರ್ಷಗಳಿಂದ ಪ್ರೀತಿ ಮತ್ತು ಭಾವನೆಯನ್ನು ಉಡುಗೊರೆಯಾಗಿ ನೀಡಿದ್ದಾರೆ. ನನಗೆ ಇದಕ್ಕಿಂತ ಹೆಚ್ಚಿನ ಭಾಗ್ಯ ಬೇರೇನಿದೆ? ಲತಾ ದೀದಿ ಅವರು ಸಂಗೀತದಲ್ಲಿ ಉನ್ನತ ಸ್ಥಾನವನ್ನು ಪಡೆದಿದ್ದರು. ಸುಮಾರು 80 ವರ್ಷಗಳ ಕಾಲ ಅವರ ಧ್ವನಿ ಸಂಗೀತ ಲೋಕದಲ್ಲಿ ತನ್ನದೇ ಆದ ಛಾಪು ಮೂಡಿಸಿತ್ತು 75 ವರ್ಷಗಳ ದೇಶದ ಪಯಣ ಅವರ ಸ್ವರಗಳೊಂದಿಗೆ ನಂಟು ಹೊಂದಿದೆ. ಲತಾ ದೀದಿ ಯಾವತ್ತು ಸಂಗೀತ ಲೋಕದ ಧ್ರುವತಾರೆ. ಲತಾ ದೀದಿ ಅವರ ತಂದೆ ದೀನಾನಾಥ್ ಮಂಗೇಶ್ಕರ್ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ. ಸಂಗೀತಕ್ಕೆ ನೀಡಿದ ಕೊಡುಗೆಗಾಗಿ ನಾವೆಲ್ಲರೂ ಮಂಗೇಶ್ಕರ್ ಕುಟುಂಬಕ್ಕೆ ಋಣಿಯಾಗಿದ್ದೇವೆ ಎಂದು ಅಭಿಪ್ರಾಯಪಟ್ಟರು.

ಲತಾ ದೀದಿ ದೇಶದ 30ಕ್ಕೂ ಹೆಚ್ಚು ಭಾಷೆಗಳಲ್ಲಿ ಸಾವಿರಾರು ಹಾಡುಗಳನ್ನು ಹಾಡಿ ಜನರನ್ನು ರಂಜಿಸಿದ್ದರು. ಹಿಂದಿ, ಮರಾಠಿ, ಸಂಸ್ಕೃತ ಯಾವುದೇ ಭಾಷೆ ಇರಲಿ ಲತಾಜಿ ಅವರ ಧ್ವನಿ ಎಲ್ಲಾ ಭಾಷೆಯಲ್ಲೂ ಒಂದೇ ರೀತಿಯಲ್ಲಿ ಇರುತ್ತಿತ್ತು. ದೀನಾನಾಥ್ ಮಂಗೇಶ್ಕರ್ ಅವರ ಪುಣ್ಯತಿಥಿಯಂದು ಪ್ರತಿ ವರ್ಷ ಲತಾ ದೀನನಾಥ್ ಮಂಗೇಶ್ಕರ್ ಪ್ರಶಸ್ತಿಯನ್ನು ಆಯೋಜಿಸಲಾಗುವುದು. ರಾಷ್ಟ್ರ ನಿರ್ಮಾಣದಲ್ಲಿ ಕೊಡುಗೆ ನೀಡಿದ ವ್ಯಕ್ತಿಗಳಿಗೆ ಈ ಗೌರವವನ್ನು ನೀಡಲು ಉದ್ದೇಶಿಸಲಾಗಿದೆ. ಪ್ರಶಸ್ತಿಯನ್ನು ಪ್ರಕಟಿಸಿದ ಮಂಗೇಶ್ಕರ್ ಕುಟುಂಬ ಮತ್ತು ಮಾಸ್ಟರ್ ದೀನನಾಥ್ ಮಂಗೇಶ್ಕರ್ ಸ್ಮೃತಿ ಪ್ರತಿಷ್ಠಾನ ಚಾರಿಟಬಲ್ ಟ್ರಸ್ಟ್, ಲತಾ ಮಂಗೇಶ್ಕರ್ ಅವರ ಗೌರವ ಮತ್ತು ಸ್ಮರಣಾರ್ಥ ಈ ವರ್ಷದಿಂದ ಪ್ರಶಸ್ತಿಯನ್ನು ಪ್ರಾರಂಭಿಸುವುದಾಗಿ ಘೋಷಿಸಿದೆ. ಲತಾ ದೀದಿ ಕೊಡುಗೆಯನ್ನು ದೇಶದ ಜನ ಮರೆಯುವುದಿಲ್ಲ. ಅವರ ಸಂಗೀತ ಎಲ್ಲೆಡೆ ಮೊಳಗಲಿ. ದೇಶದ ಬೆಳವಣಿಗೆಗೆ ಅವರು ಸಂಗೀತದ ಮೂಲಕ ಸಹಕರಿಸಿದ್ದಾರೆ. ದೇಶ ಮತ್ತಷ್ಟು ಬಲಿಷ್ಠವಾಗಿ ಮುನ್ನುಗ್ಗಬೇಕೆಂಬುದು ಅವರ ಕನಸಾಗಿತ್ತು ಎಂದು ನುಡಿದರು.

ಪಾರಂಪರಿಕ ಹಾಸು ಆಟಗಳ ಪ್ರದರ್ಶನ 'ಕ್ರೀಡಾ ಕೌಶಲ್ಯ'ಕ್ಕೆ ಚಾಲನೆ



ಮೈಸೂರು, ಏ.24(ಎಂಕೆ)– ಭಾರತೀಯ ಕಲೆಯಲ್ಲಿ ಆನೆ ಪ್ರದರ್ಶನ ಮತ್ತು ಮಾರಾಟ ಮೇಳ 'ಹಸ್ತಿ ಮಂಗಳ್' ಹಾಗೂ ಪಾರಂಪರಿಕ ಹಾಸು ಆಟಗಳ 2ನೇ ದ್ವೈವಾರ್ಷಿಕ ಪ್ರದರ್ಶನ 'ಕ್ರೀಡಾ ಕೌಶಲ್ಯ'ಕ್ಕೆ ಮೈಸೂರಿನ ನಜರ್‌ಬಾದ್‌ನಲ್ಲಿರುವ ರಾಮ್‌ಸನ್ಸ್ ಕಲಾ ಪ್ರತಿಷ್ಠಾನದಲ್ಲಿ ಭಾನುವಾರ ಚಾಲನೆ ನೀಡಲಾಯಿತು.

'ಕ್ರೀಡಾ ಕೌಶಲ್ಯ ಪ್ರದರ್ಶನ' ಉದ್ಘಾಟಿಸಿದ ಎಡಿಜಿಪಿ ಎಸ್ ಮುರುಗನ್ ಮಾತನಾಡಿ, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರನ್ನು ಹಾಸು ಆಟಗಳ ಜನಕ ಎಂದು ಕರೆಯಲಾಗುತ್ತದೆ. ಇಂತಹ ಸಾಂಪ್ರದಾಯಿಕ ಆಟಗಳನ್ನು ರಾಮ್‌ಸನ್ಸ್ ಕಲಾ ಪ್ರತಿಷ್ಠಾನ ಮುಂದುರೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಹಸ್ತಿಮಂಗಳ ಮೇಳ' ಉದ್ಘಾಟಿಸಿದ ಉದ್ಯಮಿ ಆರ್.ಗುರು ಮಾತನಾಡಿ, ದೇಶದೆಲ್ಲೆಡೆಯಿಂದ ಕೌಶಲಯುತ ಅಪರೂಪದ ಕಲಾಕೃತಿಗಳನ್ನು ಸಂಗ್ರಹಿಸಿ ಪ್ರದರ್ಶನಕ್ಕಿಡಲಾಗಿದೆ. ಕಲಾವಿದರ ಕಲಾಕೃತಿಗಳಿಗೆ ಮಾರುಕಟ್ಟೆ ಒದಗಿಸಿ, ಅವರ ಬದುಕನ್ನು ಹಸನಾಗಿಸಲಾಗುತ್ತಿದೆ ಎಂದರು. ಕಲಾವಿದ ವಿ.ಟಿ.ಕಾಳೆ, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಿ.ಮಹೇಂದ್ರ ಮತ್ತಿತರರು ಉಪಸ್ಥಿತರಿದ್ದರು.



ದಕ್ಷಿಣ ಪದವೀಧರರ ಕ್ಷೇತ್ರ ಚುನಾವಣೆಯ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರವಾಗಿ ಮೈಸೂರಿನ ಜಯಲಕ್ಷ್ಮಿಪುರಂನ ಚಿನ್ಮಯ ಶಾಲೆ ಬಳಿ ಬಿಜೆಪಿ ಮುಖಂಡ ಜಯಪ್ರಕಾಶ್(ಜೆಪಿ), ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ನಗರ ಪಾಲಿಕೆ ಸದಸ್ಯ ಚಿಕ್ಕವೆಂಕಟು, ನಗರ ಪ್ರಧಾನ ಕಾರ್ಯದರ್ಶಿ ವಾಣೀಶ್, ವಾರ್ಡ್ ಅಧ್ಯಕ್ಷ ಮಲ್ಲಿಕಾರ್ಜುನ, ಮುಖಂಡರಾದ ಶಿವಪ್ರಕಾಶ್, ಬಾಲಣ್ಣ, ವೇಣು, ತನುಜಾ ಮಹೇಶ್, ಉಲ್ಲಾಸ್ ಮತ್ತಿತರರು ಪ್ರಚಾರ ನಡೆಸಿದರು.

ಚೀನಾಕ್ಕೆ ಅದರದ್ದೆ ಭಾಷೆಯಲ್ಲಿ ಭಾರತದ ಪ್ರತ್ಯುತ್ತರ

ನವದೆಹಲಿ, ಏ.24– ಭಾರತ ಮತ್ತೊಮ್ಮೆ ಚೀನಾಕ್ಕೆ ತನ್ನದೇ ಭಾಷೆಯಲ್ಲಿ ಪ್ರತ್ಯುತ್ತರ ನೀಡಿದೆ. ಜಾಗತಿಕ ವಿಮಾನಯಾನ ಸಂಸ್ಥೆ (IATA) ಪ್ರಕಾರ, ಭಾರತವು ಚೀನಾ ಪ್ರಜೆಗಳ ಪ್ರವಾಸಿ ವೀಸಾಗಳನ್ನು ಅಮಾನತುಗೊಳಿಸಿದೆ. ಚೀನಾದಲ್ಲಿ ಅಧ್ಯಯನ ನಡೆಸುತ್ತಿದ್ದ 22 ಸಾವಿರಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ಚೀನಾಕ್ಕೆ ಮರಳಲು ಅವಕಾಶ ನೀಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಭಾರತ ಈ ನಿರ್ಧಾರ ಕೈಗೊಂಡಿದೆ. ಕೊರೊನಾದಿಂದಾಗಿ 22 ಸಾವಿರಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ತಾಯ್ನಾಡಿಗೆ ಚೀನಾದಿಂದ ಮರಳಿದ್ದರು. ಈಗ ಈ ವಿದ್ಯಾರ್ಥಿಗಳು ತಮ್ಮ ಅಧ್ಯಯನವನ್ನು ಪೂರ್ಣಗೊಳಿಸಲು ಚೀನಾಕ್ಕೆ ಹಿಂತಿರುಗಬೇಕಾಗಿತ್ತು. ಆದರೆ ಚೀನಾದ ಆಡಳಿತವು ಈ ವಿದ್ಯಾರ್ಥಿಗಳಿಗೆ ಹಿಂತಿರುಗಲು ಅವಕಾಶ ನೀಡುತ್ತಿಲ್ಲ. ಈ ವಿದ್ಯಾರ್ಥಿಗಳನ್ನು ಚೀನಾ ವೇಯ್ಟಿಂಗ್ ಲಿಸ್ಟ್‌ನಲ್ಲಿ ಇರಿಸಿದೆ. ಚೀನಾದ ಪ್ರಜೆಗಳಿಗೆ ಭಾರತ ನೀಡುವ ಪ್ರವಾಸಿ ವೀಸಾಗಳು ಇನ್ನು ಮುಂದೆ ಮಾನ್ಯವಾಗಿಲ್ಲ ಎಂದು ಐಎಟಿಎ ಹೇಳಿದೆ. ಆದಾಗ್ಯೂ, ಚೀನಾ ಪ್ರಜೆಗಳಿಗೆ ವ್ಯಾಪಾರ, ಉದ್ಯೋಗ, ರಾಜತಾಂತ್ರಿಕ ಮತ್ತು ಅಧಿಕೃತ ವೀಸಾಗಳನ್ನು ನೀಡಲಾಗುತ್ತಿದೆ.

ಮೈಸೂರು ಮಿತ್ರ ಸೋಮವಾರ 25 ಏಪ್ರಿಲ್ 2022

ಡಾ.ರಾಜ್‌ಕುಮಾರ್ ಕರ್ನಾಟಕದ ಮುತ್ತುರಾಜ

ಎಡಿಸಿ ಡಾ.ನಂಜುಂಡೇಗೌಡ ಅಭಿಮತ



ಮಡಿಕೇರಿ,ಏ.24–ಡಾ.ರಾಜ್‌ಕುಮಾರ್ ಅವರ ಸರಳತೆ, ಕಲಾಪ್ರತಿಭೆ ಹಾಗೂ ಜೀವನ ಶೈಲಿಯಿಂದ ಚಿತ್ರರಂಗದಲ್ಲಿ ಅತ್ಯುನ್ನತ ಸ್ಥಾನಕ್ಕೆ ಬೆಳೆದರು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ನಗರದ ವಾರ್ತಾ ಭವನದಲ್ಲಿ ಸರಳವಾಗಿ ನಡೆದ ಡಾ.ರಾಜ್‌ಕುಮಾರ್ ಅವರ 94ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

1959ರಲ್ಲಿ ಚಿತ್ರರಂಗ ಪ್ರವೇಶಿಸಿದ ಡಾ.ರಾಜ್‌ಕುಮಾರ್ ಕನ್ನಡ ಚಲನಚಿತ್ರ ರಂಗದಲ್ಲಿ ಸಾರ್ವಕಾಲಿಕ, ಚಲನಚಿತ್ರ ರಂಗದಲ್ಲಿ ಉತ್ತುಂಗಕ್ಕೇರಿದರೂ ಸಹ ಸರಳ ವ್ಯಕ್ತಿತ್ವ ಅಳವಡಿಸಿಕೊಂಡಿದ್ದರು. ಸಾಮಾಜಿಕ ಸಂದೇಶಗಳನ್ನು ನೀಡುವ ಚಿತ್ರಗಳನ್ನು ನೀಡಿದ ಹೆಗ್ಗಳಿಕೆ ಡಾ.ರಾಜ್‌ಕುಮಾರ್ ಅವರಿಗೆ ಸಲ್ಲುತ್ತದೆ ಎಂದರು.

ಮುತ್ತುರಾಜ್ ಆಗಿ ಚಾಮರಾಜನಗರ ಜಿಲ್ಲೆಯ ಸಿಂಗನಲ್ಲೂರಿನಲ್ಲಿ 1929ರಲ್ಲಿ ಜನಿಸಿ, ಚಲನಚಿತ್ರ ರಂಗದಲ್ಲಿ ದೊಡ್ಡ ಮಟ್ಟಕ್ಕೆ ಬೆಳೆದರು. ಡಾ.ರಾಜ್ ಕುಮಾರ್ ಅವರು ಪೌರಾಣಿಕ, ಸಾಮಾಜಿಕ, ಹಾಡುಗಾರಿಕೆ ಸೇರಿದಂತೆ ಚಿತ್ರರಂಗದ ವಿವಿಧಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದರು. ಎಲ್ಲರಿಗೂ ಆದರ್ಶಪ್ರಾಯರಾಗಿ 200ಕ್ಕೂ ಹೆಚ್ಚು ಕನ್ನಡ ಚಲನಚಿತ್ರಗಳಲ್ಲಿ ಅಭಿನಯಿಸಿದರು. ಪದ್ಮಭೂಷಣ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, ಕರ್ನಾಟಕ ರತ್ನ ಹೀಗೆ ಹತ್ತು ಹಲವು ಪ್ರಶಸ್ತಿಗಳು ಡಾ.ರಾಜ್‌ಕುಮಾರ್ ಅವರನ್ನು ಹುಡುಕಿ ಬಂದವು ಎಂದು ತಿಳಿಸಿದರು.

ನಾಡು–ನುಡಿ ವಿಷಯದಲ್ಲಿ ಸದಾ ಮುಂದಿರುತ್ತಿದ್ದ ಡಾ.ರಾಜ್‌ಕುಮಾರ್ ಅವರು ಗೋಕಾಕ್ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿ, ಸರ್ಕಾರಿ ಶಾಲೆಗಳಲ್ಲಿ ಕನ್ನಡವನ್ನು ಪ್ರಥಮ ಭಾಷೆಯಾಗಿ ಅಂಗೀಕರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು ಎಂದು ಸ್ಮರಿಸಿದರು. ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಚಿನ್ನಸ್ವಾಮಿ ಇದ್ದರು.

ಸಿಎನ್‌ಸಿಯಿಂದ ಡಾ.ಸುಬ್ರಹ್ಮಣ್ಯನ್ ಸ್ವಾಮಿ ಭೇಟಿ

ಕೊಡವ ರಾಷ್ಟ್ರೀಯ ದಿನಾಚರಣೆಗೆ ಆಹ್ವಾನ

ಮಡಿಕೇರಿ,ಏ.24–ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ನಿಯೋಗ ಅರ್ಥಶಾಸ್ತ್ರಜ್ಞ, ರಾಜ್ಯಸಭಾ ಸದಸ್ಯ, ಮಾಜಿ ಕೇಂದ್ರ ಕಾನೂನು ಸಚಿವ ಡಾ.ಸುಬ್ರಹ್ಮಣ್ಯನ್‌ಸ್ವಾಮಿ ಅವರನ್ನು ಮೈಸೂರಿನಲ್ಲಿ ಭೇಟಿ ಮಾಡಿತು.

ನಿಯೋಗದ ನೇತೃತ್ವದ ವಹಿಸಿದ್ದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ಕೊಡವರ ಹಕ್ಕುಗಳ ಕುರಿತು ಡಾ.ಸುಬ್ರಹ್ಮಣ್ಯನ್ ಸ್ವಾಮಿ ಅವರೊಂದಿಗೆ ಸಮಾಲೋಚಿಸಿದರು. ಸಂವಿಧಾನದ 371ನೇ ವಿಧಿಯಡಿ ಕೊಡವ ಜಿಯೋ–ರಾಜಕೀಯ ಸ್ವಾಯತ್ತತೆ ಸಿಗಬೇಕು ಎಂದು ಮನವರಿಕೆ ಮಾಡಿಕೊಟ್ಟರು.

ಇದೇ ನ.26ರಂದು ಮಡಿಕೇರಿಯಲ್ಲಿ ಸಿಎನ್‌ಸಿಯಿಂದ ನಡೆಯುವ 32ನೇ ವರ್ಷದ ಕೊಡವ ರಾಷ್ಟ್ರೀಯ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವಂತೆ ಡಾ.ಸುಬ್ರಹ್ಮಣ್ಯನ್‌ಸ್ವಾಮಿ ಅವರಿಗೆ ಆಹ್ವಾನ ನೀಡಿದರು.



ವಿಹೆಚ್‌ಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ.ಜಿ, ಕಲಿಯಂಡ ಮೀನಾ ಪ್ರಕಾಶ್, ಕಲಿಯಂಡ ರೇಣುಕಾ ರವಿ, ಕಲಿಯಂಡ ಪ್ರಕಾಶ್, ಜಮ್ಮಡ ಮೋಹನ್, ಅಜ್ಜಿಕುಟೀರ ಲೋಕೇಶ್, ಮದ್ರೀರ ಕರುಂಬಯ್ಯ, ಬೊಟ್ಟಂಗಡ ಗಿರೀಶ್, ಅರೆಯಡ ಗಿರೀಶ್, ಅಲ್ಮಂಡ ಜೈ, ಮಂದಪಂಡ ಮನೋಜ್, ಕಿರಿಯಮಾಡ ಶೆರಿನ್, ಅಪ್ಪಾರಂಡ ಪೂವಣ್ಣ, ಪಟ್ಟಮಾಡ ಅರುಣ್, ಕಲಿಯಂಡ ಪ್ರಧಾನ ಸೋಮಯ್ಯ, ಕಲಿಯಂಡ ರವಿ, ಬೊಟ್ಟಂಗಡ ಬೋಪಣ್ಣ ಮತ್ತಿತರರು ನಿಯೋಗದಲ್ಲಿದ್ದರು.

ಈ ಸಂದರ್ಭ ಮಾತನಾಡಿದ ನಾಚಪ್ಪ, ಕೊಡವರ ಹಕ್ಕುಗಳು ಮತ್ತು ರಾಜಕೀಯ ಸ್ವಾಯತ್ತತೆ ಕುರಿತು ಡಾ.ಸ್ವಾಮಿ ಪೂರಕ ಸ್ಪಂದಿಸಿದ್ದು, ಕೊಡವ ರಾಷ್ಟ್ರೀಯ ದಿನಾಚರಣೆಯಲ್ಲಿ ಪಾಲ್ಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದರು.

ವಿ.ಪೇಟೆಯಲ್ಲಿ ವಕೀಲರ ಸಂಘದ ಕ್ರೀಡಾಕೂಟ



ವಿರಾಜಪೇಟೆ, ಏ.24–ಕ್ರೀಡಾಕೂಟವನ್ನು ಆಯೋಜಿಸಿರುವುದರಿಂದ ವಕೀಲರಲ್ಲಿ ಕ್ರೀಡಾ ಮನೋಭಾವ ಬೆಳೆಯುತ್ತದೆ ಹಾಗೂ ಅವರ ವೃತ್ತಿಗೂ ಕ್ರೀಡೆ ಸಹಕಾರಿಯಾಗಲಿದೆ ಎಂದು 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಎಸ್.ಸುಜಾತಾ ಹೇಳಿದರು.

ವಿರಾಜಪೇಟೆ ವಕೀಲರ ಸಂಘದಿಂದ ಇಲ್ಲಿನ ಸಂತ ಅನ್ನಮ್ಮ ವಿದ್ಯಾಸಂಸ್ಥೆಯ ಮೈದಾನದಲ್ಲಿ ವಕೀಲರಿಗಾಗಿ ಆಯೋಜಿಸಿದ್ದ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಕ್ರೀಡೆಯಿಂದ ಮನಸ್ಸು ಮತ್ತು ದೇಹ ಉತ್ತಮವಾಗಿರಲು ಸಾಧ್ಯ. ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಸೇವೆ ಸಲ್ಲಿಸುತ್ತಿದ್ದು, ಮಹಿಳಾ ವಕೀಲರು ಕ್ರೀಡೆಯಲ್ಲಿ ಹುಮ್ಮಸಿನಿಂದ ಭಾಗವಹಿಸಿದ್ದಾರೆ. ಇನ್ನು ಮುಂದೆಯೂ ಇಂತ ಕ್ರೀಡಾಕೂಟ ಹೆಚ್ಚು ನಡೆಯುವಂತಾಗಲಿ ಎಂದು ಆಶಿಸಿದರು.

ಅಪರ ಸಿವಿಲ್ ನ್ಯಾಯಾಧೀಶೆ ಸಿ.ಮಹಾಲಕ್ಷ್ಮಿ, ವಕೀಲರ ಸಂಘದ ಕಾರ್ಯದರ್ಶಿ ಎನ್.ಕೆ. ದಿನೇಶ್ ಮಾತನಾಡಿದರು. ಹಿರಿಯ ವಕೀಲ ಎಂ.ಕೆ.ಪೂವಯ್ಯ ಕ್ರೀಡಾಕೂಟ ಉದ್ಘಾಟಿಸಿದರು. ವಕೀಲರ ಸಂಘದ ಅಧ್ಯಕ್ಷ ಐ.ಆರ್.ಪ್ರಮೋದ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕ್ರೀಡಾ ಸ್ಪರ್ಧೆಯಲ್ಲಿ ವಿಜೇತರಿಗೆ ಅತಿಥಿಗಳು ಬಹುಮಾನ ವಿತರಿಸಿದರು. ಸಂಘದ ಕ್ರೀಡಾ ಕಾರ್ಯದರ್ಶಿ ವಿ.ಎಸ್.ಪ್ರೀತಮ್, ಅನುಪಮ ಕಿಶೋರ್, ಎನ್.ನರೇಂದ್ರ ಕಾಮತ್ ಇದ್ದರು. ಕ್ರೀಡಾಕೂಟದಲ್ಲಿ ಪುರುಷರಿಗೆ ಕ್ರಿಕೆಟ್, ಭಾರದ ಗುಂಡು ಎಸೆತ, ದ್ವಿಚಕ್ರ ವಾಹನದಲ್ಲಿ ನಿದಾನ ಚಾಲನೆ, ಹಗ್ಗಾಜಗ್ಗಾಟ, ಓಟದ ಸ್ಪರ್ಧೆ ಹಾಗೂ ಮಹಿಳೆಯರಿಗೆ ನಿಂಬೆಹಣ್ಣು ಓಟ, ಸಂಗೀತ ಕುರ್ಚಿ, ಓಟದ ಸ್ಪರ್ಧೆ ಏರ್ಪಡಿಸಲಾಗಿತ್ತು.

ಕೊಡಗು ಪತ್ರಕರ್ತರ ಸಂಘ ಅಸ್ತಿತ್ವಕ್ಕೆ

ಮಡಿಕೇರಿ,ಏ.24– ಕೊಡಗಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರ ಶ್ರೇಯೋಭಿವೃದ್ಧಿಗೆ ಶ್ರಮಿಸುವ ನಿಟ್ಟಿನಲ್ಲಿ ಕೊಡಗು ಪತ್ರಕರ್ತರ ಸಂಘ ಅಸ್ತಿತ್ವಕ್ಕೆ ಬಂದಿದೆ.

ಪತ್ರಿಕಾ ಭವನದಲ್ಲಿ ನಡೆದ ಸಭೆಯಲ್ಲಿ ನೂತನ ಸಂಘ ರಚನೆ ಮಾಡಲಾಗಿದ್ದು, ಸಂಘದ ಅಧ್ಯಕ್ಷರಾಗಿ ಕನ್ನಡಪ್ರಭಾ ಪತ್ರಿಕೆ ಸೋಮವಾರಪೇಟೆಯ ವರದಿಗಾರ ಎಸ್.ಎ.ಮುರಳೀಧರ್, ಪ್ರಧಾನ ಕಾರ್ಯದರ್ಶಿಯಾಗಿ ಶಕ್ತಿ ಉಪ ಸಂಪಾದಕ ಉಜ್ವಲ್ ರಂಜಿತ್ ಆಯ್ಕೆಗೊಂಡಿದ್ದಾರೆ. ಉಪಾಧ್ಯಕ್ಷರಾಗಿ ಕೊಡಗು ಚಾನಲ್ ಸಂಪಾದಕ ಜಿ.ವಿ.ರವಿಕುಮಾರ್, ಖಜಾಂಚಿಯಾಗಿ ಸಂಯುಕ್ತ ಕರ್ನಾಟಕ ವರದಿಗಾರ ಟಿ.ಕೆ.ಸಂತೋಷ್, ಸಹಕಾರ್ಯದರ್ಶಿಯಾಗಿ 'ಮೈಸೂರು ಮಿತ್ರ' ಜಿಲ್ಲಾ ವರದಿಗಾರ ಪ್ರಸಾದ್ ಸಂಪಿಗೆಕಟ್ಟೆ ಆಯ್ಕೆಯಾಗಿದ್ದಾರೆ.



ಮುರಳೀಧರ್ ರಂಜಿತ್

5 ತಾಲೂಕುಗಳ ಸಂಘಟನಾ ಕಾರ್ಯದರ್ಶಿಗಳಾಗಿ ಹೆಚ್.ಆರ್.ಹರೀಶ್ ಕುಮಾರ್, ಸುರೇಶ್ ಬಿಳಿಗೇರಿ, ಅಮ್ಮುಣಿಚಂಡ ಪ್ರವೀಣ್ ಕುಮಾರ್, ಎಂ.ಎಸ್.ಸುನಿಲ್. ಚಮ್ಮಟಿರ ಪ್ರವೀಣ್ ಉತ್ತಪ್ಪ ಅವರನ್ನು ಆಯ್ಕೆ ಮಾಡಲಾಗಿದೆ. ಜಿಲ್ಲಾ ಕಾರ್ಯದರ್ಶಿಗಳಾಗಿ ಉಷಾ ಪ್ರೀತಮ್, ಕಿರಿಯಮಾಡ ರಾಜ್ ಕುಶಾಲಪ್ಪ, ತೇಲಪಂಡ ಕವನ್ ಕಾರ್ಯಪ್ಪ, ಅಶ್ವಥ್ ಕುಮಾರ್, ಪಿ.ವಿ.ಪ್ರಭಾಕರ್ ಇವರುಗಳನ್ನು ಆಯ್ಕೆ ಮಾಡಲಾಗಿದೆ.

ಸಂಘದ ನಿರ್ದೇಶಕರಾಗಿ ವಿಘ್ನೇಶ್ ಭೂತನಕಾಡು, ಅರುಣ್ ಕೂರ್ಗ್, ಟಿ.ಜಿ. ಸತೀಶ್, ಹೆಚ್.ಎನ್.ಲಕ್ಷ್ಮೀಶ್, ಎಸ್.ಕೆ. ಲಕ್ಷ್ಮೀನಾರಾಯಣ, ಜಿ.ಕೆ.ಬಾಲಕೃಷ್ಣ, ಟಿ.ಸಿ. ನಾಗರಾಜ್, ಎಸ್.ಮಹೇಶ್ ಆಯ್ಕೆಗೊಂಡಿದ್ದಾರೆ.

ಕೊಡಗಿನಲ್ಲಿರುವ ಹಿರಿಯ–ಕಿರಿಯ ಪತ್ರಕರ್ತರನ್ನು ಒಂದುಗೂಡಿಸಿ, ಪತ್ರಕರ್ತರ ಬದುಕಿಗೆ ಸೂಕ್ತ ಭದ್ರತೆ ಒದಗಿಸಿ ಅವರ ಅಭಿವೃದ್ಧಿಗೆ ಶ್ರಮಿಸುವುದು ಈ ಸಂಘದ ಮೂಲ ಉದ್ದೇಶವಾಗಿದೆ.

ಈಗಾಗಲೇ ಸಂಘದಲ್ಲಿ 70ಕ್ಕೂ ಹೆಚ್ಚು ಪತ್ರಕರ್ತರು ಸದಸ್ಯತ್ವ ಪಡೆದುಕೊಂಡಿದ್ದು, ನೂತನವಾಗಿ ಸದಸ್ಯತ್ವ ಪಡೆಯಲಿಚ್ಛಿಸುವ ಪತ್ರಕರ್ತರು 9738910817, 9945411821, 9901657211 ದೂರವಾಣಿಯನ್ನು ಸಂಪರ್ಕಿಸುವಂತೆ ಕೊಡಗು ಪತ್ರಕರ್ತರ ಸಂಘದ ಪ್ರಕಟಣೆ ತಿಳಿಸಿದೆ.

ಮೂವರು ಉಡ ಮಾರಾಟಗಾರರ ಬಂಧನ



ಮಡಿಕೇರಿ,ಏ.24–ವಿನಾಶದ ಅಂಚಿನಲ್ಲಿರುವ ಉಡಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಮೂವರು ಆರೋಪಿಗಳನ್ನು ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದೆ.

ಶೆಟ್ಟಿ, ಸತೀಶ್ ಹಾಗೂ ಹನುಮಂತ ಬಂಧಿತ ಆರೋಪಿಗಳು. ಮಡಿಕೇರಿ–ಮೈಸೂರು ರಾಜ್ಯ ಹೆದ್ದಾರಿಯ ಚೈನ್ ಗೇಟ್ ಬಳಿ ಈ ಮೂವರು 3 ಜೀವಂತ ಉಡಗಳನ್ನು ಅಕ್ರಮವಾಗಿ ಇಟ್ಟುಕೊಂಡು, ಅದನ್ನು ಮಾರಲು ಯತ್ನಿಸಿದ್ದರು. ಮಾಹಿತಿ ಆಧರಿಸಿ ಮಡಿಕೇರಿ ತಾಲೂಕು ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಸಿಬ್ಬಂದಿ ದಾಳಿ ನಡೆಸಿ ಮೂವರನ್ನು ಬಂಧಿಸಿದ್ದು, ಅವರ ವಶದಲ್ಲಿದ್ದ ಉಡಗಳನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾ ನಿರೀಕ್ಷಕ ಕೆ.ವಿ.ಶರತ್ ಚಂದ್ರ ಅವರ ನಿರ್ದೇಶನದ ಮೇರೆಗೆ, ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕದ ಪ್ರಭಾರ ಅಧೀಕ್ಷಕ ಎನ್.ಟಿ. ಶ್ರೀನಿವಾಸ್ ರೆಡ್ಡಿ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಉಪ ನಿರೀಕ್ಷಕಿ ಸಿ.ಯು.ಸವಿ, ಸಿಬ್ಬಂದಿ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಸ್ವಾಮಿ ಹಾಗೂ ಮಂಜುನಾಥ್ ಭಾಗವಹಿಸಿದ್ದರು.

ಕಬ್ಬಚ್ಚಿರ ಕುಟುಂಬದ ವಂಶ ವೃಕ್ಷ ಪುಸ್ತಕ ಬಿಡುಗಡೆ

ಮಡಿಕೇರಿ,ಏ.24–ವಿರಾಜಪೇಟೆ ಆರ್ಜಿ ಗ್ರಾಮದಲ್ಲಿರುವ ಕಬ್ಬಚ್ಚಿರ ಕುಟುಂಬದ ಐನ್ ಮನೆಯಲ್ಲಿ ಕುಟುಂಬದ ವಾರ್ಷಿಕ ಮಹಾ ಸಭೆ ಹಾಗೂ ಸಮ್ಮಿಲನ ಕಾರ್ಯಕ್ರಮ ಇತ್ತೀಚಿಗೆ ನಡೆಯಿತು. ಕಬ್ಬಚ್ಚಿರ ಕುಟುಂಬದ ಪಟ್ಟೆದಾರರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರು ಕಬ್ಬಚ್ಚೀರ ಜಯ ಉತ್ತಪ್ಪ ಮತ್ತು ಬಾನು ಉತ್ತಪ್ಪ ದಂಪತಿ ಬರೆದ 'ಕಬ್ಬಚ್ಚಿರ ಕುಟುಂಬದ ವಂಶ ವೃಕ್ಷ ಪುಸ್ತಕ' ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ಪೂಮಾಲೆ ಕೊಡವ ವಾರ ಪತ್ರಿಕೆ ಸಂಪಾದಕ ಅಜ್ಜಿನಿಕಂಡ ಮಹೇಶ್ ನಾಚಯ್ಯ, ಕಬ್ಬಚ್ಚಿರ ಕುಟುಂಬದ ಸದಸ್ಯರು, ಕಬ್ಬಚ್ಚಿರ ಕುಟುಂಬದಲ್ಲಿ ಜನಿಸಿದ ಹೆಣ್ಣು ಮಕ್ಕಳು ಮತ್ತವರ ಕುಟುಂಬ ಸದಸ್ಯರು ಹಾಜರಿದ್ದರು.



ಜನಮಾನಸದಲ್ಲಿ ಡಾ.ರಾಜ್‌ಕುಮಾರ್ ಅಜರಾಮರ

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಅಭಿಮತ



ಚಾಮರಾಜನಗರ, ಏ.24– ಇಡೀ ಕುಟುಂಬವೇ ಒಟ್ಟಾಗಿ ಕುಳಿತು ನೋಡುವಂತಹ ಚಲನಚಿತ್ರಗಳಲ್ಲಿ ಮನೋಜ್ಞವಾಗಿ ಅಭಿನಯಿಸುತ್ತಿದ್ದ ಡಾ.ರಾಜ್‌ಕುಮಾರ್ ಅವರು ನಾಡಿನ ಜನಮಾನಸದಲ್ಲಿ ಎಂದೆಂದಿಗೂ ಅಜರಾಮರರಾಗಿದ್ದಾರೆ ಎಂದು ಕೇಂದ್ರ ಪರಿಹಾರ ಸಮಿತಿಯ ಅಧ್ಯಕ್ಷ ಎಂ.ರಾಮಚಂದ್ರ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಪಂ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಕನ್ನಡದ ಮೇರುನಟ, ಪದ್ಮಭೂಷಣ, ದಾದ ಸಾಹೇಬ್ ಪಾಲ್ಕೆ ಪ್ರಶಸ್ತಿ ಪುರಸ್ಕೃತ ಡಾ.ರಾಜ್‌ಕುಮಾರ್ ಅವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯ ಹೆಮ್ಮೆಯಾಗಿರುವ ಡಾ.ರಾಜ್‌ಕುಮಾರ್ ಅವರು 5 ದಶಕಗಳ ಕಾಲ ಚಲನಚಿತ್ರಗಳಲ್ಲಿ ನಟಿಸಿ ವಿಶ್ವದ ಗಮನ ಸೆಳೆದ ಏಕೈಕ ನಟರಾಗಿದ್ದಾರೆ. ಸಾಮಾನ್ಯ ಜನಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಿದ ರಾಜ್‌ಕುಮಾರ್, ತಪ್ಪುಗಳನ್ನು ತಿದ್ದುವಂತಹ ಸಾಕಷ್ಟು ಚಿತ್ರಗಳಲ್ಲಿ ನಟಿಸಿ ಜನಮನ ಸೂರೆಗೊಂಡಿದ್ದಾರೆ. ಸಾಮಾನ್ಯರಲ್ಲಿ ಸಾಮಾನ್ಯರಂತೆ ಬೆರೆಯುತ್ತಿದ್ದ ರಾಜ್ ಅವರು ತಮ್ಮ ಚಿತ್ರಗಳ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡಿದ್ದಾರೆ. ಬಂಗಾರದ ಮನುಷ್ಯ ಹಾಗೂ ಧ್ರುವತಾರೆ ಚಿತ್ರಗಳಲ್ಲಿ ರಾಜ್‌ಕುಮಾರ್ ರೈತರ ಪ್ರೇರಣೆಯಾಗಿದ್ದರು. ಯುವಕರು ಸಮಾಜದ ಸತ್ಪ್ರಜೆಗಳಾಗಲು ರಾಜ್ ಮಾರ್ಗದರ್ಶಕರಾಗಿದ್ದಾರೆ ಎಂದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರರಾಜು ಮಾತನಾಡಿ, ಕನ್ನಡ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿದ ಡಾ.ರಾಜ್‌ಕುಮಾರ್ ಸರಳ ವ್ಯಕ್ತಿತ್ವ ನಟನೆ ಎಲ್ಲರಿಗೂ ಮಾದರಿಯಾಗಿದೆ. ರಂಗಭೂಮಿ, ಪೌರಾಣಿಕ, ಸಾಮಾಜಿಕ ಚಲನಚಿತ್ರಗಳಲ್ಲಿ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದ ರಾಜ್‌ಕುಮಾರ್ ಅಪಾರ ಜನಾನುರಾಗಿಯಾಗಿ ಕನ್ನಡಿಗರಲ್ಲಿ ಚಿರಸ್ಥಾಯಿಯಾಗಿದ್ದಾರೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ಅಧ್ಯಕ್ಷರು ಹಾಗೂ ಉಪನ್ಯಾಸಕ ಸುರೇಶ್ ಋಗ್ವೇದಿ ಮಾತನಾಡಿ, ಅಹಂಕಾರ, ಹಣದ ವ್ಯಾಮೋಹವಿಲ್ಲದ ಪರಿಪೂರ್ಣ ಮಾನವ ಪ್ರೇಮವನ್ನು ಅಭಿವ್ಯಕ್ತಿಗೊಳಿಸಿದ ಡಾ.ರಾಜ್‌ಕುಮಾರ್ ಅವರಿಗೆ ಚಾಮರಾಜನಗರ ಸ್ವರ್ಗದ ಬಾಗಿಲಾಗಿತ್ತು. ಸ್ವಚ್ಛವಾದ ಪ್ರೀತಿ, ನಿಷ್ಕಲ್ಮಶ ನೋಟದಿಂದ ಎಲ್ಲರ ಗಮನ ಸೆಳೆಯುತ್ತಿದ್ದ ರಾಜ್ ಅವರು ಯಾವುದೇ ಪಾತ್ರವನ್ನೂ ಲೀಲಾಜಾಲವಾಗಿ ಅಂತರಾಳದಿಂದ ನಟಿಸುತ್ತಿದ್ದರು. ಗುರುನಿಂದನೆ, ಮಾತಾಪಿತೃ ನಿಂದನೆಯಂತಹ ಇಂದಿನ ಪರಿಸ್ಥಿತಿಯಲ್ಲಿ ರಾಜ್‌ಕುಮಾರ್ ಪ್ರತಿಯೊಬ್ಬರಿಗೂ ಆದರ್ಶ ವ್ಯಕ್ತಿತ್ವವಾಗಿದ್ದಾರೆ. ಸರಳತೆ, ಮಾನವತೆಗೆ ಉತ್ತಮ ಉದಾಹರಣೆಯಾಗಿದ್ದಾರೆ ಎಂದರು.

ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಸಿ.ಎಂ.ನರಸಿಂಹಮೂರ್ತಿ, ಕನ್ನಡಪರ ಸಂಘಟನೆಯ ಚಾ.ರಂ. ಶ್ರೀನಿವಾಸಗೌಡ, ಜಿಪಂ ಲೆಕ್ಕಾಧಿಕಾರಿ ಹೆಚ್.ಎಸ್.ಗಂಗಾಧರ್, ಲೇಖಕ ಲಕ್ಷ್ಮೀನರಸಿಂಹ ಮಾತನಾಡಿದರು.

ಕಾರ್ಯಕ್ರಮದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ರಮೇಶ್, ತಹಸೀಲ್ದಾರ್ ಚಿದಾನಂದ ಗುರುಸ್ವಾಮಿ, ತಾಪಂ ಇಓ ಪ್ರೇಮ್‌ಕುಮಾರ್, ಸಾಹಿತಿ ಸೋಮಶೇಖರ ಬಿಸಿಲವಾಡಿ, ವೈಷ್ಣವಿ, ಮುಖಂಡರಾದ ನಿಜಧ್ವನಿ ಗೋವಿಂದ ರಾಜು, ಆಲೂರು ನಾಗೇಂದ್ರ, ಜಿ. ಬಂಗಾರು, ಗು.ಪುರುಷೋತ್ತಮ್, ಕೆ.ಎಂ.ನಾಗರಾಜು, ಜಯಕುಮಾರ್, ಸಿ.ಎಂ.ಮಹದೇವಶೆಟ್ಟಿ ಇತರರು ಹಾಜರಿದ್ದರು. ಈಶ್ವರಿ ಸಂಸ್ಥೆಯ ಸಿ.ಎಂ.ವೆಂಕಟೇಶ್, ಜನಪದ ಗಾಯಕರಾದ ಸುರೇಶ್‌ನಾಗ್, ಸಿ.ಎಂ.ನರಸಿಂಹಮೂರ್ತಿ ಕಲೆ ನಟರಾಜು ಅವರು ನಡೆಸಿಕೊಟ್ಟ ಡಾ.ರಾಜ್‌ಕುಮಾರ್ ಅವರು ಅಭಿನಯಿಸಿದ ಪ್ರಮುಖ ಚಲನಚಿತ್ರಗಳ ಗೀತೆಗಳ ಗಾಯನ ಎಲ್ಲರ ಮೆಚ್ಚುಗೆ ಗಳಿಸಿತು.

ಸ್ವಾತಂತ್ರ್ಯ ಅಮೃತ ಮಹೋತ್ಸವ: ಅವಳಿ ಸಹೋದರರಿಂದ ಸೈಕಲ್ ಯಾತ್ರೆ



ಕೊಳ್ಳೇಗಾಲ, ಏ.24(ನಾಗೇಂದ್ರಸ್ವಾಮಿ)– 75ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವ ನಿಮಿತ್ತ ಬೀದರ್‌ನಿಂದ ಚಾಮರಾಜನಗರದ ಮಲೆಮಹದೇಶ್ವರ ಬೆಟ್ಟದವರೆಗೆ ಅವಳಿ ಸಹೋದರರು ಆರಂಭಿಸಿರುವ ಸೈಕಲ್‌ಯಾತ್ರೆ ಭಾನುವಾರ ಕೊಳ್ಳೇಗಾಲ ತಲುಪಿತು.

ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಕೊಳ್ಳೂರು ಗ್ರಾಮದ 16 ವರ್ಷದ ಅರುಣ್ ಮತ್ತು ಕರಣ್ ರಾಕಲೆ ಅವಳಿ ಸಹೋದರರು 25 ದಿನಗಳ ಕಾಲ 1,250 ಕಿ.ಮೀ. ವರೆಗೆ ಸೈಕಲ್ ತುಳಿಯುತ್ತಿದ್ದು, ಪುಟಾಣಿಗಳ ದಿಟ್ಟತೆಯನ್ನು ಗಣ್ಯರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಶ್ಲಾಘಿಸಿದ್ದಾರೆ.

ಭಾನುವಾರ ಸಂಜೆ 5 ಗಂಟೆಯ ವೇಳೆಗೆ ಕೊಳ್ಳೇಗಾಲಕ್ಕೆ ಬಂದ ಇವರನ್ನು ವಿವಿಧ ಸಂಘಟನೆಯ ಮುಖಂಡರು ಆತ್ಮೀಯವಾಗಿ ಸ್ವಾಗತಿಸಿದರು.

ಈ ವೇಳೆ ನಗರಸಭೆ ಸದಸ್ಯ ಶಿವಕುಮಾರ್, ಮುಖಂಡರಾದ ಮಧುಚಂದ್ರ, ಉದಯಕುಮಾರ್, ಸುರೇಶ್, ಲೋಕೇಶ್, ರಾಜಶೇಖರ್, ಶಂಕರ ಇತರರು ಇದ್ದರು.

ಈ ಅವಳಿ ಸಹೋದರರು ಔರಾದ್ ಮೂಲಕ ಕಲಬುರಗಿ, ಸಿಂದನೂರು, ಬಳ್ಳಾರಿ, ಮೊಳಕಾಲ್ಮೂರು, ತುಮಕೂರು, ನೆಲಮಂಗಲ, ಬೆಂಗಳೂರು, ಕೆಂಗೇರಿ, ರಾಮನಗರ, ಸತ್ತೆಗಾಲ ಮಾರ್ಗವಾಗಿ ಕೊಳ್ಳೇಗಾಲಕ್ಕೆ ಬಂದಿದ್ದು, ಇಂದು ಇಲ್ಲಿಯೇ ವಾಸ್ತವ್ಯ ಹೂಡಲಿದ್ದಾರೆ. ಬೆಳಗ್ಗೆ ಕೊಳ್ಳೇಗಾಲದಿಂದ ಮಧುವನಹಳ್ಳಿ, ಸಿಂಗಾನಲ್ಲೂರು, ಕಾಮಗೆರೆ, ಹನೂರು ಮಾರ್ಗವಾಗಿ ಮಹದೇಶ್ವರಬೆಟ್ಟವನ್ನು ತಲುಪಲಿದ್ದಾರೆ.

ಬಿಜೆಪಿ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಲು ಸಿದ್ದರಾಮಯ್ಯರಿಗೆ ನೈತಿಕತೆ ಇಲ್ಲ: ಅಮ್ಮನಪುರ ಮಲ್ಲೇಶ್ ವ್ಯಂಗ್ಯ

ಚಾಮರಾಜನಗರ, ಏ.24– ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಲು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಯಾವುದೇ ನೈತಿಕತೆ ಇಲ್ಲ. ಲೋಕಾಯುಕ್ತ ಸಂಸ್ಥೆ ಮುಚ್ಚಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ ವ್ಯಂಗ್ಯವಾಡಿದರು.



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಮಟ್ಟದಲ್ಲಿ ಯಾವುದೇ ಕಾಮಗಾರಿಗೆ ಶೇ.22 ಪರ್ಸೆಂಟ್ ತೆರಿಗೆ ಹೋಗುತ್ತದೆ. ಅದು ಎಲ್ಲರಿಗೂ ಗೊತ್ತು. ಆದರೆ, ರಾಜ್ಯ ಸರ್ಕಾರ ಶೇ.40 ಪರ್ಸೆಂಟ್ ಕೇಳುತ್ತದೆ ಎಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿರುವ ರಾಜ್ಯ ಗುತ್ತಿಗೆದಾರರ ಸಂಘದ ಕೆಂಪಣ್ಣ ಯಾವ–ಯಾವ ಅಧಿಕಾರಿಗಳಿಗೆ ದುಡ್ಡು ಕೊಟ್ಟಿದ್ದಾರೆ ಎಂದು ಸಾಕ್ಷ್ಯಾ ನೀಡಲಿ, ಈ ಸಂಬಂಧ ತನಿಖೆ ಸಂಸ್ಥೆಗಳಿಗೆ ದೂರು ನೀಡಿದರೆ ಅದರ ಬಂಡವಾಳ ಗೊತ್ತಾಗುತ್ತಿತ್ತು. ವಿವೇಚನೆ ಇಲ್ಲದೇ ಸಿದ್ದರಾಮಯ್ಯ ಅವರು ಭ್ರಷ್ಟಾಚಾರದ ಆರೋಪ ಮಾಡುತ್ತಿದ್ದಾರೆ ಎಂದರು. 25 ವರ್ಷಗಳ ಹಿಂದೆ ಒಬ್ಬ ಸಾಮಾನ್ಯ ರೈತರ ಮಗನಾಗಿದ್ದ ಡಿ.ಕೆ.ಶಿವಕುಮಾರ್ ಅವರು ಇವತ್ತು 5 ಸಾವಿರ ಕೋಟಿಗೂ ಹೆಚ್ಚಿನ ಹಣ ಮಾಡಿದ್ದಾರೆ. ಅವರು ಯಾವ ಸಾಫ್ಟ್‌ವೇರ್ ಕಂಪನಿ ಮಾಲೀಕರಾಗಿದ್ದರೂ? ಈ ಕಾರಣದಿಂದ ಅವರು ಜೈಲಿಗೆ ಹೋಗಿ ಬಂದಿದ್ದಾರೆ. ಸಿದ್ದರಾಮಯ್ಯನವರೇ ಸ್ವತಃ 25 ಲಕ್ಷ ರೂ.ಬೆಳೆಬಾಳುವ ವಾಚ್ ಕಟ್ಟಿ ಸಿಕ್ಕಿಬಿದ್ದಿದ್ದರು. ಅವರಿಗೆ ಯಾವ ರೈತರು, ಕಾರ್ಖಾನೆ ಕಾರ್ಮಿಕ ಕೊಡುಗೆಯಾಗಿ ಕೊಟ್ಟಿದ್ದರು? ಅದು ಭ್ರಷ್ಟಾಚಾರ ಅಲ್ಲವೇ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರಸಭೆ ಮಾಜಿ ಸದಸ್ಯ ಬಸವರಾಜು, ಮುಖಂಡರಾದ ರಾಮಸಮುದ್ರ ಪ್ರಸನ್ನ, ಶಿವು ಪಟೇಲ್, ಸುರೇಶ್ ಹಾಜರಿದ್ದರು.

ಪದವೀಧರರಿಗೆ ಇನ್ಸೂರೆನ್ಸ್ ಬಾಂಡ್ ವಿತರಣೆ

ಗುಂಡ್ಲುಪೇಟೆ, ಏ.24(ಸೋಮ್.ಜಿ)– ಪದವೀಧರರಿಗೆ ಆಕಸ್ಮಿಕವಾಗಿ ಅಪಘಾತ, ಆರೋಗ್ಯ ಸಮಸ್ಯೆ ಉಂಟಾದಲ್ಲಿ ಉಪಯೋಗ ವಾಗುವಂತೆ ಇನ್ಸೂರೆನ್ಸ್ ಬಾಂಡ್ ನೀಡುತ್ತಿದ್ದೇನೆ ಎಂದು ದಕ್ಷಿಣ ಪದವೀಧರ ಕ್ಷೇತ್ರದ ಸ್ವತಂತ್ರ ಅಭ್ಯರ್ಥಿ ಎನ್.ಎಸ್. ವಿನಯ್ ಹೇಳಿದರು.



ಪಟ್ಟಣದಲ್ಲಿ ಪದವೀಧರರಿಗೆ ಇನ್ಸೂರೆನ್ಸ್ ಬಾಂಡ್ ವಿತರಣೆ ಮಾಡಿ ಮಾತನಾಡಿದ ಅವರು, ತಲಾ ಒಂದು ಲಕ್ಷ ರೂ.ಗಳ ಇನ್ಸೂರೆನ್ಸ್ ಬಾಂಡ್ ಇದಾಗಿದ್ದು, ನನ್ನ ಜೀವವಿರುವವರೆವಿಗೂ ಈ ಇನ್ಸೂರೆನ್ಸ್‌ನ್ನು ರಿನೀವಲ್ ಮಾಡಿಸುವುದರೊಂದಿಗೆ ಪದವೀಧರರ ಹಿತ ಕಾಪಾಡುತ್ತೇನೆ ಎಂದರು.

ನಾನು ಬಿಜೆಪಿ ಬಂಡಾಯ ಅಭ್ಯರ್ಥಿಯಲ್ಲ, ಸ್ವತಂತ್ರ ಅಭ್ಯರ್ಥಿಯಾಗಿದ್ದೇನೆ. ಒಂದೂವರೆ ವರ್ಷದಿಂದ ಜನರೊಂದಿಗೆ ಬೆರೆತ್ತಿದ್ದೇನೆ. ಬಿಜೆಪಿಯಿಂದ ಟಿಕೆಟ್ ಆಕಾಂಕ್ಷಿಯಾಗಿದ್ದೆ, ಆದರೆ ನನಗೆ ಸಿಕ್ಕಿಲ್ಲ. ಆದರೂ ನನಗೆ ನಿರಾಸೆ ಇಲ್ಲ. ನಾನು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡುತ್ತಿದ್ದೇನೆ ಎಂದರು.

ನಾನು ಸಮಾಜಮುಖಿಯಾಗಿ ಕೆಲಸ ಮಾಡುವುದರೊಂದಿಗೆ ನಿರುದ್ಯೋಗಿಗಳು ಮತ್ತು ಬಡವರ್ಗದ ಪದವೀಧರರಿಗೆ ಬಾಂಡ್ ನೀಡಿದ್ದೇನೆ. ಅವರಿಗೆ ಸಮಸ್ಯೆ ಆದಾಗ ಅದು ಉಪಯೋಗಕ್ಕೆ ಬರುತ್ತದೆ. ಇದುವರೆವಿಗೆ 39ಸಾವಿರ ಇನ್ಸೂರೆನ್ಸ್ ಬಾಂಡ್ ವಿತರಿಸಿದ್ದೇನೆ. ಮುಂದಿನ ದಿನಗಳಲ್ಲಿ ಪದವೀಧರರ ಸಹಕಾರ ಬ್ಯಾಂಕ್ ನಿರ್ಮಿಸುವುದರೊಂದಿಗೆ ನಿರುದ್ಯೋಗಿಗಳಿಗೆ ಕೆಲಸಸಿಗುವಂತೆ ಮಾಡುವ ಹಂಬಲವಿದೆ. ಅದರೊಂದಿಗೆ ನಿರುದ್ಯೋಗಿಗಳಿಗೆ ಊಟ ವಿತರಣೆ ಮಾಡುವ ಅನ್ನಪೂರ್ಣ ಕ್ಯಾಂಟೀನ್ ತೆರೆಯುವ ಉದ್ದೇಶವನ್ನು ಹೊಂದಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಲಕ್ಕೂರು ಸೋಮಶೇಖರ್, ಮಹದೇವಸ್ವಾಮಿ, ಚೇತನ್ ಸೇರಿದಂತೆ ವಿವಿಧ ಗ್ರಾಮಗಳ ಪದವೀಧರರು ಭಾಗವಹಿಸಿದ್ದರು.

ನಾಳೆ ದೇವರ ದಾಸಿಮಯ್ಯ ಜಯಂತಿ

ಚಾಮರಾಜನಗರ, ಏ.24– ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ದೇವರ ದಾಸಿಮಯ್ಯ ಜಯಂತಿಯನ್ನು ಏ.26ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸಮಾರಂಭ ಉದ್ಘಾಟಿಸಲಿದ್ದಾರೆ. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ವಿ.ಶ್ರೀನಿವಾಸಪ್ರಸಾದ್ ಉಪಸ್ಥಿತಿ ವಹಿಸಲಿದ್ದಾರೆ. ಶಾಸಕರಾದ ಆರ್.ನರೇಂದ್ರ, ಎನ್.ಮಹೇಶ್, ಸಿ.ಎಸ್.ನಿರಂಜನ್‌ಕುಮಾರ್, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಕೆ.ಟಿ.ಶ್ರೀಕಂಠೇಗೌಡ, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಬಿ.ಶಾಂತಮೂರ್ತಿ ಕುಲಗಾಣ, ಮುಖ್ಯ ಅತಿಥಿಗಳಾಗಿ ಸಮಾರಂಭದಲ್ಲಿ ಪಾಲ್ಗೊಳ್ಳುವವರು ಎಂದು ಪ್ರಕಟಣೆ ತಿಳಿಸಿದೆ.

ಅಗ್ನಿ ಅನಾಹುತ ತಡೆಗೆ ಅರಿವು ಅಗತ್ಯ



ಬೇಗೂರು, ಏ.24(ಕಿರಣ್)– ಅಗ್ನಿಶಾಮಕ ಸೇವಾ ಸಪ್ತಾಹ ಆಚರಣೆ ಅಂಗವಾಗಿ ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಸಾರಿಗೆ ಬಸ್ ನಿಲ್ದಾಣದ ಆವರಣದಲ್ಲಿ ಕರ್ನಾಟಕ ರಾಜ್ಯ ಅಗ್ನಿಶಾಮಕ ದಳ ತುರ್ತು ಸೇವಾ ಘಟಕದಿಂದ ಸಾರ್ವಜನಿಕರಿಗೆ ಅಗ್ನಿ ಅನಾಹುತಗಳ ತಡೆಗೆ ಅರಿವು ಮೂಡಿಸಲಾಯಿತು. ಠಾಣಾಧಿಕಾರಿ ಸಿದ್ದೇಗೌಡ ಮಾತನಾಡಿ, ಅಗ್ನಿ ಅನಾಹುತಗಳು ಸಂಭವಿಸಿದಾಗ ಗಾಬರಿಯಾಗದೆ ತ್ವರಿತವಾಗಿ ಅಗ್ನಿ ನಂದಿಸಲು ಮುಂದಾಗಬೇಕು. ಈ ಸಂದರ್ಭದಲ್ಲಿ ಜೀವ ರಕ್ಷಣೆಗೆ ಮೊದಲು ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಒಂದು ವೇಳೆ ವಿದ್ಯುತ್ ಉಪಕರಣಗಳಿಂದ ಬೆಂಕಿ ಕಾಣಿಸಿಕೊಂಡರೆ, ನೀರು ಹಾಕಬೇಡಿ. ಕೂಡಲೇ ಮೇನ್ ಸ್ವಿಚ್ ಆಫ್ ಮಾಡಬೇಕು. ಅಲ್ಲದೇ ಯಾರಾದರೂ ಬೆಂಕಿ ಜ್ವಾಲೆಗೆ ಸಿಕ್ಕಿಬಿದ್ದಾಗ ಕಂಬಳಿ ಅಥವಾ ಬೆಡ್‌ಶೀಟ್ ಸುತ್ತಿ ಬೆಂಕಿ ನಂದಿಸಬೇಕು ಎಂದು ಸಲಹೆ ನೀಡಿದರು.

ಸುತ್ತಮುತ್ತಲ ಪ್ರದೇಶದಲ್ಲಿ ಬೆಂಕಿ ಯಾವ ಪ್ರಮಾಣದಲ್ಲೇ ಕಾಣಿಸಿಕೊಂಡರೂ ಕೂಡಲೇ ಅಗ್ನಿಶಾಮಕ ಠಾಣೆ ಸಹಾಯವಾಣಿ 101 ಅಥವಾ 112ಗೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದು ಸಾರ್ವಜನಿಕರು ತಿಳಿಸಿದರು.

ಮೈಸೂರು ಮಿತ್ರ

ಸೋಮವಾರ 25 ಏಪ್ರಿಲ್ 2022

ಟಿಕ್‌ಟಾಕ್, ಪಬ್‌ಜಿ ಬ್ಯಾನ್ ಮಾಡಿದ ತಾಲಿಬಾನ್

ಅಫ್ಘಾನಿಸ್ತಾನ: ಟಿಕ್‌ಟಾಕ್, ಪಬ್‌ಜಿ ಅಫ್ಘಾನ್ ಯುವಕರನ್ನು ದಾರಿತಪ್ಪಿಸುತ್ತೆ ಎಂದು ತಾಲಿಬಾನ್ ಅಫ್ಘಾನ್‌ನಿಂದಲ್ಲೇ ಅಪ್ಲಿಕೇಶನ್‌ಗಳನ್ನು ಬ್ಯಾನ್ ಮಾಡಿದೆ. ಅಫ್ಘಾನಿಸ್ತಾನದಲ್ಲಿ ವೀಡಿಯೋ ಶೇರ್ ಮಾಡಿಕೊಳ್ಳುವ ಮೂಲಕ, ಟಿಕ್‌ಟಾಕ್ ಅಪ್ಲಿಕೇಶನ್ ನಿಷೇಧಿಸಿರುವ ಸುದ್ದಿ ತಿಳಿಸಿದೆ. ಇದು ಅಫ್ಘಾನಿಸ್ತಾನದ ಯುವಕರನ್ನು ದಾರಿ ತಪ್ಪಿಸುತ್ತಿದೆ ಎಂದು ಒತ್ತಿ ಹೇಳಿದೆ. ಇದರ ಜೊತೆಗೆ ಜನಪ್ರಿಯ ಮೊಬೈಲ್ ಗೇಮ್ ಪಬ್‌ಜಿ ಸಹ ನಿಷೇಧಿಸಲಾಗಿದೆ. ಕಳೆದ ವರ್ಷ ಆಗಸ್ಟ್‌ನಲ್ಲಿ ತಾಲಿಬಾನ್ ಅಧಿಕಾರಕ್ಕೆ ಮರಳಿದ ನಂತರ, ತಾಲಿಬಾನ್ ಈಗಾಗಲೇ ಸಂಗೀತ, ಚಲನಚಿತ್ರಗಳು ಮತ್ತು ದೂರದರ್ಶನ ಸೋಪ್‌ಗಳನ್ನು ನಿಷೇಧಿಸಿದೆ. ಗುರುವಾರ ಈ ಕುರಿತು ಕ್ಯಾಬಿನೆಟ್ ಅರ್ಜಿಗಳು ತಿಳಿಸಿದ್ದು, ಅಪಾಯಕಾರಿ ಆ್ಯಪ್‌ಗಳು ಯುವಪೀಳಿಗೆಯನ್ನು ದಾರಿತಪ್ಪಿಸಿದೆ. ಅದಕ್ಕೆ ಈ ಆ್ಯಪ್‌ಗಳನ್ನು ಮುಚ್ಚಬೇಕು ಎಂದು ದೂರಸಂಪರ್ಕ ಸಚಿವಾಲಯಕ್ಕೆ ಆದೇಶಿಸಲಾಗಿದೆ ಎಂದು ಮಾಧ್ಯಮಗಳ ವರದಿಗಳ ಮೂಲಕ ತಿಳಿದುಬಂದಿದೆ.

ಒಂದನೇ ಪುಟದಿಂದ

ತಾಲೂಕು ಪಂಚಾಯಿತಿಗೆ ರಾಷ್ಟ್ರ ಪ್ರಶಸ್ತಿ

ಆಡಳಿತದ ಮೂಲಕ ಗ್ರಾಪಂನ ಆಡಳಿತ ವರ್ಗ, ಪಿಡಿಓಗಳು ಹಾಗೂ ಎಲ್ಲ ಸಿಬ್ಬಂದಿ, ಸಂಘ–ಸಂಸ್ಥೆಗಳು, ಗ್ರಾಮಸ್ಥರನ್ನು ವಿಶ್ವಾಸಕ್ಕೆ ಪಡೆದು ಬದ್ಧತೆಯ ಕಾರ್ಯ ನಿರ್ವಹಣೆಯ ಅಮೋಘ ಸಾಧನೆಗೈದ ಪರಿಣಾಮವೇ ರಾಷ್ಟ್ರ ಮಟ್ಟದ ಈ ಪ್ರಶಸ್ತಿಯನ್ನು ಸತತವಾಗಿ ಮುಡಿಗೇರಿಸಿಕೊಳ್ಳಲು ಸಾಧ್ಯವಾಗಿದೆ.

ನರೇಗಾದಲ್ಲೂ ಪ್ರಥಮ: ಇನ್ನು ನರೇಗಾ ಯೋಜನೆ ಅನುಷ್ಠಾನದಲ್ಲೂ ಜಿಲ್ಲೆಗೆ ಮೊದಲ ತಾಲೂಕೆಂಬ ಹೆಗ್ಗಳಿಕೆಯ ಜೊತೆ ಜೊತೆಗೆ ಕ್ರಮಬದ್ಧ ಸಭೆಗಳು, ದಾಖಲೆಗಳ ನಿರ್ವಹಣೆ, ಕೆರೆಗಳ ಪುನಶ್ಚೇತನ, ಸೋಕ್ ಪಿಟ್‌ಗಳ ನಿರ್ಮಾಣ, ಹೈಟೆಕ್ ಡಿಜಿಟಲ್ ಗ್ರಂಥಾಲಯ, ಸ್ಮಶಾನ ನಿರ್ಮಾಣ, ರೈತರ ವೈಯಕ್ತಿಕ ಕಾಮಗಾರಿಗಳು, ಕೃಷಿ, ತೋಟಗಾರಿಗೆ, ರೇಷ್ಮೆ ಪ್ರಗತಿ ಸೇರಿದಂತೆ ಎಲ್ಲಾ ಯೋಜನೆಗಳ ಸಮರ್ಪಕ ಅನುಷ್ಠಾನ, ಹೀಗೆ ಅನೇಕಾನೇಕ ಪ್ರಗತಿದಾಯಕ ಕಾಯಕ ದಾಖಲೆಯ ಅಭಿವೃದ್ಧಿಯ ಶಿಖರ ಪ್ರಶಸ್ತಿಗೆ ಪೂರಕವಾಗಿದೆ.

ಹಳೆಬೀಡು ಗ್ರಾಪಂನಲ್ಲೂ ಅಭಿವೃದ್ಧಿ ಶಖೆ: ಇದೇ ರೀತಿ ಹಳೇಬೀಡು ಗ್ರಾಪಂ ಸಹ ಅಂತರ್ಜಲ ಮರುಹೋರಣ, ದಾಖಲೆಗಳ ನಿರ್ವಹಣೆ, ಕೋವಿಡ್ ಕೇರ್ ಸೆಂಟರ್ ನಿರ್ವಹಣೆ, ತೆರಿಗೆ ಸಂಗ್ರಹ ಸೇರಿದಂತೆ ಎಲ್ಲಾ ಯೋಜನೆಗಳ ಸಮರ್ಪಕ ಅನುಷ್ಠಾನದ ವಿಶಿಷ್ಟ ಸಾಧನೆಗಾಗಿಯೇ ಚೊಚ್ಚಲ ಪ್ರಶಸ್ತಿ ಲಭಿಸಿದೆ. ತಾಲೂಕಿಗೆ 2017–18ರಿಂದಲೂ ಅದರಲ್ಲೂ 2ನೇ ಬಾರಿಗೆ ಪ್ರಶಸ್ತಿ ತನ್ನ ಮುಡಿಗೇರಿಸಿಕೊಂಡಿರುವುದು ಹುಣಸೂರಿನ ಹೆಮ್ಮೆ.

ಬ್ಲೂಟೂತ್ ಮೂಲಕ ಉತ್ತರ

ಸಿನಿಮಾ ಮಾದರಿಯಲ್ಲಿ ಬ್ಲೂಟೂತ್ ಮೂಲಕ ಉತ್ತರ ರವಾನಿಸಿದ್ದಾರೆ. ಪರೀಕ್ಷೆಗೂ ಮುನ್ನ ಪ್ರಶ್ನೆಪತ್ರಿಕೆ ಲೀಕ್ ಆಗಿರುವ ಮಾಹಿತಿ ಬಹಿರಂಗಗೊಂಡಿದೆ. ಲೀಕ್ ಆದ ಪ್ರಶ್ನೆಪತ್ರಿಕೆಯ ಉತ್ತರಗಳನ್ನು ಸಿದ್ಧಪಡಿಸಿಕೊಂಡಿದ್ದ ಆರೋಪಿಗಳು ಹಣ ಕೊಟ್ಟು ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಬ್ಲೂಟೂತ್ ಮೂಲಕ ಉತ್ತರ ರವಾನೆ ಮಾಡಿಸಿದ್ದಾರೆ. ದಾಳಿ ನಡೆಸಿರುವ ಅಧಿಕಾರಿಗಳಿಗೆ ಎಲೆಕ್ಟ್ರಾನಿಕ್ ಡಿವೈಸ್ ಲಭ್ಯವಾಗಿದ್ದು, ಆರೋಪಿಗಳ ಎಟಿಎಂ ಕಾರ್ಡ್‌ಗಳು ಸಹ ದೊರೆತಿವೆ ಎಂಬ ಮಾಹಿತಿ ಲಭ್ಯವಾಗಿದೆ. ಎಲೆಕ್ಟ್ರಾನಿಕ್ ಡಿವೈಸ್ ಬಳಸಿ ಉತ್ತರ ನೀಡಲಾಗಿದ್ದು, ಹಣಕೊಟ್ಟ ಅಭ್ಯರ್ಥಿಗಳಿಗೆ A-B-C-D ಮಾದರಿ ಪ್ರಶ್ನೆಪತ್ರಿಕೆಗಳಂತೆ ಒಂದೇ ಬಾರಿಗೆ ಉತ್ತರ ಹೇಳಿಕೊಟ್ಟಿದ್ದಾರೆ. ಇದೀಗ ಪ್ರಶ್ನೆ ಪತ್ರಿಕೆಗೆ ಉತ್ತರ ಕೊಡುವ ವೀಡಿಯೋ ವೈರಲ್ ಆಗಿದೆ.

ಪ್ರಮಾಣ ಮಾಡಿ

ಎಂಬುದು ಕಾಂಗ್ರೆಸ್‌ನವರ ಚಿಂತೆ ಎಂದರು. ಕಾಂಗ್ರೆಸ್‌ಗೆ ಒಕ್ಕಲಿಗರು, ದಲಿತರು, ಲಿಂಗಾಯಿತರು, ವಾಲ್ಮಿಕಿ, ಬ್ರಾಹ್ಮಣ ಯಾವುದೇ ಸಮಾಜದ ಮತ ಇಲ್ಲ. ಮುಸ್ಲಿಂ ಮತ ಮಾತ್ರ ಇತ್ತು. ಅದನ್ನು ನಾನು ತೆಗೆದುಕೊಳ್ಳುತ್ತಿದ್ದೇನೆ. ನೀವು ಒಂದು ನದಿಯ ಉಳಿವಿಗಾಗಿ ಕೆಲಸ ಮಾಡಿದ್ದೀರಿ. ಆದರೇ ನಾವು ರಾಜ್ಯದ 180 ನದಿ ಮತ್ತು 19 ಸಣ್ಣ ಪುಟ್ಟ ನದಿ ಹಾಗೂ ಮಹಾ ನದಿಗಳ ನೀರನ್ನು ಶೇಖರಣೆ ಮಾಡಿ ವಿಧಾನ ಸೌದವನ್ನು ತೊಳೆಯುವ ಕಾರ್ಯಕ್ಕೆ ಮುಂದಾಗಿದ್ದೇವೆ ಎಂದರು.

ಮಹಾರಾಜರ ಊರು ಇದು, ಅವರು ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಅವರನ್ನು ನೆನೆಯುತ್ತ ಕೆಲಸ ಮಾಡುತ್ತಿದ್ದೇವೆ. ಮಹಾರಾಜರಿಗೆ ನೀಡುವ ಮಹತ್ವವನ್ನು ಸಿದ್ದರಾಮಯ್ಯನವರಿಗೆ ಕೊಡುವ ಅಗತ್ಯವಿಲ್ಲ ಎಂದು ಮಾರ್ಮಿಕವಾಗಿ ನುಡಿದರು.

ಮೈತ್ರಿ ವಿಚಾರವಾಗಿ ಪ್ರತಿಕ್ರಿಯಸಿದ ಅವರು, ಜೆಡಿಎಸ್ ಈ ಬಾರಿ ಸ್ವಂತ ಶಕ್ತಿಯಿಂದ ಅಧಿಕಾರಕ್ಕೆ ಬರಲಿದೆ. 1992 ರಲ್ಲಿ ನಡೆದ ಇತಿಹಾಸ ಮತ್ತೆ 2023ರಲ್ಲಿ ಆರಂಭವಾಗುತ್ತದೆ. ಇಷ್ಟು ವರ್ಷ ನಾವು ವನವಾಸದಲ್ಲಿ ಇದ್ದೆವು. ಈ ಬಾರಿ ನಮ್ಮ ಬಲದಲ್ಲೇ ಅಧಿಕಾರದಲ್ಲಿ ಬರುತ್ತೇವೆ. ನಮ್ಮ ಸಭೆಗಳಿಗೆ ಜನರು ಬರುತ್ತಿರುವುದನ್ನು ನೋಡಿದರೆ ತಿಳಿಯುತ್ತಿದೆ. ನಾವು ಜನರನ್ನು ಕರೆ ತರುತ್ತಿಲ್ಲ, ಅವರೇ ಬರುತ್ತಿದ್ದಾರೆ. ಕಾಂಗ್ರೆಸ್‌ಗಿಂತ ಹೆಚ್ಚು ಕುರುಬ ಅಭ್ಯರ್ಥಿಯನ್ನು ಜೆಡಿಎಸ್ ಈ ಬಾರಿ ಹಾಕುತ್ತದೆ. ಅದರಲ್ಲೂ ವಿದ್ಯಾವಂತ ಕುರುಬರನ್ನು ಹಾಕಲಾಗುತ್ತದೆ. ಸಮಾಜದ ಮಾಜಿ ಮುಖ್ಯಮಂತ್ರಿಗಳ ಮಕ್ಕಳನ್ನು ಪಕ್ಷಕ್ಕೆ ತರಲಾಗುತ್ತಿದೆ. ಬಿಜೆಪಿ, ಕಾಂಗ್ರೆಸ್ ಜೊತೆ ಮೈತ್ರಿಯ ಮಾತಿಲ್ಲ. ಜನರು ಏನು ಭಿಕ್ಷೆ ನೀಡುತ್ತಾರೆ ಅದನ್ನು ತೆಗೆದುಕೊಂಡು ಪಕ್ಷ ಮುನ್ನಡೆಸುತ್ತೇವೆ ಎಂದರು.

ಹೆಚ್.ಡಿ.ದೇವೇಗೌಡ ಮತ್ತು ಕುಮಾರಸ್ವಾಮಿ ಅವರು ಬಿಜೆಪಿ ಪರ ಸಾಫ್ಟ್ ಕಾರ್ನರ್ ತೋರುತ್ತಿದ್ದಾರೆ ಎಂಬ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು ಯಾಕೆ ಬಿಜೆಪಿಗೆ ಸಾಫ್ಟ್ ಕಾರ್ನರ್ ತೋರಿಸಬಾರದು. ನಾನು ಸಹ ಆರ್‌ಎಸ್‌ಎಸ್ ಮತ್ತು ಬಜರಂಗದಳದ ಪರ ಸಾಫ್ಟ್ ಕಾರ್ನರ್ ಇಟ್ಟುಕೊಂಡಿದ್ದೇನೆ. ಅದರಲ್ಲೂ ಒಳ್ಳೆಯವರು, ಕೆಟ್ಟವರು ಇಬ್ಬರು ಇದ್ದಾರೆ ಎಂದರು. ತಾವು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುತ್ತೀರಾ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ನಾನು ಸ್ಪರ್ಧೆ ಮಾಡಲ್ಲ. ನಾನು ಕಿಂಗ್ ಆಗುವ ಬದಲು ಕಿಂಗ್ ಮೇಕರ್ ಆಗುವ ಆಸೆ. ಏಕೆಂದರೆ ನಾನು ಎಲ್ಲಾ ರೀತಿಯ ಅಧಿಕಾರ ನೋಡಿದ್ದೇನೆ. ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿಯಗಿ ಕೂರಿಸಿ ದೇವೇಗೌಡರು ಅದನ್ನು ನೋಡಬೇಕು ಮತ್ತು ಹಿಂದೂ ಮುಸ್ಲಿಂ ಅವರು ಒಂದು ತಾಯಿಯ ಮಕ್ಕಳಂತೆ ಇರುವುದನ್ನು ನೋಡಬೇಕು ಅಷ್ಟೇ ನನ್ನ ಆಸೆ ಎಂದರು.

ಸುಳಿವು ಕೊಟ್ಟ ಕಟೀಲ್

ಅವಲೋಕನ ಮಾಡಿಕೊಂಡು ನಿರ್ಧಾರ ಎಲ್ಲವನ್ನೂ ಯೋಚನೆ ಮಾಡಿಕೊಂಡು ಮುಂದಿನ ದಿನಗಳಲ್ಲಿ ನಿರ್ಧರಿಸುತ್ತೇವೆ ಎಂದರು. ಎಲೆಕ್ಷನ್ ಕ್ಯಾಬಿನೆಟ್ ರಚಿಸುವ ವಿಚಾರಕ್ಕೆ ಪ್ರತಿಕ್ರಿಯಿಸಿ, ಯಾವುದೇ ಪ್ರಸ್ತಾಪ ಇಲ್ಲ ನಮ್ಮಲ್ಲಿ. ಸರ್ಕಾರ ಮತ್ತು ಪಕ್ಷ ಒಟ್ಟಾಗಿ ಚುನಾವಣೆ ಎದುರಿಸುತ್ತೇವೆ ಎಂದರು. ಮುಂದಿನ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಗೆ ಸರ್ವೆ ವಿಚಾರದ ಕುರಿತು ಮಾತನಾಡಿ, ನಾವು ಎಲ್ಲ ರೀತಿಯ ಸರ್ವೆಗಳನ್ನೂ ಮಾಡುತ್ತೇವೆ. ಸರ್ವೆ ಕಾರ್ಯಗಳು ಪ್ರಾರಂಭ ಆಗುತ್ತಿವೆ. ಸರ್ಕಾರ, ಜನಾಭಿಪ್ರಾಯ ಎಲ್ಲವನ್ನೂ ನೋಡುತ್ತೇವೆ. ಸ್ವಾಮೀಜಿಗಳಿಗೆ 50 ಕ್ಷೇತ್ರ ಬಿಟ್ಕೊಡಿ ಎಂದ ಭಟ್ಕಳದಲ್ಲಿ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಬ್ರಹ್ಮಾನಂದ ಸ್ವಾಮೀಜಿಗಳು ನಮ್ಮ ಗುರುಗಳು. ಅವರ ಮೇಲೆ ಅಪಾರ ಗೌರವ ಇದೆ. ರಾಜಕಾರಣದ ಬಗ್ಗೆ ಅವರು ಏನು ಹೇಳಿದ್ದಾರೋ ನನಗೆ ಗೊತ್ತಿಲ್ಲ. ಅವರ ಹೇಳಿಕೆ ಬಗ್ಗೆ ವಿಚಾರಿಸುತ್ತೇವೆ ಎಂದರು.

ಕಾವೇರಿ ನೀರು ಸಿಂಹಪಾಲು

ಬಳಸಿಕೊಳ್ಳುತ್ತಿವೆ. ಈ ಎರಡೂ ಪಕ್ಷಗಳಿಗೆ ರಾಜ್ಯದ ಪರ ಕಾಳಜಿ ಇಲ್ಲ. ರಾಷ್ಟ್ರೀಯ ಜಲನೀತಿಯಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಕೇಂದ್ರ ಸರ್ಕಾರ ನೀರಿನ ಹಂಚಿಕೆ ವಿಷಯದಲ್ಲಿ ಎಲ್ಲಾ ಸಮಯದಲ್ಲೂ ತಮಿಳುನಾಡು ಪರವಾಗಿದೆ. ರಾಜ್ಯದ ಪಾಲಿನ ನೀರನ್ನು ದಕ್ಕಿಸಿಕೊಳ್ಳಲು ಎಲ್ಲಾ ತ್ಯಾಗಕ್ಕೂ ಸಿದ್ಧ. ಹಾಗಾಗಿ ಅಂತರ ರಾಜ್ಯ ನೀರಾವರಿ ವ್ಯಾಜ್ಯಗಳನ್ನು ತುರ್ತು ನಿರ್ಧಾರ ಮತ್ತು ನ್ಯಾಯ ಸಮ್ಮತವಾಗಿ ನಿರ್ಧರಿಸಿಬೇಕು ಎಂದು ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದರು.

ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿ, ಜನತಾ ಜಲಧಾರೆ ಯೋಜನೆಯು ಗ್ರಾಮೀಣ ರೈತರ ಬದುಕಿನ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ಹಾಗಾಗಿ ಜೆಡಿಎಸ್ ಪಕ್ಷ ನಿಚ್ಚಳ ಬಹುಮತ ಪಡೆಯುವುದರ ಜೊತೆಗೆ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ಪಣತೊಡಬೇಕಾಗಿ ಮನವಿ ಮಾಡಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಜನತಾ ಜಲಧಾರೆ ಯೋಜನೆ ರೈತಪರ ಯೋಜನೆಯಾಗಿದ್ದು, ಭವಿಷ್ಯದಲ್ಲಿ ರೈತರಿಗೆ ವರದಾನವಾಗಲಿದೆ. ಇದರ ನಿರ್ಮಾತೃ ಮಾಜಿ ಪ್ರಧಾನಿ ದೇವೇಗೌಡರಿಗೆ ರಾಜ್ಯದ ನೀರಾವರಿ ಸಂಪನ್ಮೂಲಗಳ ಸಂಪೂರ್ಣ ಅರಿವಿದೆ. ಅವರು ಪ್ರಧಾನಿಯಾಗಿದ್ದ ವೇಳೆ ಕೂಡ ನೀರಿನ ಹಂಚಿಕೆ ವಿಚಾರದಲ್ಲಿ ರಾಜ್ಯದ ಪರ ನಿರ್ಧಾರ ಕೈಗೊಂಡಿದ್ದರು. ಹಾಗಾಗಿ ಅವರು ರಾಜ್ಯದ ನೀರಾವರಿ ಸಂಪನ್ಮೂಲಗಳನ್ನು ಸದ್ಬಳಕೆ ಮಾಡುವ ಬಗ್ಗೆ ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕಿದ್ದಲ್ಲಿ ಜನತಾದಳ ಪಕ್ಷವನ್ನು ಅಧಿಕಾರಕ್ಕೆ ತಂದರೆ ಮಾತ್ರ ಸಾಧ್ಯ. ಹಾಗಾಗಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಲು ನಾವು ಕಂಕಣ ಬದ್ಧರಾಗಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು. ಕಾರ್ಯಕ್ರಮಕ್ಕೆ ಮೊದಲು ಪಟ್ಟಣಕ್ಕೆ ಆಗಮಿಸಿದ ದೇವೇಗೌಡರಿಗೆ ಪೂರ್ಣ ಕುಂಭ ಸ್ವಾಗತ ನೀಡಲಾಯಿತು. ಪೆಟ್ರೋಲ್ ಬಂಕ್ ಚಂದು ನೇತೃತ್ವದಲ್ಲಿ ಕಾವೇರಿ ನದಿಯಿಂದ ನೀರನ್ನು ತಂದು ಜಲಧಾರೆ ಯಾತ್ರೆಯ ವಾಹನದ ಕಳಸಕ್ಕೆ ತುಂಬಿಸಲಾಯಿತು.

ಅಶ್ವಿನ್‌ಗೆ ಮತ್ತೊಂದು ಅವಕಾಶ ನೀಡಿ: ಶಾಸಕ ಅಶ್ವಿನ್ ಕುಮಾರ್ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದಾರೆ. ಸಂಭಾವಿತ ವ್ಯಕ್ತಿಯಾಗಿರುವ ಅವರು ಎಲ್ಲ ಸಮುದಾಯದವರನ್ನು ವಿಶ್ವಾಸಕ್ಕೆ ಪಡೆಯುವ ಮೂಲಕ ಕ್ಷೇತ್ರದಲ್ಲಿ ಉತ್ತಮವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಹಾಗಾಗಿ ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದ ಜನತೆ ಮತ್ತೊಮ್ಮೆ ಅವರಿಗೆ ಅವಕಾಶ ಕಲ್ಪಿಸಿಕೊಡುವಂತೆ ಮನವಿ ಮಾಡಿದರು

ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿ ಹೆಚ್.ಕೆ.ರಾಮು, ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಜಿಲ್ಲಾ ಮಹಿಳಾ ಅಧ್ಯಕ್ಷೆ ಬೃಂದಾ, ಜಿಪಂ ಮಾಜಿ ಅಧ್ಯಕ್ಷ ಸಿದ್ದಾರ್ಥ, ಪುರಸಭಾ ಸದಸ್ಯ ಸಿ.ಪ್ರಕಾಶ್, ಹಿಂದುಳಿದ ವರ್ಗಗಳ ಅಧ್ಯಕ್ಷ ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಗಂಗಾಧರ್‌ಗೌಡ, ಗ್ರಾ.ಪಂ. ಮಾಜಿ ಅಧ್ಯಕ್ಷ ಶಂಭು ದೇವನಪುರ ರಮೇಶ್, ಮಾಜಿ ಸದಸ್ಯ ರಾಚಪ್ಪ. ಮೂಗೂರು ಶಿವಮೂರ್ತಿ, ಸೋಸಲೆ ರಾಜೇಶ್, ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ತಾಲೂಕು ಮಹಿಳಾ ಅಧ್ಯಕ್ಷೆ ಯಶೋಧಮ್ಮ, ಕುಕ್ಕೂರು ಉಮಾಪತಿ ಮತ್ತಿತರರಿದ್ದರು.

ಇಂಧನ ಬಳಕೆ ನಿಲ್ಲಿಸದಿದ್ದರೆ ತಾಪಮಾನ ಅಧಿಕವಾಗಿ ಭೂಮಿ ಸಂಕಟ ಉಲ್ಬಣವಾಗುತ್ತದೆ

ಪರಿಸರ ತಜ್ಞ ನಾಗೇಶ್ ಹೆಗಡೆ ಎಚ್ಚರಿಕೆ



ಮೈಸೂರು,ಏ.24(ಎಂಟಿವೈ)– ಈಗಾಗಲೇ ಹೆಚ್ಚುತ್ತಿರುವ ತಾಪಮಾನ ಜೀವ ಸಂಕುಲವನ್ನು ಸಂಕಷ್ಟಕ್ಕೆ ದೂಡುತ್ತಿದೆ. ಇನ್ನಾದರೂ ಇಂಧನಗಳ ಬಳಕೆ ನಿಲ್ಲಿಸದಿದ್ದರೆ ಭೂಮಿ ಸಂಕಟ ಉಲ್ಬಣಗೊಳ್ಳಲಿದೆ ಎಂದು ವಿಜ್ಞಾನ ಲೇಖಕ, ಪರಿಸರ ತಜ್ಞ ನಾಗೇಶ್ ಹೆಗಡೆ ಎಚ್ಚರಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಭಾನುವಾರ ಉಳುಮೆ ಪ್ರತಿಷ್ಠಾನ ಆಯೋಜಿಸಿದ್ದ ಜಾಗತಿಕ ತಾಪಮಾನ ಮತ್ತು ಕೃಷಿ ವಿಷಯದ ಕುರಿತ ಜಾಗೃತಿ ಸಮಾವೇಶದಲ್ಲಿ ವರ್ಚುವಲ್ ಮೂಲಕ ಉಪನ್ಯಾಸ ನೀಡಿದರು.

ಪ್ರಸ್ತುತ ಸಂದರ್ಭದಲ್ಲಿ ಪೆಟ್ರೋಲ್ ಮೇಲೆ ಬಹುತೇಕರ ಜೀವನ ಅವಲಂಬಿತವಾಗಿದೆ. ಪೆಟ್ರೋಲ್ ಇಲ್ಲದೇ ಒಂದು ಕ್ಷಣವೂ ಇರಲಾರೆವು ಎಂಬ ಮಟ್ಟಕ್ಕೆ ತಲುಪಿದ್ದೇವೆ. ಇಡೀ ವಿಶ್ವವೇ ಪೆಟ್ರೋಲ್ ಬಿಗಿ ಮುಷ್ಟಿಯಲ್ಲಿ ಸಿಲುಕಿ ನರಳುವಂತಾಗಿದೆ. ಮಿತಿ ಮೀರಿದ ಪ್ರಮಾಣದಲ್ಲಿ ಸಂಚಾರ, ಸಾಗಾಣಿಕೆ, ಕೈಗಾರಿಕಾ ಹಾಗೂ ಔದ್ಯೋಗಿಕ ಚಟುವಟಿಕೆಗಳು, ಭೋಗ ಜೀವನದಿಂದಲೇ ತಾಪಮಾನ ಹೆಚ್ಚಾಗುತ್ತಿದೆ. ಇದರಿಂದಾಗಿಯೇ ಚಂಡ ಮಾರುತ, ಜಲಪ್ರಳಯ, ಅಗ್ನಿ ವಿಕೋಪಗಳು ಸಂಭವಿಸುತ್ತಿವೆ.

ತಾಪಮಾನ ಏರಿಕೆಯೂ ಅನಿರೀಕ್ಷಿತ ಘಟನೆಗಳು ಹೆಚ್ಚುತ್ತಿವೆ. ಇದರ ಪರಿಣಾಮದಿಂದಲೇ ಮಳೆಗಾಲ ಮುಗಿದು 2 ತಿಂಗಳು ಕಳೆಯುವುದರೊಳಗೆ ಬರಗಾಲ ಬರುತ್ತಿದೆ. ಮುಂಬೈನಲ್ಲಿ ಮಹಾಮಳೆ. ಚೆನ್ನೈನಲ್ಲಿ ನೀರಿಗೆ ಹಾಹಾಕಾರ. ಹಿಮಪರ್ವತಗಳ ಕುಸಿತದಿಂದ ಕರಾವಳಿ ಪ್ರದೇಶಗಳು ಸಂಕಷ್ಟಕ್ಕೆ ಸಿಲುಕಲಿವೆ. ಇಂತಹ ಮಾನವ ನಿರ್ಮಿತ ಪ್ರಕೃತಿ ವಿಕೋಪಗಳಿಂದಾಗಿ ರಾಜ್ಯದ ಕೆಲ ಜಿಲ್ಲೆಗಳು ಸೇರಿ ಅನೇಕ ಪ್ರದೇಶಗಳ ಮರುಭೂಮಿಯಾಗುವ ಆತಂಕ ಎದುರಿಸುತ್ತಿವೆ ಎಂದು ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದಾರೆ. ಇದನ್ನು ಎಲ್ಲರೂ ಗಂಭೀರವಾಗಿ ಪರಿಗಣಿಸಬೇಕು ಎಂದರು.

ಭೂಮಿ 120 ವರ್ಷಗಳ ಹಿಂದೆ ಸುಂದರವಾಗಿತ್ತು. ಆದರೆ ಮಾನವನ ದುರಾಸೆ ಪರಿಣಾಮ ಹಾಗೂ ಅತಿಯಾದ ಪ್ರಮಾಣದಲ್ಲಿ ಪೆಟ್ರೋಲ್ ಬಳಕೆಯಿಂದಾಗಿ ಕಾರ್ಬನ್ ಡೈಆಕ್ಸೈಡ್, ಮಿಥೇನ್ ಪರಿಸರಕ್ಕೆ ಸೇರುವ ಮೂಲಕ ತಾಪಮಾನ ಹೆಚ್ಚಾಗುತ್ತಲೇ ಇದೆ. ಇದು ಜೀವ ಸಂಕುಲಕ್ಕೆ ಸಂಕಟ ತರುತ್ತಿದೆ. ಕೊರೊನಾ, ಮಂಗನ ಕಾಯಿಲೆ, ಹಕ್ಕಿಜ್ವರ ಸೇರಿ ಹೊಸ ಹೊಸ ಕಾಯಿಲೆಗಳು ಬರುತ್ತಿವೆ ಎಂದು ವಿಷಾದಿಸಿದರು.

ಜಗತ್ತಿನ ಕೆಲ ಶ್ರೀಮಂತ ಹಾಗೂ ಅಭಿವೃದ್ಧಿ ಪರ ರಾಷ್ಟ್ರಗಳು ಮಾಡಿದ ತಪ್ಪಿಗೆ ಎಲ್ಲರೂ ತೊಂದರೆಗೀಡಾಗುವಂತಾಗಿದೆ. ಅಂತಹ ಅಭಿವೃದ್ಧಿ ರಾಷ್ಟ್ರಗಳಲ್ಲಿ ಭಾರತವೂ ಸೇರಿದೆ. ಭಾರತ ಅಭಿವೃದ್ಧಿ ಮಹಾರಥವನ್ನು ಎಳೆಯುತ್ತಿದೆ. ದೇಶದ ರಕ್ಷಣೆಗೆ ಖರ್ಚು ಮಾಡುವಷ್ಟು ಹಣವನ್ನು ನಿಸರ್ಗದ ರಕ್ಷಣೆಗೂ ಬಳಸಬೇಕಾಗಿದೆ. ತುರ್ತಾಗಿ ಬಿಸಿ ಪ್ರಳಯ ತಡೆಗಟ್ಟಲು ಪೆಟ್ರೋಲ್, ಡಿಸೇಲ್, ಸೀಮೆ ಎಣ್ಣೆ, ಕಲ್ಲಿದ್ದಲು ಬಳಕೆ ಕಡಿಮೆ ಮಾಡಬೇಕು. ಬಿಸಿಲು, ಗಾಳಿ, ತ್ಯಾಜ್ಯಗಳಿಂದ ಶಕ್ತಿ ಉತ್ಪಾದನೆ ಮಾಡಬೇಕು. ಅರಣ್ಯ ರಕ್ಷಣೆ, ಗಿಡ–ಮರ ಬೆಳೆಸುವಿಕೆ, ಚಿಕ್ಕ ಚಿಕ್ಕ ಅಣೆಕಟ್ಟೆ, ಸೌರಶಕ್ತಿಯಿಂದ ವಿದ್ಯುತ್ ಉತ್ಪಾದನೆ, ಕಾರುಗಳ ಬಳಕೆ ಕಡಿಮೆ ಮಾಡಿ ರೈಲುಗಳ ಬಳಕೆ ಹೆಚ್ಚಿಸಬೇಕು ಎಂದು ಸಲಹೆ ನೀಡಿದರು.

ಆಹಾರ ತಜ್ಞ ಕೆ.ಸಿ.ರಘು ಮಾತನಾಡಿ, ಈವರೆಗೆ ಜಗತ್ತಿನಲ್ಲಿ 5 ಮಹಾಪ್ರಳಯಗಳು ಸಂಭವಿಸಿವೆ. 6ನೇ ಮಹಾಪ್ರಳಯಕ್ಕೆ ಮನುಷ್ಯನೇ ಕಾರಣ ಎಂದು ವೈಜ್ಞಾನಿಕವಾಗಿ ಹೇಳಲಾಗುತ್ತಿದೆ. ಒಂದು ಪ್ರಳಯ ವೈವಿಧ್ಯತೆಯ ಮಾರಣಹೋಮ ಆಗುವ ಸಾಧ್ಯತೆ ಇದೆ. 2025ಕ್ಕೆ ಶೇ.20 ಸಾರಾಯಿ ಬಳಕೆ ಮಾಡಿ ವಾಹನಗಳನ್ನು ಓಡಿಸುವ ಚಿಂತನೆ ನಡೆದಿದೆ. ಅದಕ್ಕಾಗಿ 800 ಫ್ಯಾಕ್ಟರಿಗಳನ್ನು ಬಳಸಲು ಚಿಂತಿಸಲಾಗಿದೆ. ಈಗಾಗಲೇ ಅಮೆರಿಕದಲ್ಲಿ ಶೇ. 35 ಧಾನ್ಯ ತೈಲ ಉತ್ಪಾದನೆ ಹೋಗುತ್ತಿದೆ. ಜತೆಗೆ ಅಮೆರಿಕದಲ್ಲಿ 10 ಸಾವಿರ ಡಾಲರ್ ಔಷಧಕ್ಕೆ ಖರ್ಚು ಮಾಡಿದರೆ, 5 ಸಾವಿರ ಡಾಲರ್ ಆಹಾರಕ್ಕೆ ಖರ್ಚು ಮಾಡಲಾಗುತ್ತಿದೆ ಎಂದರು.

ಬೌದ್ಧ ಗುರು ದಲೈಲಾಮ ಅವರು, ಪ್ರಸ್ತುತ ಮನೆಗಳು ದೊಡ್ಡದಾಗಿವೆ, ಒಳಗಡೆ ಜನ ಇಲ್ಲ. ಔಷಧ ಹೆಚ್ಚಿದೆ, ಆರೋಗ್ಯ ಇಲ್ಲ. ಚಂದ್ರನ ಮೇಲೆ ಹೋಗಬಹುದು. ಬೀದಿ ದಾಟಲು ಆಗಲ್ಲ ಎಂದಿದ್ದಾರೆ. ಇದು ಈ ಕಾಲದ ವಿಪರ್ಯಾಸ. ಇತಿಹಾಸದಿಂದ ಮನುಷ್ಯ ಪಾಠ ಕಲಿಯಬೇಕೆಂಬ ಸಾಮಾನ್ಯ ಮಾತಿದೆ ಆದರೆ ಮತ್ತೆ ಮತ್ತೆ ತಪ್ಪುಗಳನ್ನು ಮಾಡುತ್ತಿದ್ದಾನೆ. ಈಗ ಕಲಿತು ಮೂರ್ಖರಾಗಿದ್ದೇವೆ ಎನಿಸುತ್ತದೆ ಎಂದು ವಿಷಾದಿಸಿದರು.

ಬದಲಾದ ಚಿಕನ್ ಪದ್ಧತಿ: ತಾಪಮಾನ ಏರಿಕೆಗೆ ಕೃಷಿಯ ಕೊಡುಗೆ ಎಷ್ಟಿದೆ ಎಂಬುದನ್ನು ಕೋಳಿ ಸಾಗಣಿಕೆಯಿಂದ ಚರ್ಚಿಸೋಣ. ಹಿಂದೆ ಕಿಚನ್ ತ್ಯಾಜ್ಯವನ್ನು ಬಳಸಿ ಕೋಳಿ ಸಾಕಲಾಗುತ್ತಿತ್ತು. ಅನಂತರ ಚಿಕನ್ ಕಿಚನ್‌ಗೆ ಬರುತ್ತಿತ್ತು. ಈಗ ಚಿಕನ್ ದೊಡ್ಡ ಉದ್ಯಮವಾಗಿ ಬೆಳೆದಿದೆ. ಚಿಕನ್ ತಿಂದು ಬೊಜ್ಜು ಬರಿಸಿಕೊಂಡು ಆಸ್ಪತ್ರೆಗೆ ಹೋಗುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ದಲಿತ ಸಂಘರ್ಷ ಸಮಿತಿ ಸಂಚಾಲಕ ಬೆಟ್ಟಯ್ಯಕೋಟೆ, ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಉಳುಮೆ ಪ್ರತಿಷ್ಠಾನದ ಅವಿನಾಶ್ ಹಾಗೂ ಇನ್ನಿತರು ಪಾಲ್ಗೊಂಡಿದ್ದರು.

ರೈತರ ಹಿತ ಕಾಪಾಡುವುದೇ ದೇವೇಗೌಡರ ಸಂಕಲ್ಪ

ಎಂಎಲ್‌ಸಿ ಸಿ.ಎನ್.ಮಂಜೇಗೌಡ



ತಿ.ನರಸೀಪುರ, ಏ.24– ರೈತರ ಹಿತ ಕಾಪಾಡುವುದೇ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮತ್ತು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರ ಸಂಕಲ್ಪ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ಜಾತ್ಯಾತೀತ ಜನತಾದಳದ ವತಿಯಿಂದ ಪಟ್ಟಣದ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆದ ಜನತಾ ಜಲಧಾರೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಅದರಲ್ಲಿ ಮುಖ್ಯಮಂತ್ರಿಯಾದ 24 ಗಂಟೆಯಲ್ಲೇ ರೈತರ 26 ಸಾವಿರ ಕೋಟಿ ಸಾಲ ಮನ್ನಾ ಮಾಡಿದರು. ಈ ಹಿಂದೆ ಯಾವ ಸರ್ಕಾರಗಳು ಇಷ್ಟೊಂದು ದೊಡ್ಡ ಮೊತ್ತದ ಸಾಲ ಮನ್ನಾ ಮಾಡಿರಲಿಲ್ಲ ಎಂದ ಅವರು ದೇವೇಗೌಡರಿಗೆ ಈ ರಾಜ್ಯದ ಆಣೆಕಟ್ಟೆಗಳಲ್ಲಿನ ನೀರಿನ ಸಂಗ್ರಹಣೆಯ ಬಗ್ಗೆ ವೈಜ್ಞಾನಿಕ ಮತ್ತು ನಿಖರವಾದ ಮಾಹಿತಿ ತಿಳಿದಿದೆ. ಜನತಾ ಜಲಧಾರೆ ಕಾರ್ಯಕ್ರಮ ಮೂಲಕ ಗೋದಾವರಿ, ಕೃಷ್ಣ, ಕಾವೇರಿ ನದಿಗಳ ಜೋಡಣೆ, ಕೇಂದ್ರದಿಂದ ಕಾವೇರಿ ನೀರು ಹಂಚಿಕೆ ವಿಷಯದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯ ತಡೆಯಲು ಇಳಿ ವಯಸ್ಸಿನಲ್ಲಿಯೂ ಹೋರಾಡುತ್ತಿರುವ ದೇವೇಗೌಡರು ನಮ್ಮೆಲ್ಲರಿಗೂ ಸ್ಫೂರ್ತಿ ಎಂದರು.

ಅಶ್ವಿನಿ ಕುಮಾರ್ ರಂತಹ ಶಾಸಕರು ನಮಗೆ ಸಿಕ್ಕಿರುವುದು ನಮ್ಮೆಲ್ಲರ ಭಾಗ್ಯ. 2023ರ ಚುನಾವಣೆಯಲ್ಲಿ ಅಶ್ವಿನಿ ಕುಮಾರ್ ಅವರನ್ನು ಗೆಲ್ಲಿಸಿ ಹೆಚ್.ಡಿ.ದೇವೇಗೌಡರು ಮತ್ತು ಕುಮಾರಣ್ಣನವರ ಕೈ ಬಲಪಡಿಸಬೇಕು. ನಾನು ಜೆಡಿಎಸ್ ಪಕ್ಷಕ್ಕೆ ಬಂದ 15 ದಿನದಲ್ಲಿ ನನ್ನನ್ನು ಎಂಎಲ್‌ಸಿ ಮಾಡಿ ನಿಮ್ಮ ಶಕ್ತಿ ಏನೆಂದು ತೋರಿಸಿದ್ದೀರಿ ಇದೇ ರೀತಿ ಅಶ್ವಿನ್ ಕುಮಾರ್ ಅವರನ್ನು ಗೆಲ್ಲಿಸಿ ಕುಮಾರಣ್ಣನವರನ್ನು ಮುಖ್ಯಮಂತ್ರಿ ಮಾಡಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ಹವಾಮಾನ ವೈಪರೀತ್ಯದಿಂದ ಮೈಸೂರಲ್ಲಿ ಹೆಚ್ಚಾಗುತ್ತಿರುವ ತಾಪಮಾನ

- ಮುಂದಿನ ವಾರ 36 ರಿಂದ 38 ಡಿಗ್ರಿ ಉಷ್ಣಾಂಶವಿರುವ ಸಾಧ್ಯತೆ
- ಬಿಸಿಲಿನ ಬೇಗೆಗೆ ತತ್ತರಿಸಿದ ಸಾರ್ವಜನಿಕರು
- ಎಳನೀರು, ಕಲ್ಲಂಗಡಿ ಹಣ್ಣು, ತಂಪು ಪಾನೀಯಗಳಿಗೆ ಬೇಡಿಕೆ





ಏ.9 ರಿಂದ 12ರವರೆಗೆ 34 ರಿಂದ 35 ಡಿಗ್ರಿ ಉಷ್ಣಾಂಶ ದಾಖಲು
ಏ.16 ರಿಂದ 19ರವರೆಗೆ 31.2 ರಿಂದ 34 ಡಿಗ್ರಿ ದಾಖಲು
ಏ.20 ರಿಂದ 22ರವರೆಗೆ 34.2 ರಿಂದ 34.4 ಡಿಗ್ರಿ ದಾಖಲು
ಏ.23 ರಿಂದ 27ರವರೆಗೆ 35 ರಿಂದ 38 ಡಿಗ್ರಿ ದಾಖಲಾಗುವ ನಿರೀಕ್ಷೆಯಿದೆ.

ಮೈಸೂರು, ಏ.24(ಎಂಟಿವೈ)– ಹವಾಮಾನ ವೈಪರೀತ್ಯದಿಂದಾಗಿ ಮೈಸೂರಿನಲ್ಲಿ ಮುಂದಿನ ಒಂದು ವಾರ ತಾಪಮಾನ ಹೆಚ್ಚಾಗುವ ಸಾಧ್ಯತೆ ಇದ್ದು, ಹವಾಮಾನ ಇಲಾಖೆ ಮುಂದಿನ ಒಂದು ವಾರ 36 ರಿಂದ 38 ಡಿಗ್ರಿ ಉಷ್ಣಾಂಶ ದಾಖಲಾಗಲಿದೆ ಎಂದು ಖಚಿತಪಡಿಸಿದೆ.

ಕಳೆದ 15 ದಿನದಿಂದ ಮೈಸೂರಲ್ಲಿ ಹವಾಮಾನದಲ್ಲಿ ಏರುಪೇರಾಗುತ್ತಿದ್ದು, ಕೆಲ ದಿನ ತಾಪಮಾನ ಕಡಿಮೆ ಇದ್ದರೆ, ಮತ್ತೆ ಕೆಲವು ದಿನ ಮೋಡ ಮುಸುಕಿದ ವಾತಾವರಣ ದಾಖಲಾಗುತ್ತಿತ್ತು. ಆದರೆ ಏ.23 ರಿಂದ 27ರವರೆಗೆ ತಾಪಮಾನದಲ್ಲಿ ಗಣನೀಯ ಪ್ರಮಾಣದ ಬದಲಾವಣೆಯಾಗಲಿದ್ದು, 35 ರಿಂದ 38 ಡಿಗ್ರಿವರೆಗೆ ಉಷ್ಣಾಂಶ ದಾಖಲಾಗಿ, ಜನರು ಬಿಸಿಲಿನ ಬೇಗೆಯಿಂದ ಬಸವಳಿಯುವುದು ಖಚಿತವಾದಂತಾಗಿದೆ. ಭಾನುವಾರ 35 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು. ಆದರೂ ಮೋಡ ಕವಿದ ವಾತಾವರಣ ಆಗಿಂದಾಗ ಕಂಡು ಬರುತ್ತಿತ್ತು.

ಸೋಮವಾರದಿಂದ ಗುರುವಾರದವರೆಗೆ ಬಿಸಿಲಿನ ಬೇಗೆ ದಟ್ಟವಾಗುವ ಸಾಧ್ಯತೆ ಬಹುತೇಕ ಹೆಚ್ಚಾಗಿದೆ. ಬೇಸಿಗೆ ಕಾಲದ ಆರಂಭದಲ್ಲೇ ಇಷ್ಟು ದೊಡ್ಡ ಪ್ರಮಾಣದಲ್ಲಿ ತಾಪಮಾನ ದಾಖಲಾಗುತ್ತಿರುವುದರಿಂದ ಮಕ್ಕಳು, ಹಿರಿಯ ನಾಗರಿಕರು, ಜನ–ಜಾನುವಾರುಗಳು ಬಿಸಿಲಿನ ಬೇಗೆಗೆ ತತ್ತರಿಸುವಂತಾಗಿದೆ.

ಈಗಾಗಲೇ ಮೈಸೂರು ನಗರದಲ್ಲಿ ಬೇಸಿಗೆಯ ಬೇಗೆಯನ್ನು ತಣಿಸುವ ನಿಟ್ಟಿನಲ್ಲಿ ಬೇಸಿಗೆ ಕಾಲದ ಹಣ್ಣುಗಳ ಮಾರಾಟ ಭರದಿಂದ ಸಾಗುತ್ತಿದೆ. ಇದರೊಂದಿಗೆ ಎಳನೀರು, ದೇಹವನ್ನು ತಂಪು ಮಾಡುವಂತಹ ಪಾನೀಯಗಳು, ಕಲ್ಲಂಗಡಿ ಹಣ್ಣು, ದ್ರಾಕ್ಷಿ ಸೇರಿದಂತೆ ಇನ್ನಿತರ ಹಣ್ಣುಗಳ ವ್ಯಾಪಾರವೂ ಭರ್ಜರಿಯಾಗಿ ನಡೆಯುತ್ತಿದ್ದು, ವ್ಯಾಪಾರಿಗಳಿಗೆ ಲಾಭದಾಯಕವಾಗಿದೆ.

ನಾಗನಹಳ್ಳಿಯಲ್ಲಿರುವ ಕೃಷಿ ಸಂಶೋಧನಾ ಕೇಂದ್ರದ ವತಿಯಿಂದ ಬಿಡುಗಡೆಯಾಗಿರುವ ಹವಾಮಾನ ವರದಿಯಲ್ಲಿ ತಿಂಗಳಾಂತ್ಯದ ವೇಳೆಗೆ 37 ಡಿಗ್ರಿ ಸೆಲಿಷಿಯಸ್ ತಾಪಮಾನ ದಾಖಲಾಗುವುದಾಗಿ ಖಚಿತಪಡಿಸಿದೆ.

ಮೇಟಗಳ್ಳಿಯಿಂದ ಮಾನಸಿಕ ಅಸ್ವಸ್ಥ ನಾಪತ್ತೆ



ಮೈಸೂರು, ಏ.24–ಮಾನಸಿಕ ಅಸ್ವಸ್ಥನೋರ್ವ ಕಾಣೆಯಾಗಿರುವ ಬಗ್ಗೆ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮೇಟಗಳ್ಳಿ ಬಡಾವಣೆಯ ವಾಸಿ ಲೇಟ್ ರಂಗಶೆಟ್ಟಿ ಅವರ ಮಗ ಬಸವಯ್ಯ (60) ಎಂಬುವರೇ ಕಾಣೆಯಾದವರಾಗಿದ್ದಾರೆ.

ಬಸವಯ್ಯ ಮೇ 8ರಂದು ಮನೆಯಿಂದ ಹೊರಗಡೆ ಹೋದವರು ಇದುವರೆಗೂ ಮನೆಗೆ ಹಿಂತಿರುಗಿಲ್ಲ. ಇವರನ್ನು ಹುಡುಕಿ ಕೊಡುವವಂತೆ ಮನೆಯವರು ಮೇಟಗಳ್ಳಿ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ಮನವಿ ಮಾಡಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕವರು ದೂ: 0821–2418339, 2418115, 9686343271, 9480802239 ಮೂಲಕ ತಿಳಿಸಲು ಕೋರಲಾಗಿದೆ.

ಆನಂದಕಂದ ಡಾ.ಬೆಟಗೇರಿ ಕೃಷ್ಣಶರ್ಮರ ಹೆಸರಿನ ಪ್ರಶಸ್ತಿಗಳು ಪ್ರದಾನ

ಬೆಟಗೇರಿ ಕೃಷ್ಣಶರ್ಮರ ಸಮಗ್ರ ಸಾಹಿತ್ಯ ಪ್ರಕಟಿಸಲು ಸರ್ಕಾರಕ್ಕೆ ಒತ್ತಾಯ

ಕೃಷ್ಣಶರ್ಮರ ಕೊಡುಗೆ ಕನ್ನಡ ಸಾಹಿತ್ಯ ಅಧ್ಯಯನಕ್ಕೆ ಆಕಾರ ಸ್ವರೂಪಿ ; ಹಿರಿಯ ಸಂಶೋಧಕ ನಾಡೋಜ ಡಾ.ಹಂಪನಾ



ಮೈಸೂರು ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಭಾನುವಾರ ಡಾ.ಬೆಟಗೇರಿ ಕೃಷ್ಣಶರ್ಮ ಹೆಸರಿನ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಮೈಸೂರು,ಏ.24(ಪಿಎಂ)–'ಆನಂದಕಂದ' ಎಂಬ ಕಾವ್ಯನಾಮದಿಂದ ಹೆಸರುವಾಸಿಯಾದ ಡಾ.ಬೆಟಗೇರಿ ಕೃಷ್ಣಶರ್ಮ ಅವರ ಹೆಸರಿನಲ್ಲಿ ಮೂರು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆಗಾಗಿ ಕೊಡಮಾಡುವ ಪ್ರಶಸ್ತಿಗಳನ್ನು ಭಾನುವಾರ ಪ್ರದಾನ ಮಾಡಲಾಯಿತು. ಅಲ್ಲದೆ, ಬೆಟಗೇರಿ ಕೃಷ್ಣಶರ್ಮರ ಸಮಗ್ರ ಸಾಹಿತ್ಯ ಪ್ರಕಟಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶೀಘ್ರ ಕ್ರಮ ವಹಿಸಬೇಕೆಂಬ ಒತ್ತಾಯವೂ ವ್ಯಕ್ತವಾಯಿತು.

ಕಾವ್ಯ, ಕಥೆ, ಕಾದಂಬರಿ, ವಿಮರ್ಶೆ–ಸಂಶೋಧನೆ, ಜಾನಪದ ಮತ್ತು ಪತ್ರಿಕೋದ್ಯಮ ಸೇರಿದಂತೆ ಆರು ಕ್ಷೇತ್ರಗಳಲ್ಲಿ ಬೆಟಗೇರಿ ಕೃಷ್ಣಶರ್ಮರು ವಿಶಿಷ್ಟ ಸೇವೆ ಸಲ್ಲಿಸಿ, ಕೊಡುಗೆ ನೀಡಿದ್ದಾರೆ. ಈ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ರಾಜ್ಯ ಸರ್ಕಾರದ ಅಧೀನದ ಬೆಳಗಾವಿಯ ಡಾ.ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಟ್ರಸ್ಟ್ ವತಿಯಿಂದ ಪ್ರತಿ ವರ್ಷ ಕೃಷ್ಣಶರ್ಮರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಅದರಂತೆ ಮೈಸೂರಿನ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಹಯೋಗದಲ್ಲಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಈ ಬಾರಿ ಮೂರು ಕ್ಷೇತ್ರಗಳ ಸೇವೆಗಾಗಿ ಪ್ರಶಸ್ತಿಗಳನ್ನು ನೀಡಲಾಯಿತು.

ವಿಮರ್ಶಕ ಮತ್ತು ಸಂಶೋಧಕ ಡಾ.ಸಿ.ಎನ್. ರಾಮಚಂದ್ರನ್ ಅವರಿಗೆ 'ಡಾ.ಬೇಟಗೇರಿ ಕೃಷ್ಣಶರ್ಮ ವಿಮರ್ಶಾ–ಸಂಶೋಧನಾ ಪ್ರಶಸ್ತಿ', ಹಿರಿಯ ಜಾನಪದ ವಿದ್ವಾಂಸ ಡಾ.ಎನ್.ಆರ್. ನಾಯಕ ಅವರಿಗೆ 'ಡಾ.ಬೇಟಗೇರಿ ಕೃಷ್ಣಶರ್ಮ ಜಾನಪದ ಪ್ರಶಸ್ತಿ' ಮತ್ತು ಹಿರಿಯ ಪತ್ರಕರ್ತ ಡಾ.ಪದ್ಮರಾಜ ದಂಡಾವತಿ ಅವರಿಗೆ 'ಡಾ.ಬೇಟಗೇರಿ ಕೃಷ್ಣಶರ್ಮ ಪತ್ರಕರ್ತ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಪ್ರಶಸ್ತಿಗಳನ್ನು ಪ್ರದಾನ ಮಾಡಿದ ಹಿರಿಯ ಸಂಶೋಧಕ ನಾಡೋಜ ಡಾ.ಹಂಪ ನಾಗರಾಜಯ್ಯ ಮಾತನಾಡಿ, 20ನೇ ಶತಮಾನದ ಕನ್ನಡ ಸಾಹಿತಿಗಳಲ್ಲಿ ಒಬ್ಬರಿಗಿಂತ ಒಬ್ಬರು ಅತಿರಥ ಮಹಾರಥರು. ಅವರ ನಡುವೆ ದೊಡ್ಡ ಮಟ್ಟದ ಕೆಲಸ ಮಾಡಿದವರು ಬೆಟಗೇರಿ ಕೃಷ್ಣಶರ್ಮ. ಅವರ ಕೊಡುಗೆ ಕನ್ನಡ ಸಾಹಿತ್ಯ ಅಧ್ಯಯನಕ್ಕೆ ಆಕಾರ ಸ್ವರೂಪಿಯಾಗಿವೆ ಎಂದು ಸ್ಮರಿಸಿದರು.

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಬೆಟಗೇರಿ ಕೃಷ್ಣಶರ್ಮರನ್ನು ಆಯ್ಕೆ ಮಾಡಬೇಕೆಂದು ತೀರ್ಮಾನಿಸಲಾಗಿತ್ತು. ಆದರೆ ಅವರಿಗೆ ತೀವ್ರ ಅನಾರೋಗ್ಯವಿದ್ದ ಕಾರಣ ಅದು ಸಾಧ್ಯವಾಗಲಿಲ್ಲ. ಅವರ ಕೊಡುಗೆಯ ಅನನ್ಯತೆ ಮತ್ತು ಮಹತ್ವದ ಹಿನ್ನೆಲೆಯಲ್ಲಿ ಅವರಿಗೆ ಸಲ್ಲಬೇಕಾದ ಮಟ್ಟದಲ್ಲಿ ಗೌರವ ಸಂದಿಲ್ಲ ಎಂದು ಕಸಾಪ ಕಾರ್ಯಕಾರಿ ಸಮಿತಿಯೊಂದಿಗೆ 1979ರಲ್ಲಿ ಕೃಷ್ಣಶರ್ಮ ನಿವಾಸಕ್ಕೆ ತೆರಳಿ ಸನ್ಮಾನಿಸಿದೆವು. ಈ ವೇಳೆ ಅವರಿಗೆ ಮಾತನಾಡಲು ಆಗದಿದ್ದರೂ ಅವರ ಕಣ್ಣಿನಲ್ಲಿ ಆನಂದಬಾಷ್ಪ ಹರಿಯಿತು. ಹೀಗೆ ತಮ್ಮ ಆನಂದವನ್ನು ಕಣ್ಣೀರಿನ ಮೂಲಕ ವ್ಯಕ್ತಪಡಿಸಿದರು ಎಂದು ಹಳೇ ನೆನಪಿಗೆ ಜಾರಿದರು.

ಇದಕ್ಕೂ ಮುನ್ನ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಪ್ರೊ.ರಾಘವೇಂದ್ರ ಪಾಟೀಲ, ಕೃಷ್ಣಶರ್ಮರು ಉತ್ತರ ಕರ್ನಾಟಕದ ಸಾಂಸ್ಕೃತಿಕ, ಸಾಹಿತ್ಯಕ ಕ್ಷೇತ್ರದ ಅತ್ಯಂತ ಮಹತ್ವದ ವ್ಯಕ್ತಿ. ಅವರ ಸಾಹಿತ್ಯ–ಆದರ್ಶ ತಲುಪಿಸಬೇಕೆಂಬ ಆಶಯದಲ್ಲಿ ಟ್ರಸ್ಟ್ ಕಾರ್ಯನಿರ್ವಹಿಸುತ್ತಿದೆ ಎಂದರು.

ಬಸವರಾಜ ಕಟ್ಟಿಮನಿಯವರ ಸಮಗ್ರ ಸಾಹಿತ್ಯ ಪ್ರಕಟಿಸಲು 65 ಲಕ್ಷ ರೂ. ಅನುದಾನ ಕೊಡಲಾಗಿದೆ. ಅವರ ಎಲ್ಲಾ ಕೃತಿಗಳನ್ನು ಕೃತಿಸ್ವಾಮ್ಯ ಹೊಂದಿರುವ ಪ್ರಕಾಶನ ಸಂಸ್ಥೆ ಪ್ರಕಟಿಸುತ್ತಿದೆ. ಆದರೂ ಅವರ ಸಮಗ್ರ ಸಾಹಿತ್ಯ ಪ್ರಕಟಿಸಲು ಸರ್ಕಾರದಿಂದ 65 ಲಕ್ಷ ರೂ. ಅನುದಾನ ನೀಡಲಾಗಿದೆ. ಆದರೆ ಈವರೆಗೆ ಬೆಟಗೇರಿ ಕೃಷ್ಣಶರ್ಮರ ಸಮಗ್ರ ಸಾಹಿತ್ಯ ಪ್ರಕಟಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂದಾಗಿಲ್ಲ. ಆ ಮೂಲಕ ಇಲಾಖೆಯು ಬೆಟಗೇರಿ ಕೃಷ್ಣಶರ್ಮರಿಗೆ ಅನ್ಯಾಯ ಮಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕೃಷ್ಣಶರ್ಮರ ಸಮಗ್ರ ಸಾಹಿತ್ಯ ಪ್ರಕಟಣೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕ್ರಮ ಕೈಗೊಳ್ಳಬೇಕು. ಟ್ರಸ್ಟ್ ಮೂಲಕವೇ ಪ್ರಕಟಿಸಬೇಕೆಂಬ ಒತ್ತಾಯವಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿವಿಧ ಅಂಗಸಂಸ್ಥೆಗಳಿದ್ದು, ಅವುಗಳಲ್ಲಿ ಯಾವುದಾದರೂ ಒಂದರ ಮೂಲಕ ಈ ಕಾರ್ಯವಾದರೂ ಸರಿಯೇ. ಒಟ್ಟಾರೆ ಕೃಷ್ಣಶರ್ಮರ ಸಮಗ್ರ ಸಾಹಿತ್ಯ ಪ್ರಕಟಿಸಬೇಕು ಎಂದು ಒತ್ತಾಯಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರೂ ಆದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಆಯುಕ್ತ ಡಾ.ಮನು ಬಳಿಗಾರ ಮಾತನಾಡಿ, ರಾಜ್ಯದಲ್ಲಿರುವ ಒಟ್ಟು 14 ಸರ್ಕಾರಿ ಟ್ರಸ್ಟ್‌ಗಳಲ್ಲಿ 8 ಟ್ರಸ್ಟ್‌ಗಳು ನನ್ನ ಅವಧಿಯಲ್ಲಿ ಸ್ಥಾಪನೆಯಾಗಿದ್ದು, ಅದರಲ್ಲಿ ಕೃಷ್ಣಶರ್ಮರ ಟ್ರಸ್ಟ್ ಕೂಡ ಒಂದು. ಎಲ್ಲಾ ಟ್ರಸ್ಟ್‌ಗಳಿಗೆ ಪ್ರತಿ ವರ್ಷ ತಲಾ 12 ಲಕ್ಷ ರೂ. ಅನುದಾನ ನೀಡುವಂತೆ ವ್ಯವಸ್ಥೆ ಮಾಡಲಾಗಿತ್ತು. ಆದರೆ ಈಗ ಕೋವಿಡ್ ಕಾರಣ ಆರ್ಥಿಕ ಕೊರತೆಯ ಕಾರಣಕ್ಕೇನೋ ನಾಲ್ಕೈದು ಲಕ್ಷ ರೂ.ಗೆ ಅನುದಾನ ಇಳಿಕೆಯಾಗಿರುವುದು ನೋವಿನ ಸಂಗತಿ. ಕೃಷ್ಣಶರ್ಮರ ಸಮಗ್ರ ಸಾಹಿತ್ಯ ಪ್ರಕಟಿಸುವ ಸಂಬಂಧ ಹಾಗೂ ಅನುದಾನ ಹೆಚ್ಚಳಕ್ಕೆ ಸರ್ಕಾರಕ್ಕೆ ಮನವಿ ಸಲ್ಲಿಸಿ, ನಾನೂ ನಿಮ್ಮ ಜೊತೆಗೆ ಇರುತ್ತೇನೆ ಎಂದು ಪ್ರೊ.ರಾಘವೇಂದ್ರ ಪಾಟೀಲರಿಗೆ ಸಲಹೆ ನೀಡಿದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ಎಂ.ಜಿ.ಮಂಜುನಾಥ ಸಮಾರಂಭ ಉದ್ಘಾಟಿಸಿದರು. ಹಿರಿಯ ಸಂಶೋಧಕಿ ನಾಡೋಜ ಡಾ.ಕಮಲಾ ಹಂಪನಾ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ.ಇ.ಸಿ.ನಿಂಗರಾಜಗೌಡ, ಸಂಸ್ಕೃತಿ ಚಿಂತಕ ಡಾ.ಗುರುಪಾದ ಮರಿಗುದ್ದಿ ಸೇರಿದಂತೆ ಟ್ರಸ್ಟ್‌ನ ಸದಸ್ಯರು ಹಾಜರಿದ್ದರು.

ಮೈಸೂರು ಮಿತ್ರ ಸೋಮವಾರ 25 ಏಪ್ರಿಲ್ 2022

ಹಣಕ್ಕೆ ಆಸೆ ಪಡದೆ ನಾಗರಿಕರ ಕೆಲಸ ಮಾಡಿಕೊಡಿ

ಗ್ರಾಪಂ ನೌಕರರಿಗೆ ಶಾಸಕ ಸಾ.ರಾ.ಮಹೇಶ್ ಸಲಹೆ



ಕೆ.ಆರ್.ನಗರ, ಏ.24– ಸಾರ್ವಜನಿಕರ ಹಣ ವಿಷಪವಿದ್ದಂತೆ. ಹೀಗಾಗಿ ಹಣಕ್ಕೆ ಆಸೆ ಪಡದೆ ಪಡೆಯುತ್ತಿರುವ ವೇತನಕ್ಕೆ ಸಂತೃಪ್ತರಾಗಿ ನಾಗರಿಕರ ಕೆಲಸ ಮಾಡಿಕೊಡುವಂತೆ ಗ್ರಾಪಂ ನೌಕರರಿಗೆ ಶಾಸಕ ಸಾ.ರಾ.ಮಹೇಶ್ ಸಲಹೆ ನೀಡಿದರು.

ಪಟ್ಟಣದ ತಾಪಂ ಆವರಣದಲ್ಲಿ ಸರ್ಕಾರಿ ನೌಕರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೆಲವರು ನಿಮಗಿಂತ ಹೆಚ್ಚು ವಿದ್ಯಾವಂತರಾಗಿದ್ದರೂ, ಕೆಲಸವಿಲ್ಲದೆ ಕಡಿಮೆ ವೇತನಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ ನೀವು ಕೆಲಸಕ್ಕೆ ಸೇರಿದ ಅಲ್ಪ ಸಮಯದಲ್ಲೇ ಕೈ ತುಂಬಾ ವೇತನ ಪಡೆಯುತ್ತಿದ್ದು ಅದಕ್ಕೆ ತೃಪ್ತರಾಗಿ ಕೆಲಸ ಮಾಡಿ ಎಂದರು.

ನನ್ನ ಜೊತೆಯಲ್ಲಿದ್ದವರು ಇಂದು ಉಪಮುಖ್ಯಮಂತ್ರಿಯಾಗಿದ್ದಾರೆ. ಅವರನ್ನು ನೋಡಿ ಅಸೂಯೆ ಪಡದೆ ನಾನು ಸಂತೃಪ್ತನಾಗಿದ್ದೇನೆ. ಅದೇ ರೀತಿ ಯಾರೋ ಅಧಿಕಾರಿಯ ತಂದೆ ಶ್ರೀಮಂತನಾಗಿರುವುದರಿಂದ ಅವನು ಕಾರಿನಲ್ಲಿ ಓಡಾಡುತ್ತಾನೆ ಎಂದು ನೀವು ಕಾರು ಕೊಂಡುಕೊಳ್ಳಲು ಭ್ರಷ್ಟಾಚಾರಕ್ಕೆ ಇಳಿಯಬೇಡಿ. ಇದ್ದುದ್ದರಲ್ಲಿ ತೃಪ್ತಿಪಟ್ಟು ಕೆಲಸ ಮಾಡಿ ಎಂದರು.

ಈ ಹಿಂದೆ ನಾನು ಕೆಲಸಕ್ಕೆ ಸೇರಿಸಿದ ವ್ಯಕ್ತಿಯೇ ನನ್ನ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಿರುವ ವ್ಯಕ್ತಿಗೆ ಮತ ನೀಡುವಂತೆ ಪ್ರಚಾರ ಮಾಡಿದರು. ಆದರೆ ಅವನನ್ನು ಇಲ್ಲಿಯ ತನಕ ಮಾತನಾಡಿಸಿಲ್ಲ ಹಾಗೂ ಅವನನ್ನು ಸಹ ಖಾಯಂ ಮಾಡಲು ಶಿಫಾರಸ್ಸು ಮಾಡಿದ್ದೇನೆ ಎಂದರು. ಗ್ರಾಪಂ ಸಿಬ್ಬಂದಿ ಮಾನವೀಯತೆಯಿಂದ ಕೆಲಸ ನಿರ್ವಹಿಸಿ ನಾಗರಿಕರಿಗೆ ಮಾಡಿಕೊಡಬೇಕಾದ ಕೆಲಸಗಳನ್ನು ಮಾಡಿಕೊಡಿ. ಇನ್ನು ವಾಟರ್‌ಮನ್‌ಗಳು ರಾತ್ರಿಯಾದರೆ ಕ್ವಾಟರ್‌ಮನ್‌ಗಳಾಗುತ್ತಾರೆ. ಇವರಲ್ಲಿ ಕೆಲವರು ಮಾತ್ರ ಉತ್ತಮರೂ ಇದ್ದಾರೆ. ಆದರೆ ಕೆಲವರು ಸಂಬಂಧಿಕರು ಅಥವಾ ರಾಜಕಾರಣಿಗಳ ಮನೆಯಲ್ಲಿ ಕಾರ್ಯಕ್ರಮಗಳೆಂದರೆ ನೀರು ಹರಿಯುವವರೆಗೂ ಬಿಡುತ್ತಾರೆ. ಆದರೆ ಬಡವರ ಮನೆಗೆ ಒಂದೆರಡು ಬಿಂದಿಗೆ ನೀರು ಹೆಚ್ಚಿಗೆ ಬಿಡಿ ಎಂದರು ಬಿಡುವುದಿಲ್ಲ. ಇಂತಹ ತಾರತಮ್ಯ ಬಿಡಿ. ಜನರ ಸೇವೆ ಮಾಡಿ ಎಂದು ಕರೆ ನೀಡಿದರು.

ನನ್ನ ಅಧಿಕಾರಾವಧಿಯಲ್ಲಿ ಯಾವುದೇ ಅಧಿಕಾರಿಯನ್ನು ತನಿಖೆಗೆ ಒಳಪಡಿಸಿಲ್ಲ ಮತ್ತು ಅವರ ವಿರುದ್ಧ ಕ್ರಮ ಕೈಗೊಂಡಿಲ್ಲ. ಒಂದು ರೂ. ಲಂಚ ಪಡೆದಿಲ್ಲ. ತಾಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಹಸೀಲ್ದಾರ್ ಎಸ್.ಸಂತೋಷ್, ಇಓ ಹೆಚ್.ಕೆ.ಸತೀಶ್ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿದ್ದು, ಅವರಂತೆಯೇ ನೀವೂ ಪ್ರಾಮಾಣಿಕರಾಗಿರಿ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಹೇಮಂತ್ ಕುಮಾರ್, ತಾಲೂಕು ನೌಕರರ ಸಂಘದ ಅಧ್ಯಕ್ಷ ಸಿ.ಜೆ.ಅರುಣ್‌ಕುಮಾರ್, ಮಾಜಿ ಅಧ್ಯಕ್ಷ ಹೆಚ್.ಟಿ. ಮಂಜುನಾಥ್, ತಹಸೀಲ್ದಾರ್ ಸಂತೋಷ್, ಇಓ ಹೆಚ್.ಕೆ.ಸತೀಶ್, ತಾಪಂ ಆಡಳಿತಾಧಿಕಾರಿ ಅನಿತ, ಪಿಡಿಓಗಳಾದ ಭಾಸ್ಕರ್, ಉಮೇಶ್, ಚಂದ್ರಶೇಖರ್, ಪ್ರತಾಪ್, ಮುಖಂಡರಾದ ವಕೀಲ ತಿಮ್ಮಪ್ಪ, ರಮೇಶ್, ಮಹದೇವ್, ಕುಚೇಲ ಸೇರಿದಂತೆ ಇನ್ನಿತರರಿದ್ದರು.



ಸರಗೂರು ಪಟ್ಟಣದ ಶ್ರೀರಾಮ ಮಂದಿರಕ್ಕೆ ಶಾಸಕ ಅನಿಲ್ ಚಿಕ್ಕಮಾದು ಭೇಟಿ ನೀಡಿದ್ದರು. ಈ ವೇಳೆ ಸಮಾಜದ ಮುಖಂಡರಾದ ಚನ್ನಪ್ಪನಾಯಕ, ಬೆಟ್ಟನಾಯಕ, ಚಿಕ್ಕ ಯಜಮಾನ ಲಕ್ಮಣ ನಾಯಕ, ಭೈರನಾಯಕ, ಸಿ.ಬಸವರಾಜು, ಪಪಂ ಮಾಜಿ ಸದಸ್ಯರಾದ ಶ್ರೀನಿವಾಸ್, ವೀರೇಶ್, ಪರಶಿವ, ಭಗೀರಥ ಉಪ್ಪಾರ ಸಮಾಜದ ಯಜಮಾನ ಮಲ್ಲೇಶ್, ವಿಜಯ್, ಮುಖಂಡರಾದ ಪ್ರಕಾಶ್, ಕುಮಾರ್, ಗುರು, ಚನ್ನಪ್ಪ, ಮಂಜುನಾಥ್, ಅರ್ಚಕರಾದ ಹರೀಶ್ ಇನ್ನಿತರರಿದ್ದರು.



ನಂಜನಗೂಡಿನ ಶ್ರೀರಾಂಪುರ ಗೆಳೆಯರ ಬಳಗದಿಂದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ಆಯೋಜಿಸಿದ್ದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಗೆ ಶಾಸಕ ಬಿ.ಹರ್ಷವರ್ಧನ್ ಚಾಲನೆ ನೀಡಿದರು. ಈ ವೇಳೆ ತ್ರಿಲೋಚನ, ಚೇತನ್, ಸುಧಾ, ಭೀಮ್, ಪ್ರಸಾದ್, ಶಂಕರ್, ನಾಗರಾಜು, ಮಣಿ ಸೇರಿದಂತೆ ಇತರರಿದ್ದರು.

ದಮನಿತರಿಗಾಗಿ ಜೀವನ ಮುಡುಪಾಗಿಟ್ಟ ಅಂಬೇಡ್ಕರ್

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್



ನಂಜನಗೂಡು, ಏ.24– ದೇಶಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಕೊಡುಗೆ ಅಪಾರ. ಅವರು ಶೋಷಿತರು, ದಮನಿತರ ಹಿತಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟವರು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ತಿಳಿಸಿದರು.

ತಾಲೂಕಿನ ಹುಲ್ಲಹಳ್ಳಿಯಲ್ಲಿ ಭೀಮ ಬಳಗ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಒಕ್ಕೂಟಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ 131ನೇ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ದಲಿತ ವರ್ಗಕ್ಕೆ ಮಾತ್ರ ಸೀಮಿತರಲ್ಲ. ದೇಶದ ಉನ್ನತಿಗಾಗಿ ಸಮಾಜ ಸುಧಾರಕರಾಗಿ, ಶಿಕ್ಷಣತಜ್ಞರಾಗಿ, ಕಾನೂನು ಪಂಡಿತರಾಗಿ, ಪತ್ರಕರ್ತರಾಗಿ ದುಡಿದು ಭದ್ರ ಬುನಾದಿ ಹಾಕಿದವರು. ಅವರ ಪರಿಶ್ರಮದಿಂದಾಗಿ ಭಾರತ ದೇಶ ಬಲಿಷ್ಠ ಭಾರತವಾಗಲು ಸಾಧ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಸಂವಿಧಾನಕ್ಕೆ ಗಂಡಾಂತರ ಬರುವ ಸನ್ನಿವೇಶಗಳು ಘಟಿಸುತ್ತಿವೆ. ಸಂವಿಧಾನ ರಕ್ಷಣೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದ್ದು, ಎಲ್ಲರೂ ಪ್ರಜ್ಞಾವಂತರಾಗಿ ಸಂವಿಧಾನದ ರಕ್ಷಣೆಗೆ ಮುಂದಾಗಬೇಕು ಎಂದರು.

ದೇಶ ಉನ್ನತಿ ಸಾಧಿಸಲು ಶಿಕ್ಷಣ ಒಂದೇ ಪ್ರಮುಖ ಅಸ್ತ್ರ ಎಂದು ಬಾಬಾ ಸಾಹೇಬರು ಬಲವಾಗಿ ನಂಬಿದ್ದರು. ಆದ್ದರಿಂದ ಭೀಮ ಬಳಗ ಅಂಬೇಡ್ಕರ್ ಸಂಘಟನೆಗಳು ಶಿಕ್ಷಣಕ್ಕೆ ಪೂರಕವಾಗುವಂತಹ ಕಾರ್ಯಕ್ರಮ, ವಿಚಾರ ಸಂಕಿರ್ಣ, ಚರ್ಚಾ ಸ್ಪರ್ಧೆಯಂತಹ ಚಿಂತನಾಶೀಲ ಸಮಾರಂಭ ಏರ್ಪಡಿಸುವ ಮೂಲಕ ಅಂಬೇಡ್ಕರ್ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಮುಖ್ಯಭಾಷಣಕಾರರಾಗಿದ್ದ ಪತ್ರಕರ್ತ ಕೆ.ದೀಪಕ್ ಮಾತನಾಡಿದರು. ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಿಧಾನಪರಿಷತ್ ಸದಸ್ಯ ಡಾ.ಕೆ.ತಿಮ್ಮಯ್ಯ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿಂ, ಹಿಂದುಳಿತ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ದೊರೆಸ್ವಾಮಿನಾಯಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಮುಖಂಡರಾದ ನಾಗರಾಜಯ್ಯ, ಅನ್ಸರ್ ಅಹಮದ್, ಕೆಂಪಣ್ಣ, ಗ್ರಾಪಂ ಅಧ್ಯಕ್ಷ ಮಹೇಶ್, ಉಪಾಧ್ಯಕ್ಷೆ ಜ್ಯೋತಿ, ಚಂದ್ರು, ಪ್ರಸಾದ್ ಸೇರಿದಂತೆ ಸಂಘದ ಪದಾಧಿಕಾರಿಗಳು ಇದ್ದರು.

ಅಗತ್ಯ ದಾಖಲೆ ನೀಡಿ ಪಿಂಚಣಿ ಸೌಲಭ್ಯ ಪಡೆಯಿರಿ

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ



ತಿ.ನರಸೀಪುರ, ಏ.24(ಎಸ್‌ಕೆ)– ಅಗತ್ಯ ದಾಖಲೆ ನೀಡಿ ಸಕಾಲಕ್ಕೆ ಪಿಂಚಣಿ ಸೌಲಭ್ಯ ಪಡೆಯುವಂತೆ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ಕುಪ್ಯ ಗ್ರಾಮದಲ್ಲಿ ನಡೆದ ಕಂದಾಯ ಅದಾಲತ್ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಆದೇಶ ಪತ್ರ ವಿತರಿಸಿ ಮಾತನಾಡಿದ ಅವರು, ವರುಣಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಿಂಚಣಿ ಸೌಲಭ್ಯ ಸರಿಯಾಗಿ ಸಿಗುತ್ತಿಲ್ಲ. ಇದರಿಂದ ಅನೇಕರು ವಂಚಿತರಾಗಿರುವ ಬಗ್ಗೆ ದೂರುಗಳು ಕೇಳಿ ಬಂದಿದೆ. ಈ ಹಿನ್ನೆಲೆಯಲ್ಲಿ ನಾವು ಕ್ಷೇತ್ರದ ಗ್ರಾಮವೊಂದರಲ್ಲಿ ಪಿಂಚಣಿ ಅದಾಲತ್ ಮಾಡಲು ತೀರ್ಮಾನಿಸಿದ ಹಿನ್ನೆಲೆಯಲ್ಲಿ ಇಂದು ಕುಪ್ಯ ಗ್ರಾಮದಲ್ಲಿ ಕಾರ್ಯಕ್ರಮ ನಡೆಯುತ್ತಿದೆ. ಯಾರಿಗೆ ಸೌಲಭ್ಯ ಸಿಕ್ಕಿಲ್ಲ ಅಂತಹವರು ಅಗತ್ಯ ದಾಖಲೆಗಳೊಂದಿಗೆ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದರೆ ಅಧಿಕಾರಿಗಳು ಸೌಲಭ್ಯ ದೊರಕಿಸಲು ಕ್ರಮ ಕೈಗೊಳ್ಳುತ್ತಾರೆ ಎಂದರು. ಇದೇ ವೇಳೆ ವಿವಿಧ ಯೋಜನೆಯಡಿ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಪಿಂಚಣಿ ಆದೇಶ ಪತ್ರವನ್ನು ಶಾಸಕರು ವಿತರಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಗಿರಿಜಾ, ಇಓ ಕೃಷ್ಣ, ಗ್ರಾಪಂ ಅಧ್ಯಕ್ಷ ರಾಘವೇಂದ್ರ. ಎಸ್, ಸದಸ್ಯರಾದ ಭಾಗ್ಯಮ್ಮ, ಗವಿ (ಕೆಂಚ), ಗೋವಿಂದ, ಎಪಿಎಂಸಿ ಮಾಜಿ ಸದಸ್ಯ ಕೆ.ಬಿ.ಪ್ರಭಾಕರ್, ಡೈರಿ ಅಧ್ಯಕ್ಷ ಪಿ.ಶಿವರಾಂ, ನಿರ್ದೇಶಕ ಎಸ್.ಶಿವರಾಂ, ಪುಟ್ಟರಾಜು, ಶಿವಣ್ಣ, ಜಯರಾಂ ಸೇರಿದಂತೆ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಜನತಾ ಜಲಧಾರೆ ರಥಯಾತ್ರೆಗೆ ಸ್ವಾಗತ



ಮೂಗೂರು, ಏ.24– ಜೆಡಿಎಸ್ ಪಕ್ಷದಿಂದ ಹಮ್ಮಿಕೊಂಡಿರುವ ಜನತಾ ಜಲಧಾರೆ ರಥಯಾತ್ರೆಗೆ ಮೂಗೂರಿನಲ್ಲಿ ಜೆಡಿಎಸ್ ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿದರು.

ತಲಕಾಡಿನಿಂದ ಕುರುಬೂರು ಮಾರ್ಗವಾಗಿ ಆಗಮಿಸಿದ ಜಲಧಾರೆ ರಥಕ್ಕೆ ಗ್ರಾಮದ ಬಸ್ ನಿಲ್ದಾಣದ ಬಳಿ ಪಕ್ಷದ ಕಾರ್ಯಕರ್ತರು ಸ್ವಾಗತ ಕೋರಿದರು. ಅಲ್ಲದೇ ಗ್ರಾಪಂ ಮಾಜಿ ಅಧ್ಯಕ್ಷ ಜಗದೀಶ್ ಮೂರ್ತಿ ಸೇರಿದಂತೆ ನೂರಾರು ಕಾರ್ಯಕರ್ತರು ಬೈಕ್ ರಾಲಿ ಮೂಲಕ ರಥದೊಂದಿಗೆ ಸಾಗಿದರು. ಶಾಸಕ ಎಂ.ಅಶ್ವಿನ್ ಕುಮಾರ್ ಗ್ರಾಮದ ಶ್ರೀತ್ರಿಪುರ ಸುಂದರಿ ಅಮ್ಮನವರಿಗೆ ಪೂಜೆ ಸಲ್ಲಿಸಿ ಕಾರ್ಯಕರ್ತರೊಂದಿಗೆ ಜನತಾ ಜಲಧಾರೆ ರಥಯಾತ್ರೆಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಈ ಸಂದರ್ಭ ತಾಲೂಕು ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಗ್ರಾಪಂ ಉಪಾಧ್ಯಕ್ಷ ಜಿ.ಎಸ್.ಮೋಹನ್ ಕುಮಾರ್, ಮಾಜಿ ಅಧ್ಯಕ್ಷ ವೀರೇಶ್, ಶಿವಕುಮಾರ್, ಮಹದೇವ್, ಸಿದ್ದರಾಜು, ಸೋಮಣ್ಣ, ನಾಗೇಂದ್ರ, ಎಂ.ಎನ್.ರಾಜು, ಶಿವಶಂಕರ್, ಚೇತನ್, ಮಹದೇವಸ್ವಾಮಿ ಇತರರಿದ್ದರು.

ಭೂ ನ್ಯಾಯ ಮಂಡಳಿಗೆ ನೇಮಕ




ನಟರಾಜು



ಮಾದಪ್ಪ



ಶಿವಯ್ಯ



ಡಾ.ಮಲ್ಲಿಕಾರ್ಜುನ

ತಿ.ನರಸೀಪುರ, ಏ.23(ಎಸ್‌ಕೆ)– ತಾಲೂಕಿನ ಭೂ ನ್ಯಾಯ ಮಂಡಳಿ ನಾಮ ನಿರ್ದೇಶನ ಅಧಿಕಾರೇತರ ಸದಸ್ಯರಾಗಿ ಮುಗೂರು ಮಾದಪ್ಪ ತುರುಗನೂರು ಡಾ.ಮಲ್ಲಿಕಾರ್ಜುನ, ನಿವೃತ್ತ ಕೃಷಿ ಅಧಿಕಾರಿ ನಿಲಸೋಗೆ ಶಿವಯ್ಯ, ಹೆಳವರ ಹುಂಡಿ ಪಿ.ನಟರಾಜು ಅವರನ್ನು ರಾಜ್ಯ ಕಂದಾಯ ಇಲಾಖೆ ಅಧೀನ ಕಾರ್ಯದರ್ಶಿ ಕೆ.ಜಗದೀಶ್ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಸಮನ್ವಯ ಚಿಕಿತ್ಸಾ ಕೈಪಿಡಿ ಬಿಡುಗಡೆ



ತಲಕಾಡು, ಏ.24– ಕಳೆದ 15 ವರ್ಷಗಳ ಹಿಂದೆ ನಾನೇ ಶಂಕುಸ್ಥಾಪನೆ ಮಾಡಿದ್ದ ಸಮುದಾಯ ಭವನ ಕಾಮಗಾರಿ ಅರ್ಧಕ್ಕೆ ನಿಂತಿರುವುದು ತಿಳಿದು ಬಂತು. ಈ ಹಿನ್ನೆಲೆಯಲ್ಲಿ ಅಗತ್ಯ ಅನುದಾನ ನೀಡಿ ಕಾಮಗಾರಿ ಪೂರ್ಣಗೊಳಿಸಿ ಸಮುದಾಯ ಭವನವನ್ನು ನಾನೇ ಉದ್ಘಾಟಿಸುವುದಾಗಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ತಿಳಿಸಿದರು.


ತಲಕಾಡಿನ ಹಸ್ತಿಕೇರಿ ಮಠದಲ್ಲಿ ನಡೆದ ಸಮಾರಂಭದಲ್ಲಿ ಡಾ.ಶ್ರೀಸಿದ್ದಮಲ್ಲಿಕಾರ್ಜುನ ಸ್ವಾಮೀಜಿ ನೇತೃತ್ವದಲ್ಲಿ ಸಮನ್ವಯ ಚಿಕಿತ್ಸಾ ಕೈಪಿಡಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಸ್ವಾಮಿಗಳನ್ನು ಬಹಳ ಕಾಲದಿಂದ ಬಲ್ಲವರಾಗಿದ್ದು, ಇವರು ಹಾವು ಕಚ್ಚಿದ ಸಾವಿರಾರು ಜನರಿಗೆ ಚಿಕಿತ್ಸೆ ನೀಡಿ ಗುಣಪಡಿಸಿದ್ದಾರೆ ಎಂದರು.

ಕನ್ನಡ ಚಳವಳಿ ನಾಯಕ ತಾಯೂರು ವಿಠ್ಠಲಮೂರ್ತಿ ಮಾತನಾಡಿ, 500 ವರ್ಷ ಇತಿಹಾಸವುಳ್ಳ ಈ ಮಠಕ್ಕೆ ನೆರವು ನೀಡಬೇಕೆಂದು ಮನವಿ ಮಾಡಿದರು. ಸಮಾರಂಭದಲ್ಲಿ ಮಾಜಿ ಶಾಸಕ ನಂಜುಂಡಸ್ವಾಮಿ, ಬಿಜೆಪಿ ತಾಲೂಕು ಅಧ್ಯಕ್ಷ ಲೋಕೇಶ್ ನಾಯಕ, ತಹಸೀಲ್ದಾರ್ ಬಿ. ಗಿರಿಜಾ, ದೇವಸ್ಥಾನದ ಧರ್ಮದರ್ಶಿ ಅಧ್ಯಕ್ಷ ನಂಜುಂಡಸ್ವಾಮಿ, ಕುಮಾರ್ ಇದ್ದರು.



ಪಿರಿಯಾಪಟ್ಟಣ ಪುರಸಭೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಕೆ.ಮಹೇಶ್ ಅವರನ್ನು ಕಂಪಲಾಪುರದಲ್ಲಿ ಅಪ್ಪು ಅಭಿಮಾನಿ ಬಳಗದಿಂದ ಸನ್ಮಾನಿಸಲಾಯಿತು. ಈ ವೇಳೆ ಸುರೇಶ್, ಮಹೇಶ್, ನಾಗರಾಜ್, ವಿನಯ್, ಧನು, ಶಿವು, ಹಾಲಿನ ಡೇರಿ ಅಧ್ಯಕ್ಷ ಲಕ್ಷ್ಮಣ್, ಗಿರೀಶ್, ವಿಜಿ, ಚಂದ್ರು, ಪುನೀತ್ ಮತ್ತಿತರರು ಇದ್ದರು.

ಬೋನಿಗೆ ಬಿದ್ದ ಚಿರತೆ



ಮಲ್ಕುಂಡಿ, ಏ.24(ಚನ್ನಪ್ಪ)– ಎರಡು ವರ್ಷದ ಹೆಣ್ಣು ಚಿರತೆಯೊಂದು ಬೋನಿಗೆ ಬಿದ್ದಿರುವ ಘಟನೆ ಸಮೀಪದ ಚನ್ನಪಟ್ಟಣ ಗ್ರಾಮದಲ್ಲಿ ನಡೆದಿದೆ. ಗ್ರಾಮದ ತೇಜನಾಗ್ ಎಂಬುವರ ತೋಟದಲ್ಲಿ ಕೆಲವು ದಿನಗಳ ಹಿಂದೆ ಕಾಣಿಸಿಕೊಂಡಿದ್ದ ಚಿರತೆಯಿಂದ ಗ್ರಾಮಸ್ಥರು ತಮ್ಮ ಜಮೀನಿಗೆ ಹೋಗಲು ಭಯಗೊಂಡಿದ್ದರು. ಅಲ್ಲದೇ ಚಿರತೆ ಸೆರೆಗೆ ಅರಣ್ಯ ಇಲಾಖೆಗೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ 3 ದಿನಗಳ ಹಿಂದೆ ಇಟ್ಟಿದ್ದ ಅರಣ್ಯ ಇಲಾಖೆ ಬೋನಿಗೆ ಚಿರತೆ ಬಿದ್ದಿದ್ದು, ಇದರಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ. ವಿಷಯ ತಿಳಿದ ಅರಣ್ಯ ಆರ್‌ಎಫ್‌ಓ ಜನಾರ್ಧನ್, ಅರಣ್ಯ ರಕ್ಷಕ ಮಂಜುನಾಥ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಚಿರತೆಯನ್ನು ಬೈಲೂರು ಅರಣ್ಯ ವಲಯಕ್ಕೆ ಬಿಡಲಾಯಿತು.

ಕೆ.ಎಲ್.ರಾಹುಲ್ ಶತಕ: ಲಕ್ನೋಗೆ ಭರ್ಜರಿ ಜಯ

ಸತತ 8ನೇ ಸೋಲಿಗೆ ಒಳಗಾದ ರೋಹಿತ್ ಪಡೆ



ಮುಂಬೈ, ಏ.24– ನಾಯಕ ಕೆ.ಎಲ್.ರಾಹುಲ್ ಶತಕದ ನೆರವಿನಿಂದ ಲಕ್ನೋ ಸೂಪರ್ ಜೈಂಟ್ಸ್ ಮುಂಬೈ ಇಂಡಿಯನ್ಸ್ ವಿರುದ್ಧ 36 ರನ್‌ಗಳ ಗೆಲುವು ದಾಖಲಿಸಿದೆ. ಇದರೊಂದಿಗೆ ಲಕ್ನೋ ಆಡಿರುವ 8 ಪಂದ್ಯಗಳಲ್ಲಿ 5 ಗೆಲುವುಗಳೊಂದಿಗೆ 10 ಅಂಕ ಗಳಿಸಿ ಅಂಕಪಟ್ಟಿಯಲ್ಲಿ 4ನೇ ಸ್ಥಾನಕ್ಕೇರಿದೆ. ಅತ್ತ ಮುಂಬೈ ಸತತ 8ನೇ ಸೋಲಿಗೆ ಒಳಗಾಗಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 168 ರನ್ ಗಳಿಸಿತು. ತಂಡದ ಪರ ನಾಯಕನ ಆಟ ಆಡಿದ ಕೆ.ಎಲ್. ರಾಹುಲ್ 62 ಎಸೆತಗಳಲ್ಲಿ 12 ಬೌಂಡರಿ, 4ಸಿಕ್ಸರ್ ಒಳಗೊಂಡ 103 ರನ್ ಗಳಿಸಿ ಅಜೇಯರಾಗಿ ಉಳಿದರು. ಅಲ್ಲದೇ ಟೂರ್ನಿಯಲ್ಲಿ 2ನೇ ಶತಕ ದಾಖಲಿಸಿದರು. ಉಳಿದಂತೆ ಮನೀಶ್ ಪಾಂಡೆ 22, ಡಿಕಾಕ್, ದೀಪಕ್ ಹೂಡಾ ತಲಾ 10, ಆಯುಷ್ ಬಡೋನಿ 14 ರನ್ ಗಳಿಸಿದರು. ಮುಂಬೈ ಪರ ಪೋಲ್ಲಾರ್ಡ್, ರಿಲೆ ಮೆರಿಡಿತ್ ತಲಾ 2, ಡೇನಿಯಲ್ ಸ್ಯಾಮ್ಸ್, ಬುಮ್ರಾ ತಲಾ ಒಂದೊಂದು ವಿಕೆಟ್ ಪಡೆದರು.

169 ರನ್‌ಗಳ ಗುರಿ ಬೆನ್ನತ್ತಿದ ಮುಂಬೈ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 132 ರನ್ ಗಳಿಸಲಷ್ಟೇ ಶಕ್ತವಾಯಿತು. ಮುಂಬೈ ಪರ ನಾಯಕ ರೋಹಿತ್ ಶರ್ಮಾ 39, ತಿಲಕ್ ವರ್ಮಾ 38, ಕಿರಾನ್ ಪೊಲ್ಲಾರ್ಡ್ 19 ರನ್ ಗಳಿಸಿದರು. ಲಕ್ನೋ ಪರ ಕೃನಾಲ್ ಪಾಂಡ್ಯ 3, ಮೊಹಿಸೀನ್ ಖಾನ್, ಜೇಸನ್ ಹೋಲ್ಡರ್, ರವಿ ಬಿಷ್ಣೋಯಿ ಹಾಗೂ ಆಯುಷ್ ಬಡೋನಿ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಶತಕ ಸಿಡಿಸಿದ ಕೆ.ಎಲ್. ರಾಹುಲ್ ಪಂದ್ಯಶ್ರೇಷ್ಠರಾದರು.



ತಿ.ನರಸೀಪುರದ ಗೋಪಾಲಪುರದಲ್ಲಿ ಕೆಪಿಸಿಸಿ ಪರಿಶಿಷ್ಟ ವರ್ಗದ ನೂತನ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾದ ಮಾಜಿ ವಿಧಾನ ಪರಿಷತ್ ಸದಸ್ಯ ಆರ್.ಧರ್ಮಸೇನಾ ಅವರನ್ನು ವೈದ್ಯಕೀಯ ವಿಭಾಗದ ಜಿಲ್ಲಾಧ್ಯಕ್ಷ ಡಾ.ಪ್ರದೀಪ್ ಅಭಿನಂದಿಸಿದರು. ಕಾರ್ಮಿಕ ವಿಭಾಗದ ಕಾರ್ಯದರ್ಶಿ ಶ್ರೀಕಾಂತ್, ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಸಂಚಾಲಕ ಕಾಳಯ್ಯ, ಮುಖಂಡರಾದ ನಂಜುಂಡಯ್ಯ, ನಾಗರಾಜು, ಮಹದೇವಸ್ವಾಮಿ, ಶ್ರೀಕಂಠ ಇದ್ದರು.

ಬೆಟ್ಟದಪುರದಲ್ಲಿ ಜನತಾ ಜಲಧಾರೆಗೆ ಅದ್ದೂರಿ ಸ್ವಾಗತ



ಬೆಟ್ಟದಪುರ, ಏ.24(ಶಿವದೇವ್)– ಜಾತ್ಯತೀತ ಜನತಾದಳ ಹಮ್ಮಿಕೊಂಡಿರುವ ಜನತಾ ಜಲಧಾರೆ ಕಾರ್ಯಕ್ರಮ ಗ್ರಾಮದ ಶಿಡ್ಲು ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಆವರಣದಲ್ಲಿ ಕಳಶಾಭಿಷೇಕದೊಂದಿಗೆ ನೆರವೇರಿತು.

ಕಾರ್ಯಕ್ರಮಕ್ಕೂ ಮುನ್ನ ಸುರಗಹಳ್ಳಿ ಗ್ರಾಮದ ಓಂಕಾರೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ ನಂತರ ಹಾಸನ ಮೈಸೂರು ಗಡಿ ಭಾಗವಾದ ಹಲಗನಹಳ್ಳಿ ಗ್ರಾಮದಲ್ಲಿ ಬೈಕ್ ಮತ್ತು ವಾಹನಗಳ ಜಾಥಾದೊಂದಿಗೆ ಪ್ರಾರಂಭ ಮಾಡಲಾಯಿತು.

ಹಲಗನಹಳ್ಳಿ ಗ್ರಾಮದಲ್ಲಿ ಮುಸ್ಲಿಂ ಬಾಂಧವರು ಎಲ್ಲರಿಗೂ ಸ್ವಾಗತ ಕೋರಿದರು. ನಂತರ ಜಲಧಾರೆ ವಾಹನಕ್ಕೆ ಶಾಸಕ ಕೆ. ಮಹದೇವ್ ಚಾಲನೆ ನೀಡಿದರು. ದಾರಿ ಉದ್ದಕ್ಕೂ ವಿವಿಧ ಕಲಾತಂಡಗಳು ಮಹಿಳೆಯರು ಕಳಸ ಹೊತ್ತು ಸ್ವಾಗತ ಮಾಡಿದರು. ಹಾಸನ ಪಿರಿಯಾಪಟ್ಟಣ ರಾಜ್ಯ ಹೆದ್ದಾರಿಯಲ್ಲಿ ಬರುವ ಸುರಗಳ್ಳಿ ಗೊರಳ್ಳಿ ಅಲ್ಪ ನಾಯಕನಹಳ್ಳಿ ಗ್ರಾಮಸ್ಥರು ಜಲಧಾರೆ ವಾಹನಕ್ಕೆ ಪೂಜೆ ಸಲ್ಲಿಸಿ ಭವ್ಯ ಸ್ವಾಗತ ನೀಡಿದರು.

ಬೆಟ್ಟದಪುರದ ಮುಖ್ಯವೃತ್ತದಲ್ಲಿ ಎಲ್ಲಾ ವಿವಿಧ ಕಲಾತಂಡಗಳ ಪ್ರದರ್ಶನ ನಡೆಯಿತು. ಈ ಸಮಯ ಶಾಸಕ ಕೆ.ಮಹದೇವ್ ಜನರೊಂದಿಗೆ ನೃತ್ಯ ಮಾಡಿ ರಂಜಿಸಿದರು. ಬೆಟ್ಟದಪುರದ ಶಿಡ್ಲುಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಆವರಣದಲ್ಲಿ ರಥಕ್ಕೆ ಕುಂಭಾಭಿಷೇಕ ನೀಡಿ ಕಲಶಾಭಿಷೇಕ ಮಾಡಲಾಯಿತು. ಪುರೋಹಿತರಾದ ಪ್ರಭಾ ಶಂಕರ್, ಸತೀಶ್ ಕಶ್ಯಪ್ ತಂಡದವರು ಅಭಿಷೇಕಗಳನ್ನು ನೆರವೇರಿಸಿದರು.

ಬಳಿಕ ಶಾಸಕ ಕೆ.ಮಹದೇವ್ ಮಾತನಾಡಿ, ರಾಜ್ಯದ ಎಲ್ಲಾ ನದಿಗಳ ಮೂಲ ಬಳಸಿಕೊಂಡು ಉತ್ತಮ ನೀರಾವರಿ ಸೌಲಭ್ಯ ಒದಗಿಸಬೇಕೆಂಬ ಉದ್ದೇಶದಿಂದ ಜಾತ್ಯತೀತ ಜನತಾದಳ ಜನತಾ ಜಲಧಾರೆ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದರ ಸದುಪಯೋಗಕ್ಕೆ ಮುಂದೆ ಜೆಡಿಎಸ್ ಸರ್ಕಾರವನ್ನು ತಂದರೆ ಕರ್ನಾಟಕದಲ್ಲಿ ಸಮೃದ್ಧ ನೀರಾವರಿ ಯೋಜನೆಯನ್ನು ಸಮಗ್ರ ಕೃಷಿ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದರು.

ಸಭೆಯಲ್ಲಿ ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ ಮಾತನಾಡಿದರು. ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಜಿಪಂ ಮಾಜಿ ಸದಸ್ಯ ಕೆ.ಎಸ್.ಮಂಜುನಾಥ್, ಜೆಡಿಎಸ್ ಮುಖಂಡರಾದ ಗಗನ್, ರವಿ, ವಿದ್ಯಾ ಶಂಕರ್, ಶಂಕರೇಗೌಡ, ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಪ್ರೀತಿ ಅರಸ್, ತಾಪಂ ಮಾಜಿ ಅಧ್ಯಕ್ಷ ಅತ್ತರ್ ಮತೀನ್, ನೂತನ ಪುರಸಭಾಧ್ಯಕ್ಷ ಕೆ.ಮಹೇಶ್, ಗ್ರಾಪಂ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷೆ ಸೌಮ್ಯ, ಸದಸ್ಯರಾದ ರಾಜಶೇಖರ್, ಗಿರಿಗೌಡ, ಇಮ್ರಾನ್ ಪಾಷಾ, ಗ್ರಾಪಂ ಅಧ್ಯಕ್ಷ ಚಂದ್ರೇಗೌಡ, ಕಣಗಾಲು ಗ್ರಾಪಂ ಮಾಜಿ ಅಧ್ಯಕ್ಷ ಮಹದೇವ್, ಹನುಮಂತು ತಾಪಂ ಮಾಜಿ ಸದಸ್ಯ ಮಲ್ಲಿಕಾರ್ಜುನ್, ಬೆಟ್ಟದತುಂಗ ಗ್ರಾಪಂ ಅಧ್ಯಕ್ಷ ದೇವರಾಜ್, ಪ್ರಭು, ರಾಮೇಗೌಡ, ಪಿರಿಯಾಪಟ್ಟಣ ಪುರಸಭೆ ಸದಸ್ಯರು, ಗ್ರಾಪಂ ಅಧ್ಯಕ್ಷರು, ಸದಸ್ಯರು, ಜೆಡಿಎಸ್ ಪಕ್ಷದ ಚುನಾಯಿತ ಪ್ರತಿನಿಧಿಗಳು ಹಾಜರಿದ್ದರು.

ಶಾಸಕ ಎನ್.ಮಹೇಶ್ ಬೆಂಬಲಿಗರು ಬಿಜೆಪಿಗೆ ಸೇರ್ಪಡೆ

ರಾಜಕೀಯವಾಗಿ ಮುಗಿಸಲು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಪಿತೂರಿ ನಡೆಸಿದ್ದರು: ಕೊಳ್ಳೇಗಾಲ ಶಾಸಕ ಎನ್.ಮಹೇಶ್

ಮೈಸೂರು, ಏ.24(ಆರ್‌ಕೆಬಿ)– ಡಾ. ಬಿ.ಆರ್.ಅಂಬೇಡ್ಕರ್ ಅವರು ಬದುಕಿದ್ದಾಗ ಅವರಿಗೆ ಗೌರವ ನೀಡದ ಕಾಂಗ್ರೆಸ್, ಅವರು ನಿಧನರಾದ ಬಳಿಕವೂ ಅವರನ್ನು ಅಪಮಾನಿಸಿದ ಕಾಂಗ್ರೆಸ್ ಪಕ್ಷವನ್ನು ಮೊದಲಿನಿಂದಲೂ ವಿರೋಧಿಸುತ್ತ ಬಂದಿರುವ ನಾನು ಡಾ.ಅಂಬೇಡ್ಕರ್ ಅವರಿಗೆ ಗೌರವ ನೀಡುವ ಬಿಜೆಪಿಯತ್ತ ಆಕರ್ಷಿತನಾಗಿ, ಪಕ್ಷ ಸೇರ್ಪಡೆಗೊಂಡಿದ್ದಾಗಿ ಕೊಳ್ಳೇಗಾಲ ಶಾಸಕ ಎನ್.ಮಹೇಶ್ ತಿಳಿಸಿದರು.

ಮೈಸೂರಿನ ಚನ್ನಮ್ಮ ಚನ್ನಬಸಪ್ಪ ಕಲ್ಯಾಣ ಮಂಟಪದಲ್ಲಿ ಭಾನುವಾರ ತಮ್ಮ ಅಭಿಮಾನಿಗಳು ಮತ್ತು ಬೆಂಬಲಿಗರ ಬಿಜೆಪಿ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನಾನು ಬಿಎಸ್‌ಪಿಯಲ್ಲಿ ನಿಷ್ಠೆಯಿಂದ ಕಾರ್ಯನಿರ್ವಹಿಸಿದರೂ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ನನ್ನನ್ನು ರಾಜಕೀಯವಾಗಿ ಮುಗಿಸಲು ಪಿತೂರಿ ನಡೆಸಿದ್ದರು. ಇದೇ ವೇಳೆ ಮಾಯಾವತಿಯವರು ನನ್ನನ್ನು ಪಕ್ಷದಿಂದ ಉಚ್ಚಾಟನೆ ಮಾಡಿದರು. ನಂತರ ನಾನು ಸಾಕಷ್ಟು ಚಿಂತನೆ ನಡೆಸಿ, ಅಂಬೇಡ್ಕರ್ ಅವರಿಗೆ ನೀಡಿದ ಗೌರವವನ್ನು ಪರಿಗಣಿಸಿ ಬಿಜೆಪಿಯತ್ತ ಒಲವು ತೋರಿದ್ದಾಗಿ ಸ್ಪಷ್ಟಪಡಿಸಿದರು.



ಬಿಜೆಪಿ ಸೇರಿದ ಬಳಿಕ ಹಲವು ತಿಂಗಳಿಂದ ಬೆಂಬಲಿಗರು, ಅಭಿಮಾನಿಗಳು ತಾವೆಲ್ಲಿ ಹೋಗಬೇಕೆಂದು ಗೊಂದಲದಲ್ಲಿದ್ದರು. ಎಲ್ಲರೂ ಬಿಎಸ್‌ಪಿಯನ್ನು ಕಟ್ಟಿ ಬೆಳೆಸಿದವರು. ಮೂರು ಬಾರಿ ಸೋತು 4ನೇ ಬಾರಿ ನಾನು ಕಷ್ಟಪಟ್ಟು ಗೆಲವು ಸಾಧಿಸಿದ್ದೇನೆ. ನನ್ನ ಗೆಲುವಿನ ಬಳಿಕ ಬಿಎಸ್‌ಪಿ ಪಕ್ಷವನ್ನು ರಾಜ್ಯಮಟ್ಟದಲ್ಲಿ ಬೆಳೆಸಲು ಯೋಜನೆ ರೂಪಿಸುತ್ತಿದ್ದಾಗಲೇ ಒಂದು ವರ್ಷದಲ್ಲಿ ಉಂಟಾದ ಏರುಪೇರಿನಿಂದಾಗಿ ನನ್ನನ್ನು ವಿನಾಕಾರಣ ಪಕ್ಷದಿಂದ ಉಚ್ಚಾಟನೆ ಮಾಡಲಾಯಿತು ಎಂದು ಬೇಸರ ವ್ಯಕ್ತಪಡಿಸಿದರು.

> ❝ ಬಿಜೆಪಿಯಲ್ಲಿ ಸಾಮರ್ಥ್ಯ ಇರುವವರು ಬೆಳೆಯುತ್ತಾರೆ. ಮುಂದಿನ ದಿನಗಳಲ್ಲಿ ಮೈಸೂರು ಭಾಗದಲ್ಲಿ ಪಕ್ಷವನ್ನು ಕಟ್ಟಿ ಬೆಳೆಸುವ ಸಂಕಲ್ಪ ಮಾಡಿದ್ದೇನೆ.
> –ಎನ್.ಮಹೇಶ್, ಶಾಸಕ

ನಾನು ರಾಜಕಾರಣದಲ್ಲಿ ಪ್ರಸ್ತುತವಾಗಿರಬೇಕು ಎಂದು ತೀರ್ಮಾನಕ್ಕೆ ಬಂದೆ. ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಬಗ್ಗೆಯೂ ನಿರ್ಧರಿಸಿದ್ದೆ. ಹಾಗಾಗಿ 2 ವರ್ಷ ಸುಮ್ಮನಿದ್ದು, ಬಳಿಕ ಬಿಜೆಪಿಗೆ ಸೇರ್ಪಡೆಗೊಂಡಿದ್ದಾಗಿ ತಿಳಿಸಿದರು.

ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ವಿಶ್ವಾಸ ಮತ ಯಾಚನೆ ಸಂದರ್ಭದಲ್ಲಿ ಮಾಯಾವತಿಯವರೇ ಕುಮಾರಸ್ವಾಮಿಯವರಿಗೆ ಮತದಾನ ಮಾಡಲು ತಿಳಿಸಿದ್ದರು.

ಕಾಂಗ್ರೆಸ್–ಜೆಡಿಎಸ್ ಬಲ 99, ಬಿಜೆಪಿ 105 ಮತಗಳಿತ್ತು. ನನ್ನ ಒಂದು ಮತದಿಂದ ಎಚ್.ಡಿ.ಕುಮಾರಸ್ವಾಮಿ ಸರ್ಕಾರ ಉಳಿದರೆ ಮತ ಚಲಾಯಿಸುವ ಮಾತನ್ನು ತಿಳಿಸಿದ್ದೆ. ಕುಮಾರಸ್ವಾಮಿ ಸರ್ಕಾರ ಸೋತರೆ ನಾನು ಸೋಲಬೇಕು ಎಂದು ದೂರ ಉಳಿದಿದ್ದಾಗಿ ಸಮರ್ಥಿಸಿಕೊಂಡರು.

75 ಸಾವಿರ ಮತಗಳಿಂದ ನನ್ನನ್ನು ಆಯ್ಕೆ ಮಾಡಿದ ಕೊಳ್ಳೇಗಾಲ ಕ್ಷೇತ್ರದ ಮತದಾರರ ಹಿತದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು, ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ವಿಶ್ವಾಸ ಮತ ಸಂದರ್ಭದಲ್ಲಿ ಮತ ಹಾಕಲಿಲ್ಲ. 20 ವರ್ಷಗಳ ನಂತರ ಮೊಟ್ಟ ಮೊದಲ ಬಾರಿಗೆ ಮಾಯಾವತಿ ಅವರ ಆದೇಶ ಉಲ್ಲಂಘಿಸಿದ್ದಕ್ಕೆ ಕಾರಣ ಕೇಳಿ ನೋಟಿಸ್ ಕೊಡದೆ ಏಕಾಏಕಿ ಪಕ್ಷದಿಂದ ಉಚ್ಚಾಟನೆ ಮಾಡಿದರು ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಭೀಮನಹಳ್ಳಿ ಸೋಮೇಶ್, ಪ್ರಭುಸ್ವಾಮಿ, ರಾಜೂಗೌಡ, ಗಣೇಶ್ ಮೂರ್ತಿ, ಲೋಕೇಶ್ ಮೌರ್ಯ, ಶಿವಣ್ಣ, ಸಿದ್ದರಾಜು, ರಾಹುಲ್, ಪಾಲಾಕ್ಷ, ಮಹೇಶ್, ಶ್ರೀನಿವಾಸ್, ಮಹದೇವ, ಡಾ.ಜಗದೀಶ್ ನಾಯಕ ಇನ್ನಿತರರು ಬಿಜೆಪಿಗೆ ಸೇರ್ಪಡೆಯಾದರು.

ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ, ಪ್ರಧಾನ ಕಾರ್ಯದರ್ಶಿ ಎಚ್.ಜಿ.ಗಿರಿಧರ್, ವಿಭಾಗೀಯ ಪ್ರಧಾನ ಕಾರ್ಯದರ್ಶಿ ಮೈ.ವಿ.ರವಿಶಂಕರ್, ಎಸ್‌ಸಿ ಮೋರ್ಚಾದ ಜಯರಾಂ ಇನ್ನಿತರರು ಉಪಸ್ಥಿತರಿದ್ದರು.

ಬಿಜೆಪಿ ಹೊರತುಪಡಿಸಿ ಉಳಿದೆಲ್ಲಾ ಪಕ್ಷಗಳು ಒಗ್ಗೂಡುವ ಸಂದರ್ಭವಿದು

ಜನತಾ ಪಾರ್ಟಿ ರಾಜ್ಯಾಧ್ಯಕ್ಷೆ ಡಾ.ಬಿ.ಟಿ.ಲಲಿತಾ ನಾಯಕ್ ಅಭಿಮತ

ಮೈಸೂರು,ಏ.24(ಪಿಎಂ)–ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ಆಡಳಿತದಲ್ಲಿ ಕೋಮುವಾದ, ಖಾಸಗೀಕರಣ, ಬೆಲೆ ಏರಿಕೆ, ಭ್ರಷ್ಟಾಚಾರ ಮೇರೆ ಮೀರಿದ್ದು, ಇಂತಹ ಸಂದರ್ಭದಲ್ಲಿ ಬಿಜೆಪಿ ಹೊರತುಪಡಿಸಿ, ಉಳಿದೆಲ್ಲಾ ಪಕ್ಷಗಳೂ ಒಗ್ಗೂಡಬೇಕಿದೆ ಎಂದು ಜನತಾ ಪಾರ್ಟಿ ರಾಜ್ಯಾಧ್ಯಕ್ಷೆ ಡಾ. ಬಿ.ಟಿ.ಲಲಿತಾ ನಾಯಕ್ ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದು ಬಡ, ಮಧ್ಯಮ ವರ್ಗದವರ ಸಂಕಷ್ಟ ಪರಿಹರಿಸುವ ಬಗ್ಗೆ ಸರ್ಕಾರ ಆದ್ಯತೆ ನೀಡುತ್ತಿಲ್ಲ. ಬದಲಿಗೆ ಧಾರ್ಮಿಕ ವಿಚಾರಗಳನ್ನು ನಾಚಿಕೆ ಇಲ್ಲದೇ ಮುನ್ನೆಲೆಗೆ ತರುತ್ತಿದೆ ಎಂದು ಆರೋಪಿಸಿದರು.

ಹಿಂದಿನವರು ರಾಷ್ಟ್ರೀಕರಣದ ಮೂಲಕ ದೇಶ ಕಟ್ಟಿದರೆ, ಇವರೀಗ ಖಾಸಗೀಕರಣ ಮಾಡುತ್ತಿದ್ದಾರೆ. ಇದರಿಂದ ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತಿದ್ದರೆ, ಬಡವರು ಮತ್ತಷ್ಟು ಬಡವರಾಗಿ ತುಳಿತಕ್ಕೆ ಒಳಗಾಗುತ್ತಿದ್ದಾರೆ. ಮಿತಿಮೀರಿದ ಬೆಲೆ ಏರಿಕೆಯಿಂದ ಸಾಮಾನ್ಯ ಜನತೆ ತತ್ತರಿಸುವಂತಾಗಿದೆ. ಮದ್ಯಮುಕ್ತ ಭಾರತದ ಕನಸು ಈಡೇರಿಲ್ಲ. ಶೇ.40ರಷ್ಟು ಕಮಿಷನ್‌ನಿಂದ ಕಾಮಗಾರಿಗಳು ಗುಣಮಟ್ಟದಿಂದ ನಡೆಯುತ್ತಿಲ್ಲ. ಅನೈತಿಕತೆಯೇ ರಾಜಕಾರಣದಲ್ಲಿ ವಿಜೃಂಭಿಸುತ್ತಿದೆ ಎಂದು ಹೇಳಿದರು.



ಭ್ರಷ್ಟಾಚಾರ ಹಾಗೂ ಜಾತೀಯತೆ ಮಾಡದ, ಖಾಸಗೀಕರಣ ವಿರೋಧಿಸುವವರು ನಮ್ಮ ಪಕ್ಷಕ್ಕೆ ಬರಲಿ. ಆಮಿಷಗಳಿಗೆ ಒಳಗಾಗಿ ಮತ ಹಾಕುವುದನ್ನು ಬಿಡಬೇಕು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಪಕ್ಷ ಸ್ಪರ್ಧಿಸಲಿದೆ ಎಂದರು.

ಪಕ್ಷದ ಮೈಸೂರು ಜಿಲ್ಲಾಧ್ಯಕ್ಷ ರಾಮಕೃಷ್ಣ ಮಾತನಾಡಿ, ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪ ಹೊತ್ತಿರುವ ಈಶ್ವರಪ್ಪ ಅವರನ್ನು ಇನ್ನೂ ಬಂಧಿಸಿಲ್ಲ. ತನಿಖೆ ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿಲ್ಲ ಎನ್ನುವುದಕ್ಕೆ ಇದೇ ಸಾಕ್ಷಿ ಎಂದರು. ಮುಖಂಡರಾದ ನಾಗೇಶ್, ರಫೀಕ್, ಹೊನ್ನೇಗೌಡ, ಅಬ್ದುಲ್, ಅಶೋಕ, ಮಹದೇವ ಸ್ವಾಮಿ, ಶೋಭಾ ಗೋಷ್ಠಿಯಲ್ಲಿದ್ದರು.

ರಾಜ್ಯದಲ್ಲಿ ಕೋವಿಡ್ 4ನೇ ಅಲೆ ಆರಂಭ

ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಎಚ್ಚರಿಕೆ

● ನಾಲ್ಕೈದು ವಾರದಲ್ಲಿ ಪ್ರಕರಣ ಹೆಚ್ಚಳ ● ಸಾವಿನ ಸಂಖ್ಯೆ ಕಡಿಮೆ, ಮಾಸ್ಕ್ ಅತ್ಯಗತ್ಯ

ಬೆಂಗಳೂರು, ಏ.24– ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಕೋವಿಡ್ 4ನೇ ಅಲೆ ಆರಂಭವಾಗಿದ್ದು, ಮುಂದಿನ 4–5 ವಾರಗಳಲ್ಲಿ ಕೋವಿಡ್ ಪ್ರಕರಣ ಹೆಚ್ಚಾಗಲಿವೆ ಎಂದು ಕೋವಿಡ್ ಟಾಸ್ಕ್‌ಫೋರ್ಸ್ ಸಮಿತಿ ಸದಸ್ಯ ಹಾಗೂ ಜಯದೇವ ಆಸ್ಪತ್ರೆ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್ ಎಚ್ಚರಿಕೆ ನೀಡಿದ್ದಾರೆ.



ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಭಾರತಕ್ಕೆ ಈಗಾಗಲೇ ಕೊರೊನಾ 4ನೇ ಅಲೆ ಬಂದಿದ್ದು, ದೆಹಲಿ, ಮಹಾರಾಷ್ಟ್ರ, ಹರಿಯಾಣ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ನಮ್ಮ ರಾಜ್ಯಕ್ಕೂ ಕೋವಿಡ್ 4ನೇ ಅಲೆ ಕಾಲಿಟ್ಟಿದೆ. ಮುಂದಿನ 4–5 ವಾರಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗಲಿದೆ ಎಂದು ಎಚ್ಚರಿಸಿದ್ದಾರೆ.

ಕೋವಿಡ್ 2, 3ನೇ ಅಲೆಯಲ್ಲಿ ಯಾವ ರೀತಿ ಕೊರೊನಾ ರೋಗಲಕ್ಷಣಗಳಿರುತ್ತೋ 4ನೇ ಅಲೆಯಲ್ಲೂ ಅದೇ ರೀತಿ ಇರಲಿದೆ. ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಹಾಗೂ ಸಾವಿನ ಸಂಖ್ಯೆ ಕಡಿಮೆಯಿರಲಿದೆ. ಆದರೆ ಶ್ವಾಸಕೋಶ, ಹೃದಯ ಸಂಬಂಧಿ ಕಾಯಿಲೆ ಪೀಡಿತರು, ಕ್ಯಾನ್ಸರ್ ರೋಗಿಗಳು, ನಿಶ್ಯಕ್ತಿಯುಳ್ಳವರು, ಡಯಾಲಿಸಿಸ್ ಚಿಕಿತ್ಸೆಗೆ ಒಳಗಾದವರು, ಅಸ್ತಮಾ ರೋಗಿಗಳು ಹಾಗೂ ಇತರೆ ಕಾಯಿಲೆ ಇರುವವರು ಎಚ್ಚರವಾಗಿರಬೇಕು ಎಂದು ಸಲಹೆ ನೀಡಿದ್ದಾರೆ.

ಕೊರೊನಾ ರೂಪಾಂತರವಾಗೋದು ಅದರ ಸಹಜ ಗುಣ, ಸ್ವಭಾವ ಕೂಡ. ಈಗ ಪತ್ತೆಯಾಗಿರುವ ಃA2.10, BA2.12 ಹೊಸ ತಳಿಯೇನಲ್ಲ. ಇದು ಮೊದಲಿನಿಂದಲೂ ಕಾಲಕಾಲಕ್ಕೆ ಬದಲಾಗುತ್ತಿದೆ. ಕಳೆದೊಂದು ವಾರದಿಂದ ರಾಜ್ಯದಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. 40–50ರ ಆಸುಪಾಸಿನಲ್ಲಿದ್ದ ಪ್ರಕರಣಗಳು 100ರ ಗಡಿ ದಾಟುತ್ತಿವೆ. ರಾಜ್ಯಕ್ಕೆ ಈಗಾಗಲೇ BA2.10, BA2.12 ವೈರಸ್ ಕಾಲಿಟ್ಟಿರುವ ಸಾಧ್ಯತೆಗಳಿವೆ. ಈ ಉಪತಳಿಗಳ ಗುಣಲಕ್ಷಣಗಳನ್ನು ತಿಳಿಯಲು ಅಧ್ಯಯನಗಳು ನಡೆಯುತ್ತಿವೆ ಎಂದು ವಿವರಿಸಿದ್ದಾರೆ.

ಕೋವಿಡ್ 4ನೇ ಅಲೆ ತಡೆಗೆ ಮಾಸ್ಕ್ ಅತ್ಯಗತ್ಯ, ಎಲ್ಲರೂ ತಪ್ಪದೇ ಮಾಸ್ಕ್ ಧರಿಸಬೇಕು. ಲಸಿಕೆ ಪೂರ್ಣವಾಗಿದೆ ಎಂದು ನಿರ್ಲಕ್ಷ್ಯ ಮನೋಭಾವ ತೋರಬಾರದು. ಜ್ವರ, ಕೆಮ್ಮು, ನೆಗಡಿಯಾದರೆ ನಿರ್ಲಕ್ಷ್ಯ ಮಾಡದೇ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು. ಏಕೆಂದರೆ ಮುಂದಿನ ವಾರಗಳಲ್ಲಿ 4ನೇ ಅಲೆ ಇರಲಿದ್ದು, ನಂತರ ಸಹಜವಾಗಿ ಕ್ಷೀಣಿಸುತ್ತದೆ ಎಂದು ಹೇಳಿದ್ದಾರೆ.

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ನನ್ನ ಹೆಸರು ಬೇಡ

ಸಿಎಂ ಬೊಮ್ಮಾಯಿ ಅವರಿಗೆ ಬಿ.ಎಸ್.ಯಡಿಯೂರಪ್ಪ ಪತ್ರ

ಶಿವಮೊಗ್ಗ: ಇಲ್ಲಿನ ಸೋಗಾನೆಯಲ್ಲಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣಕ್ಕೆ ತಮ್ಮ ಹೆಸರಿಡುವುದು ಬೇಡ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.



ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಮಾಜಿ ಸಿಎಂ ಯಡಿಯೂರಪ್ಪ ಅವರ ಹೆಸರಿಡಲು ಸರ್ಕಾರ ನಿರ್ಧರಿಸಿದೆ. ಆದರೆ, ತವರು ಜಿಲ್ಲೆಯ ವಿಮಾನ ನಿಲ್ದಾಣಕ್ಕೆ ತಮ್ಮ ಹೆಸರು ಇಡುವುದನ್ನು ಯಡಿಯೂರಪ್ಪ ತಿರಸ್ಕರಿಸಿದ್ದಾರೆ. ಈ ಕುರಿತು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಭಾನುವಾರ ಪತ್ರ ಬರೆದಿರುವ ಅವರು, ಶಿವಮೊಗ್ಗ ಜಿಲ್ಲೆಯಲ್ಲಿ ಬಹುದಿನಗಳ ಕನಸಾದ ವಿಮಾನ ನಿಲ್ದಾಣವು ಈಗ ನನಸಾಗುತ್ತಿರುವುದಕ್ಕೆ ಬೊಮ್ಮಾಯಿ ಅವರಿಗೆ ಧನ್ಯವಾದ ಅರ್ಪಿಸಿದ್ದು, ಹೊಸ ವಿಮಾನ ನಿಲ್ದಾಣಕ್ಕೆ ತಮ್ಮ ಹೆಸರು ಇಡುವ ಬಗ್ಗೆ ಘೋಷಿಸಿರುವುದನ್ನು ಪ್ರಸ್ತಾಪಿಸಿದ್ದಾರೆ. ರಾಷ್ಟ್ರದ ಅಭಿವೃದ್ಧಿಗೆ ಸೇವೆ ಸಲ್ಲಿಸಿದ ಅನೇಕ ಮಹನೀಯರು ಹಾಗೂ ದೇಶ ಭಕ್ತರಿದ್ದಾರೆ.

ಅವರ ಕೊಡುಗೆಗಳ ಮುಂದೆ ನನ್ನದೊಂದು ಅಳಿಲು ಸೇವೆ ಮಾತ್ರ. ಈ ಹಿನ್ನೆಲೆಯಲ್ಲಿ ನೂತನ ವಿಮಾನ ನಿಲ್ದಾಣಕ್ಕೆ ನನ್ನ ಹೆಸರು ಸೂಕ್ತವಲ್ಲವೆಂದು ಭಾವಿಸುತ್ತೇನೆ. ರಾಷ್ಟ್ರ, ನಾಡಿನ ಅಭಿವೃದ್ಧಿಗೆ ಹಾಗೂ ಇತಿಹಾಸಕ್ಕೆ ಕೊಡುಗೆ ನೀಡಿರುವ ಮಹನೀಯರ ಹೆಸರನ್ನು ವಿಮಾನ ನಿಲ್ದಾಣಕ್ಕೆ ನಾಮಕರಣ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ದೇವರಾಜ ಮಾರುಕಟ್ಟೆ ನೆಲಸಮ ವಿರೋಧಿಸಿ ವಾಟಾಳ್ ನಾಗರಾಜ್ ಪ್ರತಿಭಟನೆ

ಮೈಸೂರು, ಏ.24(ಪಿಎಂ)– ಮೈಸೂರಿನ ದೇವರಾಜ ಮಾರುಕಟ್ಟೆ ನೆಲಸಮ ಮಾಡಬಾರದು ಎಂದು ಒತ್ತಾಯಿಸಿ ಕನ್ನಡಪರ ಹೋರಾಟಗಾರ ಮತ್ತು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಭಾನುವಾರ ಪ್ರತಿಭಟನೆ ನಡೆಸಿದರು. ಮೈಸೂರಿನ ಜಯಚಾಮರಾಜ ಒಡೆಯರ್ ವೃತ್ತದಲ್ಲಿ ಬೆಂಬಲಿಗರೊಂದಿಗೆ ಪ್ರತಿಭಟನೆ ನಡೆಸಿ, ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ದೇವರಾಜ ಮಾರುಕಟ್ಟೆಯನ್ನು ನೆಲಸಮ ಮಾಡಬಾರದು. ನೆಲಸಮಕ್ಕೆ ಮುಂದಾದರೆ ವಾಟಾಳ್ ಪಕ್ಷದಿಂದ ತೀವ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪಾರಂಪರಿಕ ಕಟ್ಟಡಗಳನ್ನು ಒಡೆಯುವುದು ಸರಿಯಲ್ಲ. ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಿ, ದೇಶದ ಬೇರೆ ಬೇರೆ ಕಡೆಯಿಂದ ಉನ್ನತ ಪರಿಣಿತರನ್ನು ಕರೆಯಿಸಿ, ದೇವರಾಜ ಮಾರುಕಟ್ಟೆ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಕ್ರಮಗೊಳ್ಳಬೇಕು. ದುರಸ್ತಿಗೊಳಿಸಿ, ಇನ್ನೂ ನೂರಾರು ವರ್ಷ ಇರುವಂತೆ ಮಾಡಬೇಕು. ದೇವರಾಜ ಮಾರುಕಟ್ಟೆ ಒಡೆದು ಇತಿಹಾಸಕ್ಕೆ ಅಪಚಾರ ಮಾಡಬಾರದು. ಲಲಿತ ಮಹತ್ ಅರಮನೆಯನ್ನೂ ಹೋಟೆಲ್ ಮಾಡಬಾರದಿತ್ತು. ಚಾಮುಂಡಿಬೆಟ್ಟದ ಮೇಲಿನ ರಾಜೇಂದ್ರ ವಿಲಾಸ ಅರಮನೆಯನ್ನೂ ಹೋಟೆಲ್ ಮಾಡಬಾರದು ಎಂದು ಒತ್ತಾಯಿಸಿದರು. ಕರ್ನಾಟಕದಲ್ಲೂ ಬುಲ್ಡೋಜರ್ ಸಂಸ್ಕೃತಿ ತರಬೇಕೆಂದು ಕೆಲ ಸಂಘಟನೆಗಳು ಹವಣಿಸುತ್ತಿವೆ. ಮುಖ್ಯಮಂತ್ರಿಗಳು ಯಾವುದೇ ಕಾರಣಕ್ಕೂ ಇದಕ್ಕೆ ಅವಕಾಶ ನೀಡಬಾರದು. ರಾಜ್ಯಸಭೆಗೆ ಯಾವಾಗಲೂ ಕರ್ನಾಟಕದಿಂದ ಕನ್ನಡಿಗರು ಸದಸ್ಯರಾಗಿ ಹೋಗಬೇಕು. ಆದರೆ ಮಲಯಾಳಿ, ತಮಿಳು, ತೆಲುಗು ಭಾಷಿಗರಿಗೆ ಅವಕಾಶ ನೀಡಲಾಗುತ್ತಿದೆ. ಕನ್ನಡಿಗರಿಗೆ ಸಿಗಬೇಕಾದ ಅವಕಾಶ ಇತರರಿಗೆ ಸಿಗುತ್ತಿರುವುದು ಸರಿಯಲ್ಲ ಎಂದು ಕಿಡಿಕಾರಿದರು. ಬೆಂಬಲಿಗರಾದ ಮೂಗೂರು ನಂಜುಂಡಸ್ವಾಮಿ, ತಾಯೂರು ವಿಠ್ಠಲಮೂರ್ತಿ, ಪಾರ್ಥಸಾರಥಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಡಿಜಿಟಲ್ ಗ್ರಂಥಾಲಯ ಕುರಿತು ಪ್ರಬಂಧ ರಚನಾ ಸ್ಪರ್ಧೆ

ಮೈಸೂರು, ಏ.24– ಬೆಂಗಳೂರಿನ ಭಾರತರತ್ನ ಸರ್. ಎಂ.ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನದ 30ನೇ ವಾರ್ಷಿಕೋತ್ಸವದ ಅಂಗವಾಗಿ ಕರ್ನಾಟಕ ಗ್ರಂಥಾಲಯ ಇಲಾಖೆಯ ಡಿಜಿಟಲ್ ಗ್ರಂಥಾಲಯ ಸೇವೆಯಿಂದ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗುವವರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ.

ಡಿಜಿಟಲ್ ಗ್ರಂಥಾಲಯದಿಂದ ಪ್ರಯೋಜನ ಪಡೆದ 18 ವರ್ಷ ಮೇಲ್ಪಟ್ಟವರು ತಮ್ಮ ಅನುಭವ ವನ್ನು 4 ಪುಟಗಳಲ್ಲಿ ಪ್ರಬಂಧ ಬರೆಯುವುದರೊಂದಿಗೆ ವಿಳಾಸ, ಫೋಟೋ, ದೂರವಾಣಿ ಸಂಖ್ಯೆ ಹಾಗೂ ಸಂಪೂರ್ಣ ವಿಳಾಸದೊಂದಿಗೆ ಮೇ 1ರೊಳಗೆ ರಮೇಶ ಸುರ್ವೆ, ಅಧ್ಯಕ್ಷರು ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ, ನಂ.468/ಸುರ್ವೆ, 13ನೇ ಮುಖ್ಯರಸ್ತೆ, 3ನೇ ಹಂತ, ಮೋದಿ ಸರ್ಕಲ್ – ತಿಮ್ಮಯ್ಯ ರಸ್ತೆ, ಮಂಜುನಾಥ ನಗರ, ಬೆಂಗಳೂರು –560010. ಮೊ.98 453307327ಗೆ ಕಳುಹಿಸಬೇಕು. ಆಯ್ಕೆಯಾದ 10 ಲೇಖನಗಳಿಗೆ 1ಸಾವಿರ ರೂ. ಮೌಲ್ಯದ ಮೌಲ್ಯಾಧಾರಿತ ಗ್ರಂಥ ಬಹುಮಾನ ನೀಡಲಾಗುತ್ತದೆ ಎಂದು ಪ್ರತಿಷ್ಠಾನದ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರ ಪರವಾಗಿ ಮೈಸೂರು ಬಿಜೆಪಿ ವತಿಯಿಂದ ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಮುಂಭಾಗ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೌಲ್ಯಮಾಪನಕ್ಕೆ ಆಗಮಿಸಿರುವ ಪದವೀಧರರ ಬಳಿ ಮತ ಯಾಚಿಸಲಾಯಿತು. ಚಿತ್ರದಲ್ಲಿ ನಗರ ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ನಗರ ಪ್ರಧಾನ ಕಾರ್ಯದರ್ಶಿಗಳಾದ ಗಿರಿಧರ್, ಸೋಮಸುಂದರ್, ಆರ್.ಪರಮೇಶ, ಜೋಗಿ ಮಂಜು, ಚರಣ್, ಲಕ್ಷ್ಮಿ, ಶಿವರಾಜ್, ಸಚಿನ್, ಸೂರಜ್ ಇನ್ನಿತರರಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ಸಿಟಿ–570001, ಲಷ್ಕರ್ ಮೊಹಲ್ಲಾ, ಕುರುಬಗೇರಿ, 2ನೇ ಕ್ರಾಸ್, ಮನೆ ನಂ.1211 ರಲ್ಲಿ ವಾಸವಾಗಿರುವ ಲೇಟ್ ಪಿ. ಸಿದ್ದರಾಮಯ್ಯರವರ ಮಗನಾದ ಶ್ರೀ ಎಸ್.ಹೇಮಚಂದ್ರ [Aadhaar No:7614 6314 2022] ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಳಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಅಶೋಕ ರಸ್ತೆ 2ನೇ ವೆಸ್ಟ್ ಕ್ರಾಸ್, ಕುರುಬಗೇರಿ, ಮನೆ ನಂ.1211 ಹೊಸ ನಂ .L-47. PID No. 130235, ಇದರ ಒಟ್ಟು ವಿಸ್ತೀರ್ಣ 1050.00 ಚದರ ಅಡಿಗಳ ನಿವೇಶನ ಮತ್ತು ಸದರಿ ನಿವೇಶನದಲ್ಲಿ ಕಟ್ಟಿರುವ ನೆಲ ಅಂತಸ್ತು, ಒಂದನೇ ಅಂತಸ್ತು, ಎರಡನೇ ಅಂತಸ್ತು ಹಾಗೂ ಮೂರನೇ ಅಂತಸ್ತನ್ನು ಹೊಂದಿರುವ ಕಟ್ಟಡ ಈ ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ : ಗಲ್ಲಿ , ಪಶ್ಚಿಮಕ್ಕೆ: ಗಲ್ಲಿ, ಉತ್ತರಕ್ಕೆ: ಶ್ರೀ ಯಳವಣ್ಣ ರವರಿಗೆ ಸೇರಿದ ಸ್ವತ್ತು ಮತ್ತು ದಕ್ಷಿಣಕ್ಕೆ: ರಸ್ತೆ

ಸಹಿ/– ಕೆ.ಎನ್.ಮಹಾದೇವಸ್ವಾಮಿ, ಬಿ.ಎಸ್.ಸಿ., ಎಲ್.ಎಲ್.ಬಿ., ವಕೀಲರು ಮತ್ತು ನೋಟರಿ, ನಂ.725,,727, ರೂಂ ನಂ ಎಫ್–1 ಮತ್ತು 2, ಒಂದನೇ ಮಹಡಿ, 5ನೇ ಕ್ರಾಸ್, ಅಲ್ಲಮ್ಮ ಪ್ರಭು ಕಾಂಪ್ಲೆಕ್ಸ್, ರಾಮಾನುಜ ರಸ್ತೆ ಮೈಸೂರು–570004. ಮೊ : 94482–22522, ಆಫೀಸ್ ಸಂಖ್ಯೆ:0821–4287998.



ಚಿರಸ್ಮರಣೆ



ಅರುಣ್ ಬಿ.ಆರ್
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ತಾಯಿ ಶ್ರೀಮತಿ ಕಮಲ
ಪತ್ನಿ ಶ್ರೀಮತಿ ಮಮತಾ
ಪುತ್ರರಾದ ಅರ್ಜುನ್ ಎ.ಗೌಡ, ಅಮೃತ್ ಎ.ಗೌಡ

8ನೇ ವರ್ಷದ ಪುಣ್ಯಸ್ಮರಣೆ



ಚಂದನ್ ಕುಮಾರ್ ಚೇತನ್ ಕುಮಾರ್
ನೀವು ನಮ್ಮನ್ನಗಲಿ ಇಂದಿಗೆ 8 ವರ್ಷವಾದರು
ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು: ತಾಯಿ ತಾರ ಮತ್ತು ಕುಟುಂಬಸ್ಥರು,
ಕೆಂಪಯ್ಯನಹುಂಡಿ ಗ್ರಾಮ
ಮತ್ತೆ ಹುಟ್ಟಿ ಬನ್ನಿ ಕಂದಮ್ಮಗಳೇ

ಶ್ರದ್ಧಾಂಜಲಿ




ಎಸ್.ಗೋಪಿನಾಥ್
ನಿವೃತ್ತ ಡೆಪ್ಯೂಟಿ ಕಮಿಷನರ್ ಆಫ್ ಕಮರ್ಷಿಯಲ್ ಟ್ಯಾಕ್ಸಸ್
ಇವರು ದಿ. 18.04.2022ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ ದುಃಖತಪ್ತರು:
ಪತ್ನಿ: ಸುಶೀಲಾ, ಮತ್ತು ಕುಟುಂಬವರ್ಗ

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ವೆಂಕಟೇಶ್.ಆರ್
MA, M.Phil, PhD
ಕನ್ನಡ ಉಪನ್ಯಾಸಕರು
ಜಿದರಗೂಡು (ಕೇರ್ಗಳ್ಳಿ)
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು:
ಪತ್ನಿ, ಶ್ರೀಮತಿ ಜಯಲಕ್ಷ್ಮಿ ಮತ್ತು ಮಕ್ಕಳು, ಶ್ರೀಮತಿ ಶ್ರೀ ನಾಗಣ್ಣನವರು & ಕುಟುಂಬ ಕೇರ್ಗಳ್ಳಿ
ಗ್ರಾ.ಮಾ. ರಂಗ ರಾಮಯ್ಯನವರ ಕುಟುಂಬ, ಜಿದರಗೂಡು.



ಮೊದಲನೇ ವರ್ಷದ ಪುಣ್ಯಸ್ಮರಣೆ
ಶ್ರೀಮಾನ್ ಕುಳ್ಳೇಗೌಡರು
[ಯಜಮಾನ್ ಚಿಕ್ಕೈದೇಗೌಡರ ಮಗ]
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ
ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ದುಃಖತಪ್ತರು:
ಮೃತರ ಪತ್ನಿ: ಗೌರಮ್ಮ ಮಗ ಶ್ರೀನಿವಾಸ .ಕೆ, ಸೊಸೆ ಸಂಯುಕ್ತ ,
ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಯರಗನಹಳ್ಳಿ, ಮೈಸೂರು

ಕಛೇರಿ : 08229-222226
Fax : 08229-222226. Helpline : 08229-223377
E-mail : tmc_gundlupet@yahoo.com
Website : www.gundlupettown.gov.in

ಪುರಸಭಾ ಕಾರ್ಯಾಲಯ, ಗುಂಡ್ಲುಪೇಟೆ

ಚಾಮರಾಜನಗರ ಜಿಲ್ಲೆ–571111

ಸಂಖ್ಯೆ: ಪುಗು/ಪಅ/ಪಿಆರ್/ಅಮೃತನಗರ/01/2021–22 ದಿನಾಂಕ: 19.04.2022

ಟೆಂಡರ್ ಪ್ರಕಟಣೆ (2ನೇ ಕರೆ)

(ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕೆ.ಡಬ್ಲ್ಯೂ–1 (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್) ಷರತ್ತುಗಳಿಗೆ ಒಳಪಟ್ಟಂತೆ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಆನ್‌ಲೈನ್‌ನಲ್ಲಿ ಗುತ್ತಿಗೆದಾರರು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ; 30.04.2022 ಸಂಜೆ 4.00 ವರೆಗೆ, ಟೆಂಡರ್‌ನ್ನು ತೆರೆಯುವ ದಿನಾಂಕ: 02.05.2022.

ಕಾಮಗಾರಿಗಳ ವಿವರ:

01) ಇಂಡೆಂಟ್: 128148. ಆಧುನಿಕ ಮಾದರಿಯ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಾಣ ಕಾಮಗಾರಿ. ಅಂದಾಜು ಮೊತ್ತ ರೂ. 12.00 ಲಕ್ಷ.

02) ಇಂಡೆಂಟ್: 128139. ಕೋಡಹಳ್ಳಿ ರಸ್ತೆಯ ಶೂನ್ಯ ತ್ಯಾಜ್ಯ ಘಟಕಕ್ಕೆ ಆಂತರಿಕ ರಸ್ತೆ ನಿರ್ಮಾಣ ಕಾಮಗಾರಿ. ಅಂದಾಜು ಮೊತ್ತ ರೂ. 5.00 ಲಕ್ಷ .

03) ಇಂಡೆಂಟ್: 128145. ಹೊಸೂರು ಮಲಿನ ನೀರು ಶುದ್ಧೀಕರಣ ಘಟಕಕ್ಕೆ ಆಂತರಿಕ ರಸ್ತೆ ನಿರ್ಮಾಣ ಕಾಮಗಾರಿ. ಅಂದಾಜು ಮೊತ್ತ ರೂ. 15.00 ಲಕ್ಷ.

ಮೇಲಿನ ಕಾಮಗಾರಿಗಳಿಗೆ ಕಾಲಾವಧಿ(ಮಳೆಗಾಲ ಸೇರಿ);– 04 ತಿಂಗಳು. ಮೇಲಿನ ಎಲ್ಲಾ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರ ದರ್ಜೆ:– 3ನೇ ದರ್ಜೆ ಮೇಲ್ಪಟ್ಟು. ಕಾಮಗಾರಿಗಳ ವಿವರಗಳನ್ನು www.eproc.karnataka.gov.in ಮತ್ತು ಇತರೆ ಷರತ್ತುಗಳ ಬಗ್ಗೆ ಸಂಬಂಧಪಟ್ಟ ತಾಂತ್ರಿಕ ಶಾಖೆಯಲ್ಲಿ ತಿಳಿದುಕೊಳ್ಳಬಹುದು.

ಸಹಿ/– ಪಿ.ಗಿರೀಶ್
ಅಧ್ಯಕ್ಷರು, ಪುರಸಭೆ, ಗುಂಡ್ಲುಪೇಟೆ

ಸಹಿ/– ಆರ್.ಹೇಮಂತರಾಜು, ಮುಖ್ಯಾಧಿಕಾರಿ,
ಪುರಸಭೆ, ಗುಂಡ್ಲುಪೇಟೆ.